ಕರ್ನಾಟಕ ಸರ್ಕಾರ

# ನುಡಿ ಕನ್ನಡ

## ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

# ೧೦

## ಹತ್ತನೆಯ ತರಗತಿ

©KTBS
Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ
ಬೆಂಗಳೂರು – ೫೬೦ ೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು**

**ಶ್ರೀ ಬಿ.ಎಸ್. ಗುಂಡೂರಾವ್,** ನಿವೃತ್ತ ಪ್ರಿನ್ಸಿಪಾಲರು, ಸರ್.ಎಂ.ವಿ. ಪದವಿಪೂರ್ವ ಕಾಲೇಜು, ವಿಮಾನಪುರ, ಬೆಂಗಳೂರು.

**ಸದಸ್ಯರು**

**ಡಾ. ವಿ.ಬಿ. ರಡ್ಡೇರ,** ಪ್ರಾಚಾರ್ಯರು, ಬಾಲಿಕೆಯರ ಸರ್ಕಾರಿ ಪದವಿಪೂರ್ವ ಕಾಲೇಜು, ಕೊಪ್ಪಳ.

**ಶ್ರೀ ಟಿ.ಕೆ. ಜಯಪ್ರಕಾಶ್,** ಸ.ಶಿ. ಕೆ.ಎಲ್.ಇ. ಸಂಸ್ಥೆಯ, ಶ್ರೀಮತಿ ವಿ. ನಂಜಮ್ಮ ಪ್ರೌಢಶಾಲೆ, ಮಾಲೂರು ತಾಲೂಕು.

**ಶ್ರೀಮತಿ ಎಚ್.ಸಿ. ಜಯಲಕ್ಷ್ಮೀ,** ಉಪ–ಪ್ರಾಂಶುಪಾಲರು, ಶಾರದಾ ಪದವಿಪೂರ್ವ ಕಾಲೇಜು, ಬೆಂಗಳೂರು.

**ಶ್ರೀ ಕೂ.ಗಿ. ಗಿರಿಯಪ್ಪ,** ಸ.ಶಿ. ಮಾಜಿ ಪುರಸಭೆ ಸರ್ಕಾರಿ ಪ್ರೌಢಶಾಲೆ, ಕನಕಪುರ ಪಟ್ಟಣ, ರಾಮನಗರ ಜಿಲ್ಲೆ.

**ಶ್ರೀ ಶಾಂತಪ್ಪ,** ಚಿತ್ರಕಲಾ ಶಿಕ್ಷಕರು, ಸೆಂಟ್ ಅಂಥೋನಿ ಪ್ರೌಢಶಾಲೆ, ಮೈಸೂರು – ೧೯

**ಪರಿಶೀಲಕರು**

**ಡಾ. ಎಚ್.ಎಂ. ಮಹೇಶ್ವರಯ್ಯ,** ಡೀನರು, ಕಲಾನಿಕಾಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಸಂಪಾದಕ ಮಂಡಳಿ ಸದಸ್ಯರು**

**ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು–೭೮.

**ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ ೧೩೭, ೧೨ನೆಯ ಕ್ರಾಸ್, ಜೆ.ಪಿ. ನಗರ, ಬೆಂಗಳೂರು–೭೮.

**ಡಾ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

**ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

**ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು**

**ಪ್ರೊ. ಜಿ.ಎಸ್.ಮುಡಂಬಡಿತ್ತಾಯ,** ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೫೬೦ ೦೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫

# ಮುನ್ನುಡಿ

೨೦೦೫ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗುವುದಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ

©KTBS
Not to be republished

ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ. ಹತ್ತನೇ ತರಗತಿಯ ಪಠ್ಯಪುಸ್ತಕಗಳು ಒಂದು ದೃಷ್ಟಿಯಲ್ಲಿ ವೈಶಿಷ್ಟ್ಯಪೂರ್ಣವಾಗಿವೆ. ಇತರ ಪಠ್ಯಪುಸ್ತಕಗಳಂತೆಯೇ ಈ ಪಠ್ಯಪುಸ್ತಕಗಳು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಸಹಾಯ ಮಾಡುತ್ತವೆ. ಇದರೊಂದಿಗೆ ೧೦ನೇ ತರಗತಿ ಶಿಕ್ಷಣದ ಒಂದು ಹಂತದ ಅಂತ್ಯದಾಣವಾಗಿರುವುದರಿಂದ ವಿದ್ಯಾರ್ಥಿ  ವಿದ್ಯಾರ್ಥಿನಿಯರು ಪಬ್ಲಿಕ್ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

Not to be republished ©KTBS

# ಪ್ರಸ್ತಾವನೆ

ಕನ್ನಡವನ್ನು ತೃತೀಯ ಭಾಷೆಯಾಗಿ ಅಧ್ಯಯನ ಮಾಡುವ ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಈ ಪಠ್ಯಪುಸ್ತಕವನ್ನು ಪಠ್ಯವಸ್ತುವಿನ ಪ್ರಕಾರ ತಯಾರಿಸಲಾಗಿದೆ. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳ ಹಿನ್ನೆಲೆ, ಭಾಷಾಸಾಮರ್ಥ್ಯ, ಬೋಧಕರಿಗಿರುವ ಸಮಸ್ಯೆಗಳು ಮತ್ತು ಅವರಿಂದ ಸಮಾಜ ಏನನ್ನು ನಿರೀಕ್ಷಿಸುತ್ತದೆ ಎಂಬುದನ್ನೂ ಗಮನಿಸಲಾಗಿದೆ.

ಕನ್ನಡ ಭಾಷೆಯನ್ನು ಕಲಿಯಲು ಕಲಿಸುವವರಿಗೆ ಒಂದು ಮಾತು: ತಾವು ಬೋಧಿಸುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನೂ ತೊಡಗಿಸಿಕೊಳ್ಳಿ. ಅವರು ಕಲಿಯುವಂತೆ ಪ್ರೇರೇಪಿಸಿ, ಅವರು ಕಲಿಯುತ್ತಿರುವಾಗ ಅವರಿಗೆ ಸಹಾಯ ಮಾಡಿ. ಮಕ್ಕಳು ತಾವೇ ವೈಯಕ್ತಿಕವಾಗಿ, ಜೊತೆಯಾಗಿ ಅಥವಾ ಗುಂಪುಗಳಲ್ಲಿ ಪಠ್ಯವನ್ನು ಓದಿ ಅರ್ಥಮಾಡಿಕೊಳ್ಳಲಿ. ಅದಕ್ಕೆ ನಿಮ್ಮ ಸಹಕಾರವಿರಲಿ.

ತೃತೀಯ ಭಾಷೆಯಾಗಿ ಕನ್ನಡವನ್ನು ಕಲಿಯುವ ಮಕ್ಕಳಿಗೆ ಬುದ್ಧಿಶಕ್ತಿಯ ಮತ್ತು ಅನುಭವದ ಕೊರತೆ ಇರುವುದಿಲ್ಲ. ಅವರು ಎದುರಿಸುವ ಸಮಸ್ಯೆ ಭಾಷೆಯದು. ಅದರ ಅಭಿವೃದ್ಧಿಗೆ ತಾವು ತರಗತಿಯಲ್ಲಿ ಅನುವು ಮಾಡಿಕೊಡಬೇಕಾಗಿ ಬಿನ್ನಹ. ಅವರನ್ನು ಚಟುವಟಿಕೆಗಳಲ್ಲಿ ತೊಡಗಿಸಿ ತರಗತಿಯಲ್ಲಿ ಆಲಿಸಲು, ಮಾತನಾಡಲು, ಓದಲು ಮತ್ತು ಸ್ವತಃ ಬರೆಯಲು ಅವಕಾಶ ಮಾಡಿಕೊಡಿ. ಕೇವಲ ಕೇಳುವುದಷ್ಟೇ ಅವರ ಕೆಲಸ ಆಗಬಾರದು. ಪಠ್ಯಪುಸ್ತಕದಲ್ಲಿ ಆರು ಗದ್ಯ ಮತ್ತು ಆರು ಪದ್ಯಗಳು ವಿಸ್ತೃತ ಅಧ್ಯಯನಕ್ಕೂ ಮತ್ತು ಕೊನೆಯ ಮೂರು ಘಟಕಗಳು ಪೋಷಕ ಪಠ್ಯ ಅಧ್ಯಯನಕ್ಕೂ (ಓದಿ, ಗ್ರಹಿಸಿ ಆನಂದಿಸುವುದಕ್ಕೂ) ಮೀಸಲಿವೆ. ವ್ಯಾಕರಣ ಮತ್ತು ಭಾಷಾರಚನೆಗಳನ್ನು ಆಯಾ ಪಾಠಗಳ ಜತೆಯಲ್ಲಿಯೇ ಸಮಗ್ರೀಕರಿಸಲಾಗಿದೆ.

**ಭಾಗ–೨ರಲ್ಲಿ** ಪಠ್ಯ ಪೋಷಕ ಅಧ್ಯಯನಕ್ಕಾಗಿ ಒಂದು ಹಳಗನ್ನಡ ಪದ್ಯವನ್ನು ಮತ್ತು ಒಂದೊಂದು ಲಲಿತ ಪ್ರಬಂಧವನ್ನು ಮತ್ತು ಸಣ್ಣ ಕತೆಯನ್ನೂ ಸೇರಿಸಲಾಗಿದೆ. ಶೀರ್ಷಿಕೆಯೇ ತಿಳಿಸುವಂತೆ ಇದು ಪಠ್ಯಪೋಷಕ ಅಧ್ಯಯನ: ಈ ಹಿಂದೆ ವಿಸ್ತೃತ ಪಠ್ಯಭಾಗದಲ್ಲಿ ಮಕ್ಕಳು ಕಲಿತಿರುವ ಕೌಶಲಗಳನ್ನು ಅನ್ವಯಿಸಿ ಶಿಕ್ಷಕರ ಸಹಾಯದಿಂದ ತಾವೇ ಓದಿ ಅರ್ಥಮಾಡಿಕೊಂಡು ವಿಷಯವನ್ನು ತರಗತಿಗಳಲ್ಲಿ ಗುಂಪಿನಲ್ಲಿ ಅಥವಾ ಜೊತೆಯಾಗಿ ಚರ್ಚಿಸಿ ಬರೆಯಲು ಕಲಿಯಬೇಕೆಂಬುದು ಆಶಯ. ಹಳಗನ್ನಡ ಪದ್ಯಗಳಿಗೆ ಸರಳ ಸಾರಾಂಶವನ್ನೂ ನೀಡಿದೆ. ನಿಮ್ಮ ಚಿಂತನೆಗೆ ಮೀಟುಗೋಲುಗಳಾಗಿ ವಿವಿಧ ಸ್ತರಗಳ ಪ್ರಶ್ನೆಗಳನ್ನೂ ಕೊಡಲಾಗಿದೆ. ಈ ವಿಭಾಗವನ್ನು ಸಮರ್ಥವಾಗಿ ಬಳಸಿಕೊಂಡರೆ ಮಕ್ಕಳ ಭಾಷಾ ಪ್ರೌಢಿಮೆ ವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ. ಕನ್ನಡವು ನಮ್ಮ ಉಸಿರಾಗಬೇಕೆಂಬ ಕವಿವಾಣಿಯು ನಿಜವಾಗಲೆಂದು ಈ ಪ್ರಯತ್ನದ ನಿರೀಕ್ಷೆ ಮತ್ತು ಅಪೇಕ್ಷೆ.

ಭಾಷೆಯನ್ನು ಕಲಿಯುವ/ಕಲಿಸುವ ಪ್ರಕ್ರಿಯೆಯಲ್ಲಿ ಪ್ರಶ್ನೋತ್ತರ ಮತ್ತು ಚಟುವಟಿಕೆಗಳ ಪಾತ್ರ ಹಿರಿದು. ಪ್ರಶ್ನೆಗಳಲ್ಲಿ ರೂಪವೈವಿಧ್ಯ ಇದೆ. ಕಲಿಕೆಯ ವೇಳೆಯಲ್ಲಿ ಯಾವ ರೂಪದ ಪ್ರಶ್ನೆಯನ್ನಾದರೂ ಬಳಸುವ ಸ್ವಾತಂತ್ರ್ಯವು ಕಲಿಸುವವರಿಗೆ ಇದೆ. ಪ್ರಶ್ನಾ ವೈವಿಧ್ಯವು ಮಕ್ಕಳ ಚಿಂತನ ಸಾಮರ್ಥ್ಯವನ್ನು ಬೆಳೆಸುತ್ತದೆ. ಈ ಮಾತು ಚಟುವಟಿಕೆಗಳಿಗೂ ಅನ್ವಯವಾಗುತ್ತದೆ. ಇಲ್ಲಿ ಕೊಟ್ಟಿರುವ ಪ್ರಶ್ನಾ ವಿಧಗಳು ಮತ್ತು ಚಟುವಟಿಕೆಗಳು ಕೇವಲ ಸಾಂಕೇತಿಕ. ತಮ್ಮ ಆವಶ್ಯಕತೆ ಮತ್ತು ಮಕ್ಕಳ ಸಾಮರ್ಥ್ಯವನ್ನು ಅನುಸರಿಸಿ ಹೆಚ್ಚಿನ ಚಟುವಟಿಕೆಗಳನ್ನು ಮತ್ತು ಪ್ರಶ್ನ ರೂಪಗಳನ್ನು ರಚಿಸಿ ಬಳಸುವುದು ಅಪೇಕ್ಷಣೀಯ. ಆಶಯ, ಬೋಧನಾಪೂರ್ವ ಚಟುವಟಿಕೆ, 'ಗಮನಿಸಿ' ಮತ್ತು ಚಟುವಟಿಕೆ–ಇವುಗಳ ಮೇಲೆ ಲಿಖಿತ ಪರೀಕ್ಷೆಯಲ್ಲಿ ಪ್ರಶ್ನೆಗಳು ಅಪೇಕ್ಷಣೀಯವಲ್ಲ.

ಈ ಪುಸ್ತಕದ ರಚನಾಕಾರ್ಯದಲ್ಲಿ ಪ್ರಾಂಜಲಮನಸ್ಸಿನಿಂದ ಭಾಗವಹಿಸಿ ಸಹಕರಿಸಿದ ಸಮಿತಿಯ ಸದಸ್ಯರಿಗೂ, ಮಾರ್ಗದರ್ಶನ ನೀಡಿ ಸಹಕರಿಸಿದ ಎಲ್ಲರಿಗೂ ಮತ್ತು ಇಲ್ಲಿಯ ಸಾಹಿತ್ಯವನ್ನು ಬಳಸಿಕೊಳ್ಳಲು ಸಹಕರಿಸಿದ ಲೇಖಕರಿಗೂ ಸಮಿತಿಯ ಪರವಾಗಿ ಹಾರ್ದಿಕ ವಂದನೆಗಳು.

**ಬಿ.ಎಸ್. ಗುಂಡೂರಾವ್**
ಅಧ್ಯಕ್ಷ, ನುಡಿ ಕನ್ನಡ – ೧೦
ಪಠ್ಯಪುಸ್ತಕ ರಚನಾ ಸಮಿತಿ

©KTBS
Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ.** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಪ್ರೊ. ರಹಮತ್ ತರೀಕೆರೆ.** ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

**ಸದಸ್ಯರು :**

**ಪ್ರೊ. ರುದ್ರಮುನಿ ಹಿರೇಮಠ.** ಸಹಪ್ರಾಧ್ಯಾಪಕರು, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸರಸ್ವತಿ ಬಡಾವಣೆ, ದಾವಣಗೆರೆ.

**ಶ್ರೀ. ಮಹದೇವಸ್ವಾಮಿ.ಬಿ.** ಕನ್ನಡ ಅಧ್ಯಾಪಕರು, ಎ.ಪಿ.ಎಸ್. ಗ್ರಾಮಾಂತರ ಪ್ರೌಢಶಾಲೆ, ಸೋಮನಹಳ್ಳಿ, ಬೆಂಗಳೂರು-೮೨

**ಶ್ರೀಮತಿ ಪದ್ಮ,** ಎ. ಕನ್ನಡ ಅಧ್ಯಾಪಕಿ, ಎಂ.ಎಲ್.ಎ ಪ್ರೌಢಶಾಲೆ, ೧೫ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು-೦೩

**ಶ್ರೀ. ರಾಜುಶೆಟ್ಟಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ.ಪೂ.ಕಾಲೇಜು, (ಪ್ರೌಢಶಾಲೆ ವಿಭಾಗ)ಹೊಮ್ಮರಹಳ್ಳಿ, ಹೆಚ್.ಡಿ.ಕೋಟೆ, ತಾ,

**ಶ್ರೀ. ಜವರೇಗೌಡ.** ಕನ್ನಡ ಅಧ್ಯಾಪಕರು, ಶ್ರೀ ವಿದ್ಯಾಗಣಪತಿ ಪ್ರೌಢಶಾಲೆ, ಬಿದರಕೋಟೆ, ಮದ್ದೂರು ತಾ, ಮಂಡ್ಯ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್.** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕೆಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ , ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು, ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ,** ಎಚ್.ಎಸ್. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ. ಗೋಪಾಲಕೃಷ್ಣ ಹೆಚ್.ಎನ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಶ್ರೀ ಕೆ.ಜಿ.ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು :**

**ಎ. ಚಂದ್ರಶೇಖರ ಬಾಬು,** ಹಿರಿಯ ಸಹಾಯಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

©KTBS Not to be republished

# ಪರಿಷ್ಕರಣೆ ಕುರಿತು.

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

©KTBS Not to be republished

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**(ಗೋಪಾಲಕೃಷ್ಣ ಹೆಚ್.ಎನ್)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

©KTBS
Not to be republished

# ಪರಿವಿಡಿ


| ಭಾಗ–೧ ಪಠ್ಯ ಪ್ರಧಾನ ಅಧ್ಯಯನ ಗದ್ಯ – ಪದ್ಯ | | | | |
|---|---|---|---|---|
| ಕ್ರಮ ಸಂಖ್ಯೆ | ಪಠ್ಯದ ಹೆಸರು | ಪ್ರಕಾರ | ಕೃತಿಕಾರರ ಹೆಸರು | ಪುಟ ಸಂಖ್ಯೆ |
| ೧ | ಲಾಕಪ್ಪಿನಲ್ಲಿ ಒಂದು ರಾತ್ರಿ | ಗದ್ಯ | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ೦೧ |
| ೨ | ಕಟ್ಟತೇವ ನಾವು | ಪದ್ಯ | ಸತೀಶ ಕುಲಕರ್ಣಿ | ೧೦ |
| ೩ | ಕೊಡಗಿನ ಗೌರಮ್ಮ | ಗದ್ಯ | ಮ.ನ. ಮುಕ್ತಾಯಿ | ೧೪ |
| ೪ | ಭೂಮಿತಾಯ ಕುಡಿಗಳು | ಪದ್ಯ | ಕೆ.ಎಸ್. ನಿಸಾರ್ ಅಹಮದ್ | ೨೪ |
| ೫ | ಶಿಶುನಾಳ ಶರೀಫ ಸಾಹೇಬರು | ಗದ್ಯ | ಆರ್.ಎಸ್. ಸುಂಕದ | ೩೦ |
| ೬ | ಗ್ರಂಥಾಲಯದಲ್ಲಿ | ಪದ್ಯ | ಸಿ.ಪಿ.ಕೆ. | ೪೨ |
| ೭ | ಧ್ವಜರಕ್ಷಣೆ | ಗದ್ಯ | ಎಸ್.ಆರ್. ರೋಹಿಡೇಕರ್ | ೪೬ |
| ೮ | ಬಸವಣ್ಣನವರ ವಚನಗಳು | ಪದ್ಯ | ಬಸವಣ್ಣ | ೫೬ |
| ೯ | ಕರ್ನಾಟಕದ ವೀರವನಿತೆಯರು | ಗದ್ಯ | ವಿಜಯಲಕ್ಷ್ಮಿ ಬಾಳೇಕುಂದ್ರಿ | ೬೧ |
| ೧೦ | ಉದರ ವೈರಾಗ್ಯ | ಪದ್ಯ | ಪುರಂದರದಾಸರು | ೭೨ |
| ೧೧ | ನನ್ನ ಪುಸ್ತಕ ಪ್ರಪಂಚ | ಗದ್ಯ | – ಬೀchi | ೭೮ |
| ೧೨ | ಜನಪದ ಗೀತೆ | ಪದ್ಯ | ಜನಪದ | ೯೦ |
| ಭಾಗ ೨ ಪಠ್ಯ ಪೂರಕ ಅಧ್ಯಯನ | | | | |
| ೧ | ಹೀಗೊಂದು ಟಾಪ್ ಪ್ರಯಾಣ | ಗದ್ಯ | ಈರಪ್ಪ ಎಂ. ಕಂಬಳಿ | ೯೪ |
| ೨ | ಸೋಮೇಶ್ವರ ಶತಕ (ಹಳಗನ್ನಡ) | ಪದ್ಯ | ಪುಲಿಗೆರೆ ಸೋಮನಾಥ | ೯೮ |
| ೩ | ಮಹಾಶಿಲ್ಪಿ | ಗದ್ಯ | ಪ್ರೇಮಾ ಭಟ್ | ೧೦೦ |


©KTBS Not to be republished

# ೧. ಲಾಕಪ್ಪಿನಲ್ಲಿ ಒಂದು ರಾತ್ರಿ

**– ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಪ್ರವೇಶ:** 'ದೇಶ ಸುತ್ತು ಕೋಶ ಓದು' ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಲೋಕದ ವಿಸ್ಮಯಗಳನ್ನು ತಿರುಗಾಟದ ಮೂಲಕ ಕಾಣಬಯಸುವ ಎಲ್ಲರಿಗೂ ಪ್ರವಾಸ ಇಷ್ಟವಾಗುತ್ತದೆ. ಪ್ರವಾಸದಿಂದ ದೇಶ ವಿದೇಶಗಳ ನಂಬಿಕೆ, ಆಚಾರ, ವಿಚಾರ, ಭಾಷೆ, ಊಟ, ಉಡುಗೆಗಳ ಪರಿಚಯವಾಗುತ್ತದೆ. ಬೇರೆಬೇರೆ ಜನರ ಸ್ವಭಾವ ಅರ್ಥವಾಗುತ್ತದೆ. ಪ್ರವಾಸಗಳನ್ನು ಕೈಗೊಂಡು ನಮ್ಮ ಅನುಭವ ಮತ್ತು ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ನಾವು ಕೈಗೊಂಡ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳಬಹುದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರವಾಸ ಕಥನಗಳಿಗೆ ವಿಶೇಷ ಸ್ಥಾನವಿದೆ. ಪ್ರವಾಸ ಕಥನಕಾರರಲ್ಲಿ ಶಿವರಾಮ ಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ವಿ.ಕೃ. ಗೋಕಾಕ್, ಜಿ.ಎಸ್. ಶಿವರುದ್ರಪ್ಪ, ನೇಮಿಚಂದ್ರ ಮುಂತಾದವರು ಪ್ರಮುಖರು.

ಅಮೆರಿಕಾ ದೇಶಕ್ಕೆ ಹೋಗಿ ಬಂದ ಅನುಭವಗಳನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ 'ಅಮೆರಿಕಾದಲ್ಲಿ ಗೊರೂರು' ಕೃತಿಯಲ್ಲಿ ಬರೆದಿದ್ದಾರೆ. ಪ್ರಸ್ತುತ ಪಾಠದಲ್ಲಿ ಅಮೇರಿಕಾದ ಮಿನಿಪೊಲೀಸ್ ನಗರದಲ್ಲಿ ತಮಗಾದ ಅನುಭವವನ್ನು ವಿನೋದದ ಧಾಟಿಯಲ್ಲಿ ಹಂಚಿಕೊಂಡಿದ್ದಾರೆ.

©KTBS Not to be republished

ನಾನು ಮಿನಿಪೊಲೀಸ್ ನಗರಕ್ಕೆ ಒಬ್ಬ ಮಿತ್ರರನ್ನು ನೋಡಲು ಹೋಗಿದ್ದಾಗ ಒಂದು ರಾತ್ರಿ ಅಮೇರಿಕಾದ ಲಾಕಪ್‌ನಲ್ಲಿರಬೇಕಾಯಿತು. ನಾನು ನೋಡಲು ಹೋದವರು ಇರಲಿಲ್ಲ. ಅವರ ಪರಿಚಿತರೊಬ್ಬರು ಸಿಕ್ಕಿ ನನ್ನನ್ನು ಮೋಟಾರಿನಲ್ಲಿ ಕೂರಿಸಿಕೊಂಡು ತಮ್ಮ ಕೆಲಸದ ಮೇಲೆ ಹೊರಟಾಗ, ನಾನು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು ಅವರು ಅದೇ ದಾರಿಯಲ್ಲಿ ಹಿಂದಿರುಗುವಾಗ ರಾತ್ರಿ ೨ ಗಂಟೆಗೆ ನನ್ನನ್ನು ಕರೆದುಕೊಂಡು ಹೋಗಬೇಕೆಂದು ಹೇಳಿದ್ದೆ. ದೀಪ ಹೊತ್ತಿದ ಮೇಲೆ ನಾನು ನಗರದಲ್ಲಿ ಅಲ್ಲಲ್ಲಿ ಸುತ್ತುತ್ತ ನನಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲ ನೋಡುತ್ತ ಮಿತ್ರರು ಬಂದು ನನ್ನನ್ನು ಕರೆದುಕೊಂಡು ಹೋಗಲು ಗೊತ್ತುಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಆಚೆ ಈಚೆ ಹೊರಟುಹೋದೆ. ಅನಂತರ ಏನು ಮಾಡಿದರೂ ನನ್ನ ಸ್ಥಳ ಸಿಕ್ಕಲಿಲ್ಲ. ಹೀಗೆ ತಿರುಗಾಟದಲ್ಲಿ ರಾತ್ರಿ ೯ ಗಂಟೆ ಆಗಿಹೋಯಿತು. ನನ್ನ ಜೇಬಿನಲ್ಲಿ ಒಂದು ರಿಟರ್ನ್ ಟಿಕೆಟ್ ಮತ್ತು ೨ ಡಾಲರು ಮಾತ್ರವಿತ್ತು. ರಾತ್ರಿ ಶೀತ ತಣ್ಣಗೆ ಪ್ರಾರಂಭವಾಗಿತ್ತು. ನನ್ನ ಹತ್ತಿರ ಇದ್ದ ಬೆಚ್ಚಗಿನ ಬಟ್ಟೆ ಎಂದರೆ ಒಂದು ಶಾಲು ಮತ್ತು ಮೊಣಕೈ ಹತ್ತಿರ ಹರಿದಿದ್ದ ಒಂದು ಖಾದಿ ಉಣ್ಣೆ ಜುಬ್ಬ. ಬೆಳಗಿನ ವೇಳೆಗೆ ಕೈಕಾಲು ಕೊರಡಾಗಬಹುದೆಂದು ಯೋಚಿಸಿದೆ. ನಮ್ಮಲ್ಲಿಯಂತೆ ಛತ್ರವೇ, ಧರ್ಮಶಾಲೆಯೇ, ದೇವಾಲಯವೇ, ತೋಪೇ, ಸಾರ್ವಜನಿಕ ಚಾವಡಿಯೇ, ಅಂಗಡಿ ಬಾಗಿಲೇ, ಸಮಶೀತ ವಾತಾವರಣವೇ? ರೈಲ್ವೆ ಸ್ಟೇಷನ್, ವಿಮಾನ ನಿಲ್ದಾಣವೇ? (ಅಲ್ಲಿ ಹೋದರೂ ಅಲೆಮಾರಿ vagabond ಎಂದು ಲಾಕಪ್‌ಗೆ ಹಾಕುತ್ತಾರೆ).

ಹೀಗೆ ಅಲೆಯುತ್ತಿರುವಾಗ ನನ್ನ ಕಣ್ಣಿಗೆ ಒಬ್ಬ ಟ್ರಾಫಿಕ್ ಪೋಲೀಸಿನವ ಬಿದ್ದ. ಆಗತಾನೇ ಅವನ ಕರ್ತವ್ಯ ಮುಗಿದಿತ್ತು. ನಾನು ಅವನಿಗೆ ನನ್ನ ಸಮಸ್ಯೆಯನ್ನು ವಿವರಿಸಿದೆ. ನಾನು ದಾರಿ ತಪ್ಪಿ ತಿರುಗಿರುವುದರಿಂದ ನನ್ನ ಮಿತ್ರನಿಗೆ ಸಿಕ್ಕಿಲ್ಲ ಎಂಬುದು ಅರ್ಥವಾಯಿತು. ಅವರ ವಿಳಾಸ ನನ್ನಲ್ಲಿರಲಿಲ್ಲ. ಇನ್ನೊಂದು ವಿಳಾಸವಿದ್ದ ನನ್ನ ಕೈಚೀಲ ಅವರ ಕಾರಿನಲ್ಲಿ ಉಳಿದಿತ್ತು. ಹೋಟಲಿನಲ್ಲಿ ಉಳಿದುಕೊಳ್ಳಲು ಒಂದು ರಾತ್ರಿಗೆ ೨೫ ಡಾಲರು


ನನ್ನಲ್ಲಿರಲಿಲ್ಲ. ಐದು ಡಾಲರಿನ ಹೋಟಲು ಕೊಠಡಿಗಳೂ ಇವೆ. ಅವುಗಳಾವುವೂ ಖಾಲಿ ಇರಲಿಲ್ಲ. ಪೊಲೀಸಿನವನು "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈ ಬಿಡುವಂತಿಲ್ಲ. ನನ್ನ ಮನೆಗೆ ಹೋಗೋಣ ನಡೆಯಿರಿ. ಇಲ್ಲಿಗೆ ಏಳು ಮೈಲಿ" ಎಂದು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್‌ಗಳಿಂದ ರಾತ್ರಿ ಊಟವಾಯಿತು. ಆಪತ್ಕಾಲೇ ತು ಸಂಪ್ರಾಪ್ತೇ ಯನ್ಮಿತ್ರಂ ಮಿತ್ರಮೇವ ತತ್ (ಕಷ್ಟ ಬಂದಾಗ ಯಾರು ಸ್ನೇಹಿತನೋ ಅವನೇ ಮಿತ್ರ).



ಊಟವಾದ ನಂತರ ಪೊಲೀಸಿನವ "ನಮ್ಮ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿದೆ. ನೀವು ಏನೂ ತಿಳಿದುಕೊಳ್ಳದಿದ್ದರೆ, ಮಗ್ಗಲಲ್ಲಿ ನನ್ನ ವಶದಲ್ಲಿಯೇ ಒಂದು ಲಾಕಪ್ ಇದೆ. ಗಾಳಿ ಬೆಳಕು ಸ್ವಚ್ಛವಾದ ಹಾಸಿಗೆ, ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ. ಅಲ್ಲಿ ಮಲಗಿಬಿಡಿ. ನಿಮಗೆ ಸೊಗಸಾದ ನಿದ್ರೆ ಬರುತ್ತೆ. ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ" ಎಂದನು. ನಾನೂ "ಪೊಲೀಸಿನವರ ಸಹವಾಸವಾದ ಮೇಲೆ ಲಾಕಪ್ ಆಗಲೇ ಬೇಕಷ್ಟೇ" ಎಂದೆ. ಪೊಲೀಸಿನವನು ಭಾರತದ ಪೊಲೀಸರ ಸಂಬಳ, ಸಾರಿಗೆ ವಿಷಯ ಕೇಳಿದ. "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ. ಇಲ್ಲಿ ಎಲ್ಲ ಪೊಲೀಸರೂ ಹಾಗೆಯೇ" ಎಂದನು. ರಾತ್ರಿ ಸೊಗಸಾದ ನಿದ್ರೆ ಬಂತು. ಬೆಳಗಾದ ನಂತರ ನಮ್ಮ ಮಿತ್ರರ ಮನೆಯೂ ದೊರಕಿತು.

©KTBS Not to be republished

## ಕೃತಿಕಾರರ ಪರಿಚಯ



ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ೧೯೦೪ನೇ ಜುಲೈ ೪ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಗಾಂಧೀಜಿಯವರಿಂದ ಪ್ರಭಾವಿತರಾಗಿ ವಿದ್ಯಾಭ್ಯಾಸಕ್ಕೆ ವಿದಾಯ ಹೇಳಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು. ಶ್ರೀಯುತರು ೬೦ಕ್ಕೂ ಹೆಚ್ಚು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. 'ನಮ್ಮ ಊರಿನ ರಸಿಕರು', 'ಗರುಡಗಂಬದ ದಾಸಯ್ಯ', 'ಹೇಮಾವತಿ', 'ಮೆರವಣಿಗೆ', 'ಅಮೆರಿಕಾದಲ್ಲಿ ಗೊರೂರು', 'ಬೂತಯ್ಯನ ಮಗ ಅಯ್ಯು' ,'ಹಳ್ಳಿಯ ಹಾಡು' ಇವು ಇವರ ಪ್ರಮುಖ ಕೃತಿಗಳಾಗಿವೆ. ಇವರಿಗೆ ೧೯೬೯ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೭೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್. ಪದವಿ, ೧೯೮೦ರಲ್ಲಿ 'ಅಮೆರಿಕಾದಲ್ಲಿ ಗೊರೂರು' ಪ್ರವಾಸ ಸಾಹಿತ್ಯ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. ಗೊರೂರರು ೧೯೮೨ರಲ್ಲಿ ಶಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶ್ರೀಯುತರು ೨೮ನೆಯ ಸೆಪ್ಟೆಂಬರ್ ೧೯೯೧ರಂದು ನಿಧನರಾದರು.

'ಲಾಕಪ್ಪಿನಲ್ಲಿ ಒಂದು ರಾತ್ರಿ' ಗದ್ಯಭಾಗವನ್ನು ಇವರ **'ಅಮೆರಿಕಾದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ಉಣ್ಣೆ–ಕುರಿಯ ತುಪ್ಪಳ;

ಕ್ರಿಮಿನಾಶಕ–ಕ್ರಿಮಿಗಳನ್ನು ಕೊಲ್ಲುವ ಔಷಧಿ;

ಕೊರಡಾಗು–ಮರಗಟ್ಟು;

ಚಾವಡಿ–ಹಳ್ಳಿಯಲ್ಲಿ ಪಂಚಾಯಿತಿ ಸಭೆ ಸೇರುವ ಸ್ಥಳ, ಮನೆಯ ಮುಂದಿನ ಜಗಲಿ;

ಛತ್ರ–ಉಚಿತವಾಗಿ ಊಟ, ವಸತಿಗಳನ್ನು ಒದಗಿಸುತ್ತಿದ್ದ ಸ್ಥಳ;

ಟ್ರಾಫಿಕ್–ಸಂಚಾರ;

ಡಾಲರ್–ಅಮೆರಿಕಾದಲ್ಲಿ ಚಲಾವಣೆಯಲ್ಲಿರುವ ನಾಣ್ಯ;

ತೋಪು–ಮರಗಳ ಗುಂಪು;

ಮೈಲಿ–ದೂರವನ್ನು ಅಳೆಯುವ ಒಂದು ಮಾನ;

ರಿಟರ್ನ್ ಟಿಕೆಟ್–ವಾಪಸಾಗಲು ತೆಗೆದುಕೊಳ್ಳುವ ಮುಂಗಡ ಟಿಕೆಟ್;

ಲಾಕಪ್–ಪೊಲೀಸ್ ಠಾಣೆಯಲ್ಲಿ ಖೈದಿಗಳನ್ನು ಕೂಡಿಡುವ ಸ್ಥಳ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಬೆಳಗಾಗುವ ವೇಳೆಗೆ ಕಾಲು ಕೊರಡಾಗಬಹುದೆಂಬ ಭಾವನೆಯು ಗೊರೂರರ ಮನಸ್ಸಿಗೆ ಏಕೆ ಬಂದಿತು?

೨. ಭಾರತದಲ್ಲಿರುವ ಅಲೆಮಾರಿಗಳು ರಾತ್ರಿವೇಳೆಯಲ್ಲಿ ತಂಗಲು ಇರುವ ಸ್ಥಳಗಳಾವುವು?

೩. ಅಮೆರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿವೇಳೆ ತಂಗುವಂತಿಲ್ಲ ಏಕೆ?

೪. ಮಿನಿಪೊಲೀಸ್ ನಗರದಲ್ಲಿ ದಾರಿತಪ್ಪಿದ ಗೊರೂರರು ರಾತ್ರಿ ಕಳೆಯಲು ಹೋಟೆಲ್ಲಿಗೆ ಹೋಗಲಾಗಲಿಲ್ಲ ಏಕೆ?

೫. ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು?

೨. ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು?

೩. ಗೊರೂರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಬೇಕಾಯಿತು, ಏಕೆ?

೪. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳು ಯಾವುವು? ವಿವರಿಸಿರಿ.

೨. ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಲೇಖಕರು ಪಾರಾದುದು ಹೇಗೆ? ವಿವರಿಸಿರಿ.

೩. ಗೊರೂರು ರಾಮಸ್ವಾಮಿ ಅಯ್ಯಂಗಾರರ ಹಾಸ್ಯ ಪ್ರವೃತ್ತಿಯನ್ನು 'ಲಾಕಪ್ಪಿನಲ್ಲಿ ಒಂದು ರಾತ್ರಿ' ಗದ್ಯದ ಆಧಾರದಿಂದ ವಿವರಿಸಿರಿ.

೪. ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ) ಕೆಳಗಿನ ಸಂದರ್ಭಗಳನ್ನು ಸ್ವಾರಸ್ಯದೊಂದಿಗೆ ಬರೆಯಿರಿ.**

೧. "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈ ಬಿಡುವಂತಿಲ್ಲ".

೨. "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ".

೩. "ಪೊಲೀಸ್‌ನವರ ಸಹವಾಸವಾದ ಮೇಲೆ ಲಾಕಪ್ ಆಗಲೇ ಬೇಕಷ್ಟೆ".

೪. "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ".

©KTBS Not to be republished

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.**

ದೇವಾಲಯ, ದೀಪಾಲಂಕಾರ, ಧರ್ಮಾರ್ಥ, ಊಟವಾಯಿತು, ರಕ್ಷಣೆಯನ್ನು, ಬೇಕಷ್ಟೇ, ಅರಿವಿಲ್ಲ. ವಾರಕ್ಕೆರಡು, ಸ್ವಚ್ಛವಾದ, ನನ್ನಲ್ಲಿ.

**ಆ) 'ಲಾಕಪ್ಪಿನಲ್ಲಿ ಒಂದು ರಾತ್ರಿ' ಗದ್ಯಭಾಗದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.**

ಉದಾ: ಪೊಲೀಸ್

**ಇ) ಪದಗಳ ವಿರುದ್ಧಾರ್ಥಕ ರೂಪ ಬರೆಯಿರಿ.**

ಪರಿಚಿತ, ಹಗಲು, ಧರ್ಮ, ಮಿತ್ರ, ಬೆಳಕು.

**ಈ) ಕೆಳಗೆ ಕೊಟ್ಟಿರುವ ಪದಗಳ ಬಹುವಚನರೂಪ ಬರೆಯಿರಿ.**

ಕಣ್ಣು, ಮರ, ಕಾರು, ನಗರ, ಮನೆ, ದಿನ, ಮಿತ್ರ, ದೀಪ.

**ಉ) ಕೆಳಗೆ ಕೊಟ್ಟಿರುವ ಪದಗಳ ಲಿಂಗವನ್ನು ಹೆಸರಿಸಿ.**

ಹುಡುಗಿ, ಅಣ್ಣ, ಹುಡುಗ, ಕವಯಿತ್ರಿ, ರಾಮ.

**ಊ) ಕೆಳಗೆ ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ಅಮೆರಿಕ, ಕರ್ತವ್ಯ, ದೇವಾಲಯ, ಡಾಲರ್, ರಕ್ಷಣೆ, ಕ್ರಿಮಿನಾಶಕ.

**ಋ) ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಗೊರೂರರು ಅಮೇರಿಕಾದಲ್ಲಿ ಮಿತ್ರರನ್ನು ನೋಡಲು ಹೋಗಿದ್ದ ಸ್ಥಳದ ಹೆಸರು__________

೨. ಮಿನಿಪೊಲೀಸ್ ನಗರದಲ್ಲಿ ದಾರಿ ತಪ್ಪಿದ ಗೊರೂರರಿಗೆ ರಾತ್ರಿ ಆಶ್ರಯ ನೀಡಿದಾತ__________

೩. ಮಿನಿಪೊಲೀಸ್ ನಗರದಲ್ಲಿ ಗೊರೂರರ ಜೇಬಿನಲ್ಲಿ ಎರಡು ಡಾಲರ್ ಜೊತೆಗೆ ಇದ್ದುದು__________

೪. ಮಿನಿಪೊಲೀಸ್ ನಗರದ ಲಾಕಪ್ಪನ್ನು ಸಾರಣೆ ಮಾಡಲು ಬಳಸುತ್ತಿದ್ದ ವಸ್ತು__________

೫. ಗೊರೂರರು ಬರೆದಿರುವ ಪ್ರವಾಸ ಕಥನದ ಹೆಸರು__________

## ಭಾಷಾ ಚಟುವಟಿಕೆ

೧. ನೀವು ಭಾಗವಹಿಸಿದ ಶಾಲಾ ಪ್ರವಾಸವನ್ನು ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

೨. 'ದೇಶ ಸುತ್ತು : ಕೋಶ ಓದು' ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

೩. ಪ್ರವಾಸ ಕಥನಗಳ ಹೆಸರನ್ನು ಅವುಗಳ ಲೇಖಕರ ಹೆಸರುಗಳೊಂದಿಗೆ ಸಂಗ್ರಹಿಸಿ ಬರೆಯಿರಿ.

©KTBS Not to be republished

## ವ್ಯಾಕರಣ

ಜಗತ್ತಿನಲ್ಲಿ ಮನುಷ್ಯರ ನಡುವಣ ವ್ಯವಹಾರಗಳು ಭಾಷೆಗಳ ಮೂಲಕ ನಡೆಯುತ್ತವೆ. ಅಂದರೆ ಪರಸ್ಪರ ಮಾತು ಮತ್ತು ಬರವಣಿಗೆಯಿಂದ ನಡೆಯುತ್ತವೆ. ನಮ್ಮ ಮನಸ್ಸಿನ ವಿಚಾರಗಳನ್ನು ಮಾತಿನ ಮೂಲಕ ಇನ್ನೊಬ್ಬರಿಗೆ ತಿಳಿಯಪಡಿಸಬಹುದು. ನಮ್ಮ ಮಾತುಗಳನ್ನು ಗೊತ್ತಾದ ಲಿಪಿಯ ಮೂಲಕ ದಾಖಲಿಸುವುದೇ ಬರವಣಿಗೆ. ಮಾತು ಮತ್ತು ಬರಹಗಳು ಭಾಷೆಯ ಎರಡು ರೂಪಗಳು.

ಬರೆಯುವುದೂ ಮಾತನಾಡುವುದೂ ಮುಖ್ಯವಾಗಿ ಶಬ್ದಗಳ ಮೂಲಕ ನಡೆಯುವ ಸಂಹವನ ಕ್ರಿಯೆ. ಒಂದೊಂದು ಶಬ್ದಕ್ಕೂ ಒಂದೊಂದು ಅರ್ಥವಿದೆ. ಶಬ್ದಗಳ ಉಚ್ಚಾರವಾಗಲಿ ಬರವಣಿಗೆಯಾಗಲಿ ಅರ್ಥಪೂರ್ಣವಾಗಿರಬೇಕು. ಮಾತನಾಡುವುದು, ಬರೆಯುವುದು ಸ್ಪಷ್ಟವಾಗಿರಬೇಕು; ಶಬ್ದ ಮತ್ತು ಶಬ್ದಗಳ ಸಂಬಂಧ ಹೀಗೆ ಇರಬೇಕೆಂಬುದನ್ನು ವ್ಯಾಕರಣ ಶಾಸ್ತ್ರವು ಗೊತ್ತುಪಡಿಸುವುದು. ಮನಸ್ಸಿಗೆ ಬಂದ ಹಾಗೆ ಭಾಷೆಯನ್ನು ಬಳಸುತ್ತ ಹೋದರೆ ಕಾಲಾನಂತರದಲ್ಲಿ ಭಾಷೆಯ ಸ್ವರೂಪವೇ ಹಾಳಾಗಿ ಹೋಗಬಹುದು. ಹೀಗಾಗಿ ಭಾಷೆಯನ್ನು ಸ್ಪಷ್ಟವಾಗಿ ಬಳಸುವ ಮೂಲಕ ನಾಡಿನ ಮಕ್ಕಳು ಸುಸಂಸ್ಕೃತರಾಗಬೇಕು.

ನಾವು ಆಡುವ ಮಾತುಗಳೆಲ್ಲ ವಾಕ್ಯದ ರೂಪದಲ್ಲಿರುತ್ತವೆ. ವಾಕ್ಯಗಳು ಪದಗಳಿಂದ ಕೂಡಿರುತ್ತವೆ. ಪದಗಳು ಅಕ್ಷರಗಳಿಂದ ಕೂಡಿರುತ್ತವೆ. ಕನ್ನಡ ಭಾಷೆಯಲ್ಲಿರುವ ೪೯ ಅಕ್ಷರಗಳ ಮಾಲೆಗೆ 'ಅಕ್ಷರಮಾಲೆ' ಅಥವಾ 'ವರ್ಣಮಾಲೆ' ಎನ್ನುತ್ತೇವೆ. ಹಿಂದಿನ ತರಗತಿಗಳಲ್ಲಿ ಸ್ವರ ಮತ್ತು ವ್ಯಂಜನಗಳ ಬಗೆಗೆ ಕೂಲಂಕಷವಾಗಿ ತಿಳಿದಿರುವಿರಿ.

### ಕನ್ನಡ ಅಕ್ಷರಮಾಲೆ
**೪೯ ಅಕ್ಷರಗಳು**

- **ಸ್ವರಗಳು–೧೩**
  - ಹ್ರಸ್ವಸ್ವರ–೬ (೧ಮಾತ್ರೆಯ ಕಾಲ): ಅ ಇ ಉ ಋ ಎ ಒ
  - ದೀರ್ಘಸ್ವರ–೭ (೨ ಮಾತ್ರೆಯ ಕಾಲ): ಆ ಈ ಊ ಏ ಐ ಓ ಔ
- **ವ್ಯಂಜನಗಳು–೩೪**
  - ವರ್ಗೀಯ ವ್ಯಂಜನ–೨೫ ('ಕ್' ದಿಂದ 'ಮ್' ದವರೆಗೆ)
    - ಅಲ್ಪಪ್ರಾಣ–೧೦: ಕ್ ಚ್ ಟ್ ತ್ ಪ್ / ಗ್ ಜ್ ಡ್ ದ್ ಬ್
    - ಮಹಾಪ್ರಾಣ–೧೦: ಖ್ ಛ್ ಠ್ ಥ್ ಫ್ / ಘ್ ಝ್ ಢ್ ಧ್ ಭ್
    - ಅನುನಾಸಿಕ–೦೫: ಙ್ ಞ್ ಣ್ ನ್ ಮ್
  - ಅವರ್ಗೀಯ ವ್ಯಂಜನ– ೯ ('ಯ್'ದಿಂದ'ಳ' ದವರೆಗೆ): ಯ್ ರ್ ಲ್ ವ್ ಶ್ ಷ್ ಸ್ ಹ್ ಳ್
- **ಯೋಗವಾಹ–೨**
  - ಅನುಸ್ವಾರ(ಂ) ಅಂ
  - ವಿಸರ್ಗ(ಃ) ಅಃ

**ಸ್ವರ, ವ್ಯಂಜನ, ಯೋಗವಾಹಗಳು ಸೇರಿ ಕನ್ನಡ ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ.**

©KTBS Not to be republished

**ಪ್ಲುತ ಸ್ವರಗಳು** : ಎರಡು ಮಾತ್ರಾ ಕಾಲಾವಧಿಗಿಂತ ಹೆಚ್ಚು ಕಾಲಾವಧಿಯಲ್ಲಿ ಉಚ್ಚರಿಸಲ್ಪಡುವ ಸ್ವರಗಳನ್ನು ಪ್ಲುತ ಸ್ವರಗಳೆನ್ನುವರು. ಉದಾ: ಆss ಓss

**ಯೋಗವಾಹಗಳು**: ಸ್ವತಂತ್ರವಾಗಿ ಪ್ರಯೋಗಿಸಲಾಗದೆ, ಯಾವುದಾದರು ಸ್ವರದೊಂದಿಗೆ ಮಾತ್ರ ಪ್ರಯೋಗ ಮಾಡಬಹುದಾದ ಅಕ್ಷರಗಳೇ 'ಯೋಗವಾಹ'ಗಳು. ಯೋಗವಾಹ ಎಂದರೆ 'ಕೂಡಿಹೋಗು' ಎಂದರ್ಥ. ಕನ್ನಡ ವರ್ಣಮಾಲೆಯಲ್ಲಿ ಎರಡು ಯೋಗವಾಹಗಳು ಬಳಕೆಯಲ್ಲಿವೆ.

ಮೊದಲನೆಯದು–ಅನುಸ್ವಾರ/ಬಿಂದು(ಒಂದು ಸೊನ್ನೆ) (ಂ); ಎರಡನೆಯದು–ವಿಸರ್ಗ(ಎರಡು ಸೊನ್ನೆ) (ಃ).

## ಅನುಸ್ವಾರವನ್ನು ಬಳಸುವ ರೀತಿ

**ಸ್ವರಗಳೊಡನೆ ಅನುಸ್ವಾರ:**

ಅಂ, ಇಂ, ಉಂ, ಔಂ, ಓಂ– ಹೀಗೆ ಸ್ವರದ ಮುಂದೆ ಅನುಸ್ವಾರ ಬಂದಾಗ 'ಮ್'ಕಾರಕ್ಕೆ ಸಮೀಪವಾದ ಉಚ್ಚಾರವು ಬರುತ್ತದೆ.

**ಪದಗಳ ಮಧ್ಯದಲ್ಲಿ ಅನುಸ್ವಾರ:**

ಉದಾ: ಅಂಕ, ಕಂದ, ಆಂಧ್ರ, ಕಾಂಚನ, ಇಂಗು, ಕಿಂಪುರುಷ, ಉಂಡೆ, ಕುಂಕುಮ, ಎಂದು, ಕೆಂಪು, ಒಂದು, ಕೊಂಚ, ಓಂಕಾರ, ಕೋಂಟೆ, ಕೌಂಗು, ಕೌಂತೇಯ.

ಕನ್ನಡದಲ್ಲಿ ಪದದ ಮಧ್ಯದಲ್ಲಿ ಬರುವ ಅನುನಾಸಿಕ ಮೂಲ ವ್ಯಂಜನಗಳ (ಅರ್ಧಾಕ್ಷರಗಳು– ಙ್, ಞ್, ಣ್, ನ್, ಮ್) ಬದಲು ಅನುಸ್ವಾರವನ್ನು ಬಳಸುತ್ತೇವೆ. ಅನುಸ್ವಾರದ ಮುಂದೆ ವರ್ಗೀಯ ವ್ಯಂಜನಗಳು ಬಂದರೆ ಆ ವ್ಯಂಜನವು ಯಾವ ವರ್ಗಕ್ಕೆ ಸೇರಿರುತ್ತದೆಯೋ ಅದೇ ವರ್ಗದ ಅನುನಾಸಿಕಾಕ್ಷರದ ಉಚ್ಚಾರವು ಬರುತ್ತದೆ. ಅನುಸ್ವಾರದ ಮುಂದೆ ಅವರ್ಗೀಯ ವ್ಯಂಜನಗಳು ಬಂದಾಗ 'ಮ್'ಕ್ಕೆ ಸಮೀಪವಾದ ಉಚ್ಚಾರವೇ ಬರುತ್ತದೆ.

ಉದಾ:

ಕಙ್ಕಣ = ಕಂಕಣ

ಕಞ್ಚು = ಕಂಚು

ಕಣ್ಠ = ಕಂಠ

ಕನ್ದ = ಕಂದ

ಕಮ್ಪು = ಕಂಪು

ಕಮ್ಸ = ಕಂಸ

**(ಇವನ್ನು ಕಮ್ಕಣ, ಕಮ್ಚು ........ಹೀಗೆ ಉಚ್ಚರಿಸಬಾರದು)**

## ವಿಸರ್ಗವನ್ನು ಬಳಸುವ ರೀತಿ

ವಿಸರ್ಗಗಳು ಬಂದಾಗ 'ಹ್' ಕಾರಕ್ಕೆ ಸಮೀಪವಾದ ಉಚ್ಚಾರವು ಬರುತ್ತದೆ.

©KTBS Not to be republished

**ಸ್ವರಗಳೊಡನೆ ವಿಸರ್ಗ:**

ಅಃ, ಓಃ, ಈಃ, ಉಃ.

**ಪದಗಳಲ್ಲಿ ವಿಸರ್ಗ:**

ದುಃಖ, ಪುನಃ, ಸ್ವತಃ, ನಮಃ.

ಅಚ್ಚ ಕನ್ನಡದಲ್ಲಿ ವಿಸರ್ಗವಿರುವ ಪದಗಳಿಲ್ಲ. (ಅನ್ಯದೇಶಿಯ ಪದಗಳನ್ನು ಹೊರತುಪಡಿಸಿ)

ಅನುಸ್ವಾರ ಮತ್ತು ವಿಸರ್ಗ ಎರಡನ್ನೂ (ಯೋಗವಾಹ) ಒಳಗೊಂಡಿರುವ ಪದಗಳಿಗೆ ಉದಾಹರಣೆ.

ಅಂತಃಪುರ, ದುಃಖದಿಂದ, ತೇಜಃಪುಂಜ.

## ಗುಣಿತಾಕ್ಷರಗಳು

ವ್ಯಂಜನಗಳಿಗೆ ಸ್ವರಗಳು ಸೇರಿ ಗುಣಿತಾಕ್ಷರಗಳಾಗುವವು. ಈ ಗುಣಿತಾಕ್ಷರಗಳನ್ನು ರೂಢಿಯಲ್ಲಿ 'ಕಾಗುಣಿತ' ಎನ್ನುತ್ತಾರೆ. ಕಾಗುಣಿತ ಎಂದರೆ ಕ್+ಅ=ಕ, ಕ್+ಆ=ಕಾ, ಕ್+ಇ=ಕಿ, ಇತ್ಯಾದಿ. ಒಂದು ವ್ಯಂಜನಕ್ಕೆ ಒಂದು ಸ್ವರಸೇರಿ ಆಗುವ ಅಕ್ಷರವನ್ನು ಗುಣಿತಾಕ್ಷರ ಎಂದು ಕರೆಯುವರು.

ಉದಾ : ಪ್+ಅ= ಪ ; ಸ್+ಆ=ಸಾ ; ಯ್+ಉ=ಯು ಇತ್ಯಾದಿ.

**'ಕ್'** ವ್ಯಂಜನಕ್ಕೆ ಹದಿಮೂರು ಸ್ವರಗಳು ಸೇರಿದಾಗ **'ಕ ಕಾ ಕಿ ಕೀ----------'** ಎಂಬ ಹದಿಮೂರು ಅಕ್ಷರಗಳಾಗುತ್ತವೆ. ಗುಣಿತಾಕ್ಷರಗಳ ಒಂದು ಸಾಲಿಗೆ 'ಬಳ್ಳಿ' ಎಂದೂ ಕರೆಯುವರು.

ವ್ಯಂಜನ+ಸ್ವರ=ಗುಣಿತಾಕ್ಷರ

ಗುಣಿತಾಕ್ಷರಗಳನ್ನು ಬರೆಯುವಾಗ ಸ್ವರಗಳ ಬದಲು ಅವುಗಳ ಚಿಹ್ನೆಗಳನ್ನು ಬಳಸುತ್ತೇವೆ.

| ಸ್ವರಗಳು | ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಂ |
|---|---|---|---|---|---|---|---|---|---|---|---|---|---|---|---|
| ಸ್ವರ ಸಂಜ್ಞೆಗಳು | ˊ | ಾ | ಿ | ೀ | ು | ೂ | ೃ | ೆ | ೇ | ೈ | ೊ | ೋ | ೌ | ಂ | ಃ |

## ಸಂಯುಕ್ತಾಕ್ಷರ

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳಿಗೆ ಒಂದು ಸ್ವರಾಕ್ಷರವು ಸೇರಿದಾಗ ಸಂಯುಕ್ತಾಕ್ಷರವಾಗುವುದು.

ಇವುಗಳಲ್ಲಿ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳೆಂದು ಎರಡು ವಿಧಗಳಿವೆ.

ಸಜಾತೀಯ ಸಂಯುಕ್ತಾಕ್ಷರಗಳು – ಅಮ್ಮ, ಅಕ್ಕ, ಅಜ್ಜ, ಅಪ್ಪ ಇತ್ಯಾದಿ.

ವಿಜಾತೀಯ ಸಂಯುಕ್ತಾಕ್ಷರಗಳು – ಶಸ್ತ್ರ, ಅಸ್ತ್ರ, ಅಕ್ಷರ, ಪುಸ್ತಕ ಇತ್ಯಾದಿ.

©KTBS Not to be republished

ಸಂಯುಕ್ತಾಕ್ಷರಗಳನ್ನು ಒತ್ತಕ್ಷರಗಳೆಂದೂ ಕರೆಯುವರು.

ಒತ್ತುಗಳು (ವ್ಯಂಜನ ಚಿಹ್ನೆಗಳು)

್ಕ ್ಖ ್ಗ ್ಘ ್ಙ

್ಚ ್ಛ ್ಜ ್ಝ ್ಞ

್ಟ ್ಠ ್ಡ ್ಢ ್ಣ

್ತ ್ಥ ್ದ ್ಧ ್ನ

್ಪ ್ಫ ್ಬ ್ಭ ್ಮ

್ಯ ್ರ ್ಲ ್ವ ್ಶ ್ಷ ್ಸ ್ಹ ್ಳ

ತ್, ನ್, ಮ್, ಯ್, ರ್, ಲ್, ಈ ವ್ಯಂಜನಗಳ ಚಿಹ್ನೆಗಳು ಮೂಲ ಅಕ್ಷರಗಳಿಗಿಂತ ಭಿನ್ನವಾಗಿರುವುದನ್ನು ಗಮನಿಸಿ. 'ರ್' ವ್ಯಂಜನಕ್ಕೆ ಎರಡು ಚಿಹ್ನೆಗಳಿದ್ದು, ಸಂಯುಕ್ತಾಕ್ಷರಗಳಲ್ಲಿ 'ರ್' ಮೊದಲು ಉಚ್ಚಾರವಾಗಬೇಕಾದ ಸಂದರ್ಭದಲ್ಲಿ ಅರ್ಕಾವತ್ತನ್ನು (ರ್‍) 'ರ್' ಕೊನೆಗೆ ಉಚ್ಚಾರವಾಗಬೇಕಾದ ಸಂದರ್ಭದಲ್ಲಿ 'ರ್' ಚಿಹ್ನೆ ( ್ರ ) ಯನ್ನು ಬಳಸಬೇಕು.

ಉದಾ: ಅರ್ಧ, ಸೂರ‍್ಯ, ಸೂರ್ಯ, ವಕ್ರ. ಅಗ್ರ.

*****

©KTBS Not to be republished

# ೨. ಕಟ್ಟುತೇವ ನಾವು

– ಸತೀಶ ಕುಲಕರ್ಣಿ

**ಪ್ರವೇಶ:** ಅಸಮಾನತೆ ಹಾಗೂ ಜಾತಿಪದ್ಧತಿ ದೇಶದ ಅತಿ ದೊಡ್ಡ ಸಮಸ್ಯೆಯಾಗಿ, ಅಜ್ಞಾನ, ಅನ್ಯಾಯ, ದೌರ್ಜನ್ಯ, ಶೋಷಣೆಗಳಿಂದ ಸಮಾಜದಲ್ಲಿ ತಾರತಮ್ಯ ತಾಂಡವವಾಡುವಂತಾಯಿತು. ಸರ್ವರ ಏಳ್ಗೆಗೆ ಮಾರಕವಾಯಿತು. ಸಮುದಾಯದ ಹಿತದ ದೃಷ್ಟಿಯಿಂದ ಚಿಂತನೆಗಳು ರೂಪುಗೊಂಡು ಹೋರಾಟದ ಹಾದಿಯನ್ನು ಹಿಡಿಯುವುದು ಅನಿವಾರ್ಯವಾಯಿತು. ಭರವಸೆಯ ಬೆಳಕನ್ನು ಹುರಿಗೊಳಿಸಿ ಕಾಡುತ್ತಿದ್ದ ಮೌಢ್ಯತೆಯನ್ನು ತೊಲಗಿಸಲು, ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲು ನಾಡಿನಾದ್ಯಂತ ಹೊಸ ಸಂಚಲನಶಕ್ತಿ ಸಂಚಲಿಸಿತು. ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ಆವಶ್ಯಕತೆಯನ್ನು ಪ್ರತಿಪಾದಿಸುತ್ತಾ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣವೊಂದರ ಆಶಯವನ್ನು ಕ್ರಾಂತಿಗೀತೆಗಳು ಕಟ್ಟಿಕೊಟ್ಟವು. ಆತ್ಮವಿಶ್ವಾಸದ ಭರವಸೆಯನ್ನು ಮೂಡಿಸಿದವು. ಈ ಹಿನ್ನೆಲೆಯಲ್ಲಿ 'ಕಟ್ಟುತೇವ ನಾವು ಕಟ್ಟುತೇವ' ಕ್ರಾಂತಿಗೀತೆ ಚಳುವಳಿಗಾರರ ಹಾಡಾಗಿ ಪ್ರಸಿದ್ಧವಾಯಿತು.

ಕಟ್ಟುತೇವ ನಾವು
ಕಟ್ಟುತೇವ ನಾವು
ಕಟ್ಟೇ ಕಟ್ಟುತೇವ
ಒಡೆದ ಮನಸುಗಳ
ಕಂಡ ಕನಸುಗಳ
ಕಟ್ಟೇ ಕಟ್ಟುತೇವ
ನಾವು ಕನಸು ಕಟ್ಟುತೇವ ॥ಕಟ್ಟುತೇವ ನಾವು॥ ॥೧॥



ಜಾತಿ ಇಲ್ಲದ
ಭೀತಿ ಇಲ್ಲದ
ಬಾಳ ಕಟ್ಟುತೇವ
ಕುಲವೆನ್ನದ ಮನುಕುಲವ
ನಾವು ಕಟ್ಟುತೇವ
ನಾವು ನಾಡ ಕಟ್ಟುತೇವ ॥ಕಟ್ಟುತೇವ ನಾವು॥ ॥೨॥

ಗೋಳಿಲ್ಲದ ಗುಂಡಿಲ್ಲದ
ನಾಡ ಕಟ್ಟುತೇವ
ನೂರು ಮನಸಿನ
ಕೋಟಿ ಕನಸಿನ
ಹಾಡ ಕಟ್ಟುತೇವ ನಾವು ನಾಡ ಕಟ್ಟುತೇವ ॥ಕಟ್ಟುತೇವ ನಾವು॥ ॥೩॥

©KTBS Not to be republished

ಕ್ರಾಂತಿ ಕೆಂಡದ
ಕುಂಡ ಹೊತ್ತು ನಾವು
ಮುಳ್ಳು ತುಳಿಯತೇವ
ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ
ನೆಲಕ ಹಾಡ ಬರೆಯತೇವ ॥ ಕಟ್ಟತೇವ ನಾವು॥ ॥೪॥

## ಕೃತಿಕಾರರ ಪರಿಚಯ



ಸತೀಶ ಕುಲಕರ್ಣಿಯವರು ದಲಿತ-ಬಂಡಾಯ ಸಾಹಿತ್ಯ ಚಳುವಳಿಯ ಹಿನ್ನೆಲೆಯಿಂದ ಬಂದ ಮುಖ್ಯ ಕವಿಗಳಲ್ಲೊಬ್ಬರು. ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯವರಾದ ಇವರು, ೧೯೫೧ರ ಜುಲೈ ೧೩ ರಂದು ಧಾರವಾಡದಲ್ಲಿ ಜನಿಸಿದರು. ಕಾವ್ಯ, ನಾಟಕ, ರಂಗಭೂಮಿ ಹೀಗೆ ಸಾಹಿತ್ಯದ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೃತಿರಚನೆ ಮಾಡಿದರು. 'ಬೆಂಕಿ ಬೇರು', 'ನೆಲದ ನೆರಳು', 'ವಿಕ್ಷಿಪ್ತ', 'ಒಡಲಾಳ ಕಿಚ್ಚು', 'ವಿಷಾದಯೋಗ', 'ಗಾಂಧೀಗಿಡ', 'ಕಂಪನಿ ಸವಾಲ್' ಮುಂತಾದವು ಇವರ ಕವನ ಸಂಕಲನಗಳು. 'ಛಿನ್ನ' (ಮರಾಠಿಯಿಂದ ಅನುವಾದಿತವಾದ ನಾಟಕ); 'ಸಮುದ್ರ ಸೂರ್ಯ' ಮತ್ತು 'ಗುರುವರ್ಯ ಗೋಕಾಕರು' (ಸಂಪಾದಿತ ಕೃತಿಗಳು); 'ಓದೊಳಗಿನ ಓದು' (ವಿಮರ್ಶಾ ಕೃತಿ) ಇವು ಇತರ ಕೃತಿಗಳು.

## ಪದಗಳ ಅರ್ಥ

ಒಡೆದ ಮನಸು-ಅಪನಂಬಿಕೆಯಿಂದ ಸಂಬಂಧ ಕಳೆದುಹೋದ ಜನ;
ಕ್ರಾಂತಿ-ಆಂದೋಲನ;
ಕಟ್ಟು-ನಿರ್ಮಿಸು;
ಗುಂಡು-ಬಂದೂಕಿನ ಗೋಲಿ;
ಕುಂಡ-ಬೆಂಕಿಯ ಕುಣಿ, ಹೋಮಕ್ಕಾಗಿ ನೆಲದಲ್ಲಿ ಮಾಡುವ ಗುಣಿ;
ಗೋಳು-ಕಷ್ಟ, ಸಂಕಟ;
ಕುಲ-ಗುಂಪು, ಜಾತಿ;
ಬಾಳು-ಬದುಕು, ಜೀವನ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. 'ಕಟ್ಟತೇವ ನಾವು' ಕವಿತೆಯಲ್ಲಿ ಕವಿ ಯಾವೆಲ್ಲ ಮನಸ್ಸುಗಳನ್ನು ಕಟ್ಟುತ್ತೇವೆ ಎಂದು ಹೇಳುತ್ತಾರೆ?
೨. ಎಂತಹ ಬಾಳನ್ನು ಕಟ್ಟುತ್ತೇವೆ ಎಂದು 'ಕಟ್ಟತೇವ ನಾವು' ಕವಿತೆಯು ಭರವಸೆ ನೀಡುತ್ತದೆ?
೩. 'ಕಟ್ಟತೇವ ನಾವು' ಕವಿತೆಯಲ್ಲಿ ಬರುವ ಕ್ರಾಂತಿಕಾರಿಗಳು ಎಂತಹ ಕುಂಡವನ್ನು ಹೊತ್ತಿದ್ದೇವೆಂದು ಹೇಳುತ್ತಾರೆ?

©KTBS Not to be republished

೪. ಮನುಕುಲವನ್ನು ಹೇಗೆ ಕಟ್ಟುತ್ತೇವೆಂದು ಕವಿ ಕುಲಕರ್ಣಿಯವರು ಹೇಳಿದ್ದಾರೆ?

೫. 'ಕಟ್ಟತೇವ ನಾವು' ಕವಿತೆಯಲ್ಲಿನ ಕ್ರಾಂತಿಕಾರಿಗಳ ಕಾಲುಗಳು ಏಕೆ ರಕ್ತವಾಗಿವೆ?

೬. ಕುಲಕರ್ಣಿಯವರು ಕ್ರಾಂತಿಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

೭. ಸತೀಶ ಕುಲಕರ್ಣಿಯವರು ಎಂತಹ ಹಾಡನ್ನು ಕಟ್ಟುತ್ತೇವೆಂದು ಹೇಳಿದ್ದಾರೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಕನಸು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

೨. ಸತೀಶ ಕುಲಕರ್ಣಿಯವರು ಎಂತಹ ನಾಡನ್ನು ಕಟ್ಟುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ?

೩. ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟ 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ?

೪. 'ಕಟ್ಟತೇವ ನಾವು' ಕವಿತೆಯು ಕ್ರಾಂತಿಕಾರಿಗಳ ಕನಸಿನ ಹಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಯಾವುದೇ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣದ ಆಶಯ ಸತೀಶ ಕುಲಕರ್ಣಿ ಅವರ ಕವಿತೆಯಲ್ಲಿ ಹೇಗೆ ಅಂತರ್ಗತವಾಗಿದೆ? ವಿವರಿಸಿರಿ.

೨. 'ಕಟ್ಟತೇವ ನಾವು' ಕವಿತೆಯು ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಬೇಕಾಗಿರುವ ಆವಶ್ಯಕತೆಯನ್ನು ಹೇಗೆ ಪ್ರತಿಪಾದಿಸುತ್ತಿದೆ?

**ಈ) ಕೆಳಗಿನ ಸಾಲುಗಳ ಸ್ವಾರಸ್ಯಗಳನ್ನು ಸಂದರ್ಭದೊಂದಿಗೆ ವಿವರಿಸಿರಿ.**

೧. "ರಕ್ತಗಾಲಿನ ನಮ್ಮ ಪಾಲಿನ ಹಾಡ ಬರೆಯತೇವ"

೨. "ಗೋಳಿಲ್ಲದ ಗುಂಡಿಲ್ಲದ ನಾಡ ಕಟ್ಟತೇವ"

೩. "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟತೇವ"

## ಭಾಷಾಭ್ಯಾಸ

**ಅ) ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ.**

ಕಟ್ಟತೇವ, ಬರೆಯತೇವ, ನೆಲಕ, ತುಳಿಯತೇವ.

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**

ಗುಂಡಿಲ್ಲದ, ರಕ್ತಗಾಲಿನ, ಕುಲವೆನ್ನದ, ಗೋಳಿಲ್ಲದ.

**ಇ) ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಕನಸು, ಕ್ರಾಂತಿ, ನಾಡು, ಪಾಲು.

© KTBS Not to be republished

**ಈ) 'ಕಟ್ಟತೇವ ನಾವು' ಪದ್ಯದ ಎರಡು ಮತ್ತು ನಾಲ್ಕನೇ ನುಡಿಗಳನ್ನು ಕಂಠಪಾಠ ಮಾಡಿರಿ.**

## ಭಾಷಾ ಚಟುವಟಿಕೆ

ಅ) ಅಸಮಾನತೆಗಳನ್ನು ತೊಡೆದು ಹಾಕುವ ಆಶಯದ ಕವಿತೆಗಳನ್ನು ಸಂಗ್ರಹಿಸಿರಿ.

ಆ) ಅಸಮಾನತೆಗೆ ಕಾರಣ ಮತ್ತು ಅವುಗಳನ್ನು ನಿವಾರಿಸುವ ಬಗೆಯನ್ನು ಕುರಿತು ಒಂದು ಪ್ರಬಂಧ ಬರೆಯಿರಿ.

ಇ) ಜಾತಿ–ವರ್ಗ–ಧರ್ಮ–ಲಿಂಗ ಮುಂತಾದ ಕಾರಣಗಳಿಂದಾಗಿ ಭೇದಭಾವ ಮಾಡಿದ ಘಟನೆ ನಿಮ್ಮ ಅನುಭವಕ್ಕೆ ಬಂದಿದ್ದರೆ ಅದನ್ನು ಕುರಿತು ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.

**ಅಥವಾ**

'ಜಾತಿ–ವರ್ಗ–ಧರ್ಮ–ಲಿಂಗ ಮುಂತಾದ ಅಂಶಗಳಿಂದ ತಾರತಮ್ಯ ಮಾಡುವುದು ಮಾನವೀಯ ಲಕ್ಷಣವಲ್ಲ' ಚರ್ಚಿಸಿ ಏಳೆಂಟು ವಾಕ್ಯಗಳಲ್ಲಿ ಬರೆಯಿರಿ.

ಈ) ಭೇದಭಾವವಿಲ್ಲದ ಸಮಾಜ ನಿರ್ಮಾಣದ ಬಗ್ಗೆ ಚಿಂತನೆ ಮಾಡಿದ ಧೀಮಂತರ ಜೀವನ ಚರಿತ್ರೆಯನ್ನು ಸಂಗ್ರಹಿಸಿರಿ.

## ವ್ಯಾಕರಣ

### ಅಲಂಕಾರ

ಕೇಳುಗರಿಗೆ ಅಥವಾ ಓದುಗರಿಗೆ ಆಕರ್ಷಣೀಯವಾಗಿ ಮಾಡಲು ಭಾಷೆಯಲ್ಲಿ ಬಳಸುವ ಚಮತ್ಕಾರದ ಮಾತುಗಳನ್ನು ಅಲಂಕಾರ ಎನ್ನುವರು. ಮನುಷ್ಯರು ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಅಲಂಕಾರ ಮಾಡಿಕೊಂಡಂತೆ ಭಾಷೆಯ ಸೌಂದರ್ಯವನ್ನು ಹೆಚ್ಚಿಸುವ ಕ್ರಿಯೆ ಇದಾಗಿದೆ. ಅಲಂಕಾರಗಳಲ್ಲಿ ಮುಖ್ಯವಾಗಿ ಶಬ್ದಾಲಂಕಾರ, ಅರ್ಥಾಲಂಕಾರ ಎಂದು ಎರಡು ವಿಧಗಳಿವೆ.

### ಶಬ್ದಾಲಂಕಾರ

ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದೇ ಶಬ್ದಾಲಂಕಾರ.

ಉದಾ : ೧. 'ಆಡುತ ಹಾಡುತ ಓಡುತ ಬೇಡುತ ನೋಡುತ ಬಂದಳು ಸಿಂಗಾರಿ'

೨. 'ಲಲಿತ ಲವಂಗ ಲತಾ ಪರಿಶೀಲನ ಕೋಮಲ ಮಲಯ ಸಮೀರೇ'.

೩. 'ನೀರಿನಲ್ಲಿ ಬಕ ಕುಣಿಯುತ್ತಿತ್ತು ಥಕ ಥೈ ಥಕ ಥಕ.'

**"ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು"**

* * * * * *

©KTBS Not to be republished

# ೩. ಕೊಡಗಿನ ಗೌರಮ್ಮ

– ಮ. ನ. ಮುಕ್ತಾಯಿ

**ಪ್ರವೇಶ:** 'ನವೋದಯ ಕಾಲದಲ್ಲಿ ಬಂದ ಗೌರಮ್ಮ ಕನ್ನಡದ ಸ್ವತಂತ್ರ ಮನೋಭಾವದ ಲೇಖಕಿಯರಲ್ಲಿ ಒಬ್ಬರು. ದೇಶಕ್ಕೆ ಸ್ವಾತಂತ್ರ್ಯ ಬರುವ ಮೊದಲೇ ಗೌರಮ್ಮ ಮಹಿಳೆಯರ ಸಮಸ್ಯೆ ಕುರಿತು ಬರೆಯುವ ಗಟ್ಟಿತನ ತೋರಿದವರು. ಅವರ ಬದುಕಿನಂತೆಯೇ ಅವರ ಕಥೆಗಳೂ ನಿರಾಡಂಬರವಾಗಿವೆ. ಕಲೆಯಾಗಿ ಅರಳಿ ಇಂದಿಗೂ ತಾಜಾತನವನ್ನು ಉಳಿಸಿಕೊಂಡಿವೆ. ಮಧ್ಯಮವರ್ಗದ ಪರಿಸರದಲ್ಲಿ ಬೆಳೆದ ಗೌರಮ್ಮನವರು ಈಜು ಕಲಿತವರು. ಟೆನಿಸ್ ಆಡಿದವರು. ಗಾಂಧೀಜಿಯವರ ಅನುಯಾಯಿಯಾಗಿ ಸ್ವಾತಂತ್ರ್ಯ ಹೋರಾಟ ಮತ್ತು ಹರಿಜನೋದ್ಧಾರ ನಿಧಿಗೆ ತಮ್ಮೆಲ್ಲ ಒಡವೆಗಳನ್ನು ಸ್ವಪ್ರೇರಣೆಯಿಂದ ನೀಡಿದವರು. ಇಂತಹ ಧೀಮಂತ ಮನೋಭಾವದ ಕನ್ನಡ ಲೇಖಕಿಯ ಪರಿಚಯವನ್ನು ಈ ಲೇಖನವು ಮಾಡಿಕೊಡುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಮೊದಲ ಸಮಕಾಲೀನ ಸಂವೇದನಾಶೀಲ ಲೇಖಕಿಯರಾದ ನಂಜನಗೂಡು ತಿರುಮಲಾಂಬ, ಬೆಂಗಳೂರಿನ ಆರ್. ಕಲ್ಯಾಣಮ್ಮ, ದಕ್ಷಿಣ ಕನ್ನಡದ ಸರಸ್ವತಿಬಾಯಿ ರಾಜವಾಡೆ, ಬೆಂಗಳೂರಿನ ತಿರುಮಲೆ ರಾಜಮ್ಮ ಮುಂತಾದವರಲ್ಲಿ ಕೊಡಗಿನ ಗೌರಮ್ಮ ಸಹ ಒಬ್ಬರಾಗಿದ್ದಾರೆ. ಸಣ್ಣಕತೆಗಳ ಮೂಲಕ ನಾಡಿನ ಜನರಿಗೆ ಪರಿಚಿತರಾದ ಕೊಡಗಿನ ಗೌರಮ್ಮ ಬದುಕಿದ್ದು ಕೇವಲ ಇಪ್ಪತ್ತಾರು ವರ್ಷಗಳು ಮಾತ್ರ. ೧೯೩೦ರಲ್ಲಿ 'ಪುನರ್ವಿವಾಹ' ಎಂಬ ಕತೆಯ ಮೂಲಕ ಸಾಹಿತ್ಯಕ್ಷೇತ್ರ ಪ್ರವೇಶಿಸಿದಾಗ ಅವರ ವಯಸ್ಸು ಹತ್ತೊಂಬತ್ತು ವರ್ಷ.

ಗೌರಮ್ಮನವರ ಪೂರ್ವಜರು ಮೂಲತಃ ವಿಟ್ಲ ಸೀಮೆಯವರಾಗಿದ್ದು ಕ್ರಮೇಣ ಕುಕ್ಕೆ ಸುಬ್ರಹ್ಮಣ್ಯ ಭಾಗದಿಂದ ಘಟ್ಟದ ಮೇಲಿನ ಮಲೆನಾಡು ಪ್ರದೇಶವಾದ ಕೊಡಗಿಗೆ ಬಂದು ನೆಲೆಸಿದ್ದರು. ಮಡಿಕೇರಿಯಲ್ಲಿ ವಕೀಲರು ಮತ್ತು ಪ್ಲಾಂಟರ್ ಆಗಿದ್ದ ಎನ್. ಎಸ್. ರಾಮಯ್ಯ ಮತ್ತು ನಂಜಕ್ಕ ಎಂಬ ದಂಪತಿಗಳ ಕೊನೆಯ ಮಗಳಾಗಿ ಹುಟ್ಟಿದವರು ಗೌರಮ್ಮ.

ಗೌರಮ್ಮನ ಹದಿಹರೆಯದ ದಿನಗಳು ಮಡಿಕೇರಿಯ ಸುಂದರ ವಾತಾವರಣದಲ್ಲಿ ಆಹ್ಲಾದಕರವಾಗಿ ಕಳೆದವು. ಆಗರ್ಭ ಶ್ರೀಮಂತ ಜಿ. ಎಂ ಮಂಜುನಾಥಯ್ಯ ಎಂಬುವರಲ್ಲಿ ಮ್ಯಾನೇಜರ್ ಆಗಿ ಕಾಫಿ ಎಸ್ಟೇಟ್ ನೋಡಿಕೊಳ್ಳುತ್ತಿದ್ದ ಶುಂಠಿಕೊಪ್ಪದ ಶ್ರೀ ಬಿ. ಟಿ. ಗೋಪಾಲಕೃಷ್ಣಯ್ಯನವರೊಡನೆ ೧೯೨೮ರಲ್ಲಿ ಇವರ ವಿವಾಹವಾಯಿತು. ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ. ರಾ. ಬೇಂದ್ರೆ ಮುಂತಾದ ಹೆಸರಾಂತ ಲೇಖಕರು ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದುದು ಉಂಟು. ಹೀಗಾಗಿ ಇವರೆಲ್ಲರ ಪರಿಚಯ ಗೌರಮ್ಮನವರಿಗಿತ್ತು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮ ಅವರೊಡನೆ ಸಂಪರ್ಕವನ್ನು ಇವರು ಇಟ್ಟುಕೊಂಡಿದ್ದರು. ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ, ಬದಲಾವಣೆಗಳು ಮತ್ತು ಹೊಸ ಬರವಣಿಗೆಯ ಸಂಪರ್ಕ ಈ ಲೇಖಕಿಯ ಬರವಣಿಗೆಗೆ ಪೂರಕವಾಗಿದ್ದವು. ಯಕ್ಷಗಾನ, ತಾಳಮದ್ದಲೆ, ಕುಮಾರವ್ಯಾಸ ಮತ್ತು ಉಮರ್ ಖಯಾಮನ ಕಾವ್ಯ ಇವುಗಳ ಬಗೆಗೆ ಆಸಕ್ತಿಯನ್ನು ಇವರು ಬೆಳೆಸಿಕೊಂಡಿದ್ದರು. ಜಾನಪದದ ಬಗ್ಗೆ ಕುತೂಹಲ ಇದ್ದ ಇವರು ಕೆಲವು ಜನಪದ ಗೀತೆಗಳನ್ನು ಸಹ ಸಂಗ್ರಹಿಸಿದ್ದರು.

©KTBS Not to be republished

ರಾಜಕೀಯ ಪರಿಜ್ಞಾನವನ್ನು ಹೊಂದಿದ್ದ ಗೌರಮ್ಮ ಗಾಂಧೀಜಿಯವರ ಬಗ್ಗೆ ಅಪರಿಮಿತವಾದ ಅಭಿಮಾನವನ್ನು ಬೆಳೆಸಿಕೊಂಡಿದ್ದರು. ಈಜು ಕಲಿತು ಟೆನಿಸ್ ಆಡುತ್ತಿದ್ದ ಗೌರಮ್ಮ ಲವಲವಿಕೆಯ ಧೈರ್ಯವಂತ ಮಹಿಳೆಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿದ್ದ ಇವರು ಖಾದಿ ಬಟ್ಟೆಗಳನ್ನು ಧರಿಸುತ್ತಿದ್ದರು. ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಇವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ತಮ್ಮ ಹಠವನ್ನು ಸಾಕಾರಗೊಳಿಸಿಕೊಂಡರು. ೧೯೩೩ನೇ ವರ್ಷದ ಕೊನೆಯಲ್ಲಿ ಗಾಂಧೀಜಿಯವರು ಕರ್ನಾಟಕ ಪ್ರವಾಸ ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದ ಸಂದರ್ಭದಲ್ಲಿ ನಡೆದ ಸಂಗತಿ ಇದು. ಕೊಡಗಿನ ಕಿತ್ತಲೆ ಹಣ್ಣು ನೀಡಿ ಎಳೆ ಚೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದ ಗಾಂಧೀಜಿ ಗೌರಮ್ಮನವರಿಗೆ ಕೊಟ್ಟ ಮಾತಿನಂತೆ ಅವರ ಮನೆಗೂ ಬಂದರು. ಆಗ ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ, ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಮತ್ತು ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನೂ ಮಹಾತ್ಮರ ಕೈಗೆ ಕೊಟ್ಟಾಗ ಅವರು ಅವಾಕ್ಕಾದರು.



ಗೌರಮ್ಮ ಸುತ್ತಮುತ್ತಲಿನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ, ಆದರ್ಶಗಳ ಚಿತ್ರಣವನ್ನು ತಮ್ಮ ಕಥೆಗಳಲ್ಲಿ ನೀಡಲು ಪ್ರಯತ್ನಿಸಿದರು. ಗೌರಮ್ಮನವರ ಇಪ್ಪತ್ತೊಂದು ಕಥೆಗಳಲ್ಲಿಯೂ ಎಲ್ಲ ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜವೊಂದರ ನಿರ್ಮಾಣದ ಶಕ್ತಿಯಿರುವುದು ಪ್ರತಿಬಿಂಬಿತವಾಗಿದೆ.

©KTBS Not to be republished

ಗೌರಮ್ಮನವರ ಆರೋಗ್ಯಕರ ನಿಲುವಿನ, ಜಾತ್ಯತೀತ ಮನೋಧರ್ಮದ, ಮಾನವೀಯ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ ಅಪಾರ ಜೀವನಪ್ರೀತಿಯ ಕತೆಗಾರ್ತಿಯಾಗಿದ್ದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಗ್ರಹಿಸಿ, ಸಮಾಜದಲ್ಲಿನ ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ಕಾಳಜಿಗಳನ್ನು ಹೊಂದಿದ್ದ ಗೌರಮ್ಮ ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು.

ಕರ್ನಾಟಕದ ಪಶ್ಚಿಮಘಟ್ಟ ಶ್ರೇಣಿಯಲ್ಲಿ ಬರುವ ಸುಂದರ ಕೊಡಗಿನ ಪರಿಶುದ್ಧ ತಂಪು ಹವೆಯ ಆನಂದ ಅನುಭವಿಸಿ ಬೆಳೆದ ಗೌರಮ್ಮ, ಸಾಹಿತ್ಯ ಸಂಸ್ಕೃತಿ ಮತ್ತು ಪ್ರೀತಿ ತುಂಬಿದ ಆತ್ಮೀಯ ಬದುಕಿಗಾಗಿ ನಿರಂತರ ಚಿಂತನೆ ನಡೆಸಿ ಹೊಸ ಹೆಜ್ಜೆಗಳನ್ನು ಇಡುತ್ತಿದ್ದರು. ಆದರೆ ೧೯೩೯ ಏಪ್ರಿಲ್ ೧೩ರಂದು ತಾವು ವಾಸವಾಗಿದ್ದ ಮನೆಗೆ ಕೇವಲ ಮೂರು ಮೈಲಿಗಳ ಅಂತರದಲ್ಲಿ ಹರಿಯುತ್ತಿದ್ದ ಹಟ್ಟಿಹೊಳೆಯಲ್ಲಿ ಈಜಾಡುವಾಗ ಸುಳಿಗೆ ಸಿಕ್ಕಿ ಅಕಾಲ ಮರಣಕ್ಕೆ ತುತ್ತಾದರು. ಇವರ ಕತೆಗಳಿಂದ ಚಿಗುರಿದ ಹೆಣ್ಣು ಮಕ್ಕಳ ಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಮಂಗಲಪ್ರದವಾಗಿ ಬೆಳಗುತ್ತಿದ್ದ ಕಾಲದಲ್ಲಿ ಇವರ ಮರಣದಿಂದ ಕನ್ನಡ ನಾಡೇ ಮರುಗುವಂತಾಯಿತು.

## ಕೃತಿಕಾರರ ಪರಿಚಯ



ಮ.ನ. ಮುಕ್ತಾಯಿ ಅವರು ಶಿವಮೊಗ್ಗ ಜಿಲ್ಲೆಯ ಅರತೊಳಲು ಗ್ರಾಮದಲ್ಲಿ ೧೯೬೧ರಲ್ಲಿ ಜನಿಸಿದರು. ಕಾರ್ಮಿಕ ರಾಜ್ಯ ವಿಮಾ ನಿಗಮದಲ್ಲಿ ಸಹಾಯಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರು ಸಣ್ಣ ಕತೆ, ಜೀವನ ಚರಿತ್ರೆ, ಲೇಖನ ಮತ್ತು ಪ್ರಬಂಧಗಳನ್ನು ಬರೆದಿದ್ದಾರೆ. 'ಕೊಡಗಿನ ಗೌರಮ್ಮ' ಜೀವನ ಚರಿತ್ರೆಯನ್ನು ಬರೆದಿದ್ದಾರೆ.

ಪ್ರಸ್ತುತ ಲೇಖನವನ್ನು ಶ್ರೀಮತಿ ಇಂದಿರಾ ಶಿವಣ್ಣ ಅವರು ಸಂಪಾದಿಸಿರುವ ಅನನ್ಯ ಮಹಿಳಾ ಚೇತನ ಮಾಲಿಕೆಯಲ್ಲಿನ ಮುಕ್ತಾಯಿಯವರು ಬರೆದಿರುವ 'ಕೊಡಗಿನ ಗೌರಮ್ಮ' ಎಂಬ ಕೃತಿಯಿಂದ ಸಂಗ್ರಹಿಸಲಾಗಿದೆ.

## ಪದಗಳ ಅರ್ಥ

ಅನಾವರಣ–ಮರೆಯನ್ನು ಸರಿಸುವುದು, ಮುಚ್ಚಿದ್ದನ್ನು ಪ್ರಕಟಿಸುವುದು;
ಅಪರಿಮಿತ–ಮಿತಿಯಿಲ್ಲದ;
ಅವಾಕ್ಕಾಗು–ಆಶ್ಚರ್ಯಪಡು, ಮಾತಿಲ್ಲವಾಗು;
ಆಹ್ಲಾದ–ಸಂತೋಷ, ಆನಂದ;
ದ್ಯೋತಕ–ಸಂಕೇತ;
ನಿರಂತರ–ಎಡೆಬಿಡದ, ಸತತವಾದ;
ಪರಿಜ್ಞಾನ–ಸೂಕ್ಷ್ಮವಾದ ಜ್ಞಾನ;
ಮೊಕ್ಕಾಂ–ತಾತ್ಕಾಲಿಕವಾಗಿ ನೆಲೆನಿಲ್ಲು;
ಸಂಕೋಲೆ–ಬೇಡಿ, ಕೋಳ, ಬಂಧ;
ಸಂವೇದನಾ–ವಿಶಿಷ್ಟ ಅನುಭವ ಮತ್ತು ಚಿಂತನೆಯುಳ್ಳ;
ಶ್ರೇಣಿ–ಸಾಲು, ಪಂಕ್ತಿ, ಗುಂಪು, ಸಮೂಹ.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಆಧುನಿಕ ಕನ್ನಡ ಸಾಹಿತ್ಯದ ಮೊದಲ ಸಮಕಾಲೀನ ಸಂವೇದನಾಶೀಲ ಲೇಖಕಿಯರು ಯಾರು ಯಾರು?

೨. ಕೊಡಗಿನ ಗೌರಮ್ಮನವರ ವಿವಾಹವು ಯಾರೊಡನೆ ಆಯಿತು?

೩. ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದ ಸಾಹಿತಿಗಳು ಯಾರು?

೪. ಕೊಡಗಿನ ಗೌರಮ್ಮನವರು ಯಾವುದರ ಬಗೆಗೆ ಅಪಾರ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು?

೫. ಕೊಡಗಿನ ಗೌರಮ್ಮನವರು ಅಕಾಲಿಕ ಮರಣ ಹೊಂದಿದ್ದೇಕೆ?

೬. ಆರ್. ಕಲ್ಯಾಣಮ್ಮ ಯಾರು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳು ಯಾವುವು?

೨. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಬಂದರು?

೩. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು?

೪. ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು?

೫. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳಾವುವು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

೨. ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.

೩. 'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.

**ಈ) ಕೆಳಗಿನ ಅಪೂರ್ಣ ವಾಕ್ಯಗಳ ಮುಂದೆ ಕೊಟ್ಟಿರುವ ಸ್ಥಳದಲ್ಲಿ ಆ ವಾಕ್ಯಗಳಿಗೆ ಸಂಬಂಧಿಸಿದ ಹೆಸರನ್ನು ಬರೆದು ಪೂರ್ಣಗೊಳಿಸಿರಿ.**

೧. ಕೊಡಗಿನ ಗೌರಮ್ಮನವರು ಬರೆದ ಮೊದಲ ಕತೆಯ ಹೆಸರು --------

೨. ಕೊಡಗಿನ ಗೌರಮ್ಮನವರ ತಾಯಿಯ ಹೆಸರು --------

©KTBS Not to be republished

೩. ಕೊಡಗಿನ ಗೌರಮ್ಮನವರ ತಂದೆಯ ಹೆಸರು ------------

೪. ಕೊಡಗಿನ ಗೌರಮ್ಮನವರ ಪತಿಯ ಹೆಸರು -----------

೫. ಕೊಡಗಿನ ಗೌರಮ್ಮನವರು ಅಕಾಲ ಮರಣಕ್ಕೆ ಗುರಿಯಾಗುವಂತೆ ಮಾಡಿದ ಹೊಳೆಯ ಹೆಸರು ___

೬. ಕೊಡಗಿನ ಗೌರಮ್ಮನವರ ಪೂರ್ವಜರ ಸೀಮೆಯ ಹೆಸರು -----------

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದವನ್ನು ಬರೆಯಿರಿ.**

ನಿರಾಡಂಬರ, ಸ್ವಾತಂತ್ರ್ಯ, ಗಟ್ಟಿತನ, ಆಸಕ್ತಿ, ಅಪರಿಮಿತ.

**ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ.**

ಮಹಾತ್ಮ, ಪರಿಜ್ಞಾನವನ್ನು, ಹರಿಜನೋದ್ಧಾರ, ಸದಭಿರುಚಿ, ಸತ್ಯಾಗ್ರಹ, ನವೋದಯ, ಜಾತ್ಯತೀತ.

**ಇ) ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ.**

ಕವಿ, ಕಾವ್ಯ, ವರ್ಷ, ಶ್ರೇಣಿ.

## ಭಾಷಾ ಚಟುವಟಿಕೆ

ಅ) 'ಕನ್ನಡ ಸಾಹಿತ್ಯವು ಶ್ರೀಮಂತಗೊಳ್ಳುವಲ್ಲಿ ಸ್ತ್ರೀಯರ ಕೊಡುಗೆ' – ಈ ವಿಷಯವನ್ನು ಕುರಿತು ತರಗತಿಯಲ್ಲಿ ಚರ್ಚಿಸಿರಿ.

ಆ) ಕನ್ನಡ ಲೇಖಕಿಯರ ಭಾವಚಿತ್ರಗಳನ್ನು ಮತ್ತು ಅವರ ಪ್ರಮುಖ ಕೃತಿಗಳನ್ನು ಸಂಗ್ರಹಿಸಿರಿ.

## ವ್ಯಾಕರಣ

### ನಾಮಪದ

### ಭಾಗ 'ಅ'

ಹೆಸರನ್ನು ಸೂಚಿಸುವ ಪದಗಳನ್ನು ನಾಮಪದಗಳು ಎನ್ನುವರು. ನಾಮಪದದ ಮೂಲ ರೂಪಗಳಿಗೆ 'ನಾಮಪ್ರಕೃತಿ' ಎನ್ನುವರು.

**ಉದಾ:** ಮನೆಯಲ್ಲಿ (ನಾಮಪದ), ಮನೆ (ನಾಮಪ್ರಕೃತಿ) ಅಲ್ಲಿ (ಪ್ರತ್ಯಯ)

©KTBS Not to be republished

ವಸ್ತು, ವ್ಯಕ್ತಿ, ಪ್ರಾಣಿ, ಸ್ಥಳ, ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳೆಲ್ಲವನ್ನೂ ನಾಮಪದ ಎನಿಸುವವು. ನಾಮಪದಗಳನ್ನು ಅವುಗಳ ಸ್ವರೂಪಕ್ಕೆ ಅನುಗುಣವಾಗಿ ಅನೇಕ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

(೧) ವಸ್ತುವಾಚಕಗಳು ಅಥವಾ ನಾಮವಾಚಕ

(೨) ಗುಣವಾಚಕಗಳು

(೩) ಸಂಖ್ಯಾವಾಚಕಗಳು

(೪) ಸಂಖ್ಯೇಯವಾಚಕಗಳು

(೫) ಭಾವನಾಮಗಳು

(೬) ಪರಿಮಾಣವಾಚಕಗಳು

(೭) ಪ್ರಕಾರವಾಚಕಗಳು

(೮) ದಿಗ್ವಾಚಕಗಳು

(೯) ಸರ್ವನಾಮಗಳು

## ವಸ್ತುವಾಚಕಗಳು

ವಸ್ತುಗಳ ಹೆಸರನ್ನು ಹೇಳುವ ಶಬ್ದಗಳೆಲ್ಲ ವಸ್ತುವಾಚಕಗಳು.

**ಉದಾಹರಣೆಗೆ:–** ಚೇತನವುಳ್ಳ ವಸ್ತುಗಳು–ಮಾನವ, ಹುಡುಗಿ, ಗೌರಿ, ಮಹೇಶ, ಅಜ್ಜ, ನಾಯಿ, ಬೆಕ್ಕು, ಆನೆ ಮುಂತಾದವು.

ಚೇತನವಿಲ್ಲದ ವಸ್ತುಗಳು–ಮಣ್ಣು, ಗಿಡ, ಭೂಮಿ, ಜಲ, ಎಲೆ, ಹೂವು, ಹಣ್ಣು, ಕಾಯಿ, ಬೆಟ್ಟ, ಕಾಡು, ಶಾಲೆ ಮಠ, ಮನೆ, ಪುಸ್ತಕ–ಮುಂತಾದವು.

ವಸ್ತುವಾಚಕಗಳಲ್ಲಿ (೧) ರೂಢನಾಮ, (೨) ಅಂಕಿತನಾಮ, (೩) ಅನ್ವರ್ಥಕನಾಮ ಎಂದು ಮೂರು ವಿಧ.

**(ಅ) ರೂಢನಾಮ** – ರೂಢಿಯಿಂದ ಬಂದ ಸಾಮಾನ್ಯವಾಚಕಗಳೇ ರೂಢನಾಮಗಳು.
ಉದಾಹರಣೆಗೆ: ನದಿ, ಕಾಡು, ಪರ್ವತ, ಮನುಷ್ಯ, ಹೆಂಗಸು, ಹುಡುಗ, ನಗರ, ದೇಶ–ಇತ್ಯಾದಿಗಳು.
ಇಲ್ಲಿ ಬಂದಿರುವ ನದಿ, ಕಾಡು ಇತ್ಯಾದಿ ಶಬ್ದಗಳು ಎಲ್ಲ ನದಿಗಳಿಗೂ ಎಲ್ಲ ಕಾಡಿಗೂ ಅನ್ವಯಿಸುವ ಸಾಮಾನ್ಯವಾಚಕಗಳು.

**(ಆ) ಅಂಕಿತನಾಮ** – ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರುಗಳೇ ಅಂಕಿತ ನಾಮಗಳು. ಅಂದರೆ ರೂಢನಾಮಗಳಿಗೆ ಇಟ್ಟ ಹೆಸರುಗಳು.
ಉದಾಹರಣೆಗೆ:–ಗಂಗಾ, ಗೋದಾವರಿ, ಗೋಮತಿ, ಕಾವೇರಿ, ಹಿಮಾಲಯ, ಸಹ್ಯಾದ್ರಿ, ಶಂಕರ, ರಂಗ, ಸಲೀಮ, ರಿಚರ್ಡ್, ಭೀಮ, ಫಾತೀಮ, ರೀಟಾ, ಸಾವಿತ್ರಿ, ಧಾರವಾಡ, ಭಾರತ, ಕರ್ನಾಟಕ, ಆಲ, ಬೇವು, ಮಾವು–ಇತ್ಯಾದಿಗಳು.

©KTBS Not to be republished

**(ಇ) ಅನ್ವರ್ಥಕನಾಮ** : ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೇ ಅನ್ವರ್ಥಕನಾಮಗಳು.

ಉದಾಹರಣೆಗೆ:–ಕುಂಟ, ಹೆಳವ, ಕಿವುಡ, ವಿಜ್ಞಾನಿ, ವ್ಯಾಪಾರಿ, ವಿದ್ವಾಂಸ, ಶಿಕ್ಷಕ, ರೋಗಿ, ವೈದ್ಯ, ಯೋಗಿ–ಇತ್ಯಾದಿಗಳು.

**(೧) ಗುಣವಾಚಕ** : ವಸ್ತುಗಳ ಗುಣ, ರೀತಿ, ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲಾ ಗುಣವಾಚಕ ಎನಿಸುವುವು.

ಉದಾಹರಣೆಗೆ:–ದೊಡ್ಡ, ಕಿರಿದು, ಹಳೆಯ, ಕೆಟ್ಟದು, ಬಿಳಿದು, ಹಿರಿದು –ಇತ್ಯಾದಿ.

**(೨) ಸಂಖ್ಯಾವಾಚಕ** : ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾವಾಚಕಗಳು.

ಉದಾಹರಣೆಗೆ:– ಎರಡು, ಹತ್ತು, ನೂರು, ಸಾವಿರ, ಲಕ್ಷ, ಕೋಟಿ ಮೂವರು –ಇತ್ಯಾದಿ.

**(೩) ಸಂಖ್ಯೇಯವಾಚಕ** : ಸಂಖ್ಯೆಯಿಂದ ಕೂಡಿದ ಶಬ್ದಗಳೇ ಸಂಖ್ಯೇಯವಾಚಕಗಳು.

ಉದಾಹರಣೆಗೆ:– ಮೂರನೆಯ, ಇಮ್ಮಡಿ, ಪಂಚಾಮೃತ –ಇತ್ಯಾದಿ.

**(೪) ಭಾವನಾಮ** : ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳೆಲ್ಲ ಭಾವನಾಮಗಳು.

ಉದಾಹರಣೆಗೆ:– ಆಟ, ನೋಟ, ಕರ್ಪು, ಕೆಂಪು, ಪೆಂಪು –ಇತ್ಯಾದಿ.

**(೫) ಪರಿಮಾಣವಾಚಕ** : ಸಾಮಾನ್ಯ ಅಳತೆ, ಪರಿಮಾಣ, ಗಾತ್ರ –ಇತ್ಯಾದಿಗಳನ್ನು ಹೇಳುವ ಶಬ್ದಗಳು ಪರಿಮಾಣವಾಚಕಗಳು.

ಉದಾಹರಣೆಗೆ:–ಹಲವು, ಕೆಲವು, ಅನಿತು, ಇನಿತು, ಅಷ್ಟು, ಇಷ್ಟು, ಎನಿತು, ಪಲವು –ಇತ್ಯಾದಿ.

**(೬) ಪ್ರಕಾರವಾಚಕ** : ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳು. ಇವೂ ಒಂದು ರೀತಿಯ ಗುಣವಾಚಕಗಳೇ ಆಗಿವೆ.

ಉದಾಹರಣೆಗೆ:– ಎಂತಹ, ಎಂಥ, ಇಂಥ, ಇಂಥದು, ಅಂಥ, ಅಂತಹುದು, ಇಂತಹುದು, ಅಂಥವನು, ಅಂಥವಳು, ಅಂಥದು, ಅಂತಹವನು, ಇಂತಹವನು –ಇತ್ಯಾದಿ.

**(೭) ದಿಗ್ವಾಚಕ** : ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳೆಲ್ಲ ದಿಗ್ವಾಚಕಗಳು.

ಉದಾಹರಣೆಗೆ:– ಆಚೆ, ಈಚೆ ಉತ್ತರ, ಬಡಗಲು, ಬಡಗಣ, ದಕ್ಷಿಣ, ತೆಂಕಲು, ತೆಂಕಣ, ಪೂರ್ವ, ಮೂಡಲು, ಮೂಡಣ, ಪಶ್ಚಿಮ, ಪಡುವಲು, ಪಡುವಣ, ಈಶಾನ್ಯ, ವಾಯವ್ಯ, ಆಗ್ನೇಯ, ನೈಋತ್ಯ –ಇತ್ಯಾದಿ.

**(೮) ಸರ್ವನಾಮ** : ವಸ್ತುವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ನಿಂತು ಅವುಗಳನ್ನು ಸೂಚಿಸುವ (ಬೋಧಿಸುವ) ಶಬ್ದಗಳೇ ಸರ್ವನಾಮಗಳು.

©KTBS Not to be republished

**ಸರ್ವನಾಮಗಳಲ್ಲಿ ಮೂರು ವಿಧ**

(೧) ಪುರುಷಾರ್ಥಕ ಸರ್ವನಾಮಗಳು.

(೨) ಪ್ರಶ್ನಾರ್ಥಕ ಸರ್ವನಾಮಗಳು.

(೩) ಆತ್ಮಾರ್ಥಕ ಸರ್ವನಾಮಗಳು.

**೧. ಪುರುಷಾರ್ಥಕ ಸರ್ವನಾಮಗಳು: ಉತ್ತಮ ಪುರುಷ, ಮಧ್ಯಮ ಪುರುಷ ಮತ್ತು ಪ್ರಥಮ ಪುರುಷ**

**ಉದಾಹರಣೆಗೆ:–**

| ಕ್ರಮ ಸಂಖ್ಯೆ | ಪುರುಷಾರ್ಥಕಗಳು | ಏಕವಚನ | ಬಹುವಚನ |
|---|---|---|---|
| ೧ | ಉತ್ತಮ ಪುರುಷ ಸರ್ವನಾಮಗಳು | ನಾನು | ನಾವು |
| ೨ | ಮಧ್ಯಮ ಪುರುಷ ಸರ್ವನಾಮಗಳು | ನೀನು | ನೀವು |
| ೩ | ಪ್ರಥಮ ಪುರುಷ ಸರ್ವನಾಮಗಳು | ಅವನು, ಅವಳು, ಅದು. | ಅವರು, ಅವು. |

**೨. ಪ್ರಶ್ನಾರ್ಥಕ ಸರ್ವನಾಮಗಳು: ಪ್ರಶ್ನೆಗೆ ಸಂಬಂಧಿಸಿದ ಶಬ್ದಗಳು ಹಾಗೂ ಹೆಸರುಗಳು**

ಉದಾಹರಣೆಗೆ:– ಯಾವುದು? ಯಾರು? ಏನು? ಏತರದು? ಆವುದು? ಏನ್? ಇತ್ಯಾದಿ.

**೩. ಆತ್ಮಾರ್ಥಕ ಸರ್ವನಾಮಗಳು**

ಉದಾಹರಣೆಗೆ:– ತಾನು, ತಾವು ತನ್ನ, ತಮ್ಮ.

## ಲಿಂಗಗಳು

ಲಿಂಗವೆನ್ನುವುದರ ಮೂಲ ಅರ್ಥ ಲಕ್ಷಣ ಮತ್ತು ಗುರುತು. ಕನ್ನಡ ಭಾಷೆಯಲ್ಲಿ ಸ್ವಭಾವಕ್ಕನುಗುಣವಾಗಿ ಲಿಂಗವ್ಯವಸ್ಥೆ ಇದೆ. ಅವುಗಳಲ್ಲಿ ಮುಖ್ಯವಾಗಿ ೩ ವಿಧಗಳಿವೆ.

೧) ಪುಲ್ಲಿಂಗ ೨) ಸ್ತ್ರೀಲಿಂಗ ೩) ನಪುಂಸಕಲಿಂಗ

**೧) ಪುಲ್ಲಿಂಗ : ಮನುಷ್ಯ ಸಂಬಂಧಿ ಪದಗಳಲ್ಲಿ 'ಗಂಡು' ಎಂಬರ್ಥವನ್ನು ಸೂಚಿಸುವ ಶಬ್ದಗಳು 'ಪುಲ್ಲಿಂಗ' ವೆನಿಸುತ್ತವೆ.**

ಉದಾ : ಸುಯೇಶ, ಪಂಡಿತ, ರಹಿಮ, ಭೀಮ, ಜಾನ್, ಕವಿ, ಶಿಕ್ಷಕ, ಹುಡುಗ ಇತ್ಯಾದಿ.

©KTBS Not to be republished

೨) **ಸ್ತ್ರೀಲಿಂಗ : ಮನುಷ್ಯ ಸಂಬಂಧಿ ಪದಗಳಲ್ಲಿ 'ಹೆಣ್ಣು' ಎಂಬರ್ಥವನ್ನು ಸೂಚಿಸುವ ಶಬ್ದಗಳು 'ಸ್ತ್ರೀಲಿಂಗ' ವೆನಿಸುತ್ತವೆ.**

ಉದಾ : ರಾಣಿ, ಗಂಗೆ, ತಾಯಿ, ಫಾತಿಮಾ, ಹುಡುಗಿ, ಕವಯಿತ್ರಿ ಇತ್ಯಾದಿ.

೩) **ನಪುಂಸಕಲಿಂಗ :** ಮನುಷ್ಯರಲ್ಲಿ ಸ್ಪಷ್ಟವಾಗಿ 'ಗಂಡು' ಅಥವಾ 'ಹೆಣ್ಣು' ಎಂದು ಸೂಚಿಸುವ ಶಬ್ದಗಳನ್ನು ಹೊರತುಪಡಿಸಿದ ಎಲ್ಲ ಶಬ್ದಗಳನ್ನು ನಪುಂಸಕಲಿಂಗ ಎನ್ನುವರು. ಪ್ರಾಣಿಗಳ ಹೆಸರುಗಳು ಸ್ಪಷ್ಟವಾಗಿ 'ಗಂಡು' ಅಥವಾ 'ಹೆಣ್ಣು' ಎಂದು ಸೂಚಿತವಾದರೂ ಅವನ್ನು ಪುಲ್ಲಿಂಗ ಅಥವಾ ಸ್ತ್ರೀಲಿಂಗ ಎಂದು ಪರಿಗಣಿಸದೆ ನಪುಂಸಕಲಿಂಗ ಎಂದೇ ಪರಿಗಣಿಸಬೇಕು.

ಉದಾ : ಮಗು, ಕರು, ಪ್ರಾಣಿ, ಕಲ್ಲು, ಜನ, ಕೋಣ, ಆಕಳು ಇತ್ಯಾದಿ.

ಕನ್ನಡದಲ್ಲಿ ಎಲ್ಲಾ ಪ್ರಾಣಿಗಳನ್ನು ನಪುಂಸಕ ಲಿಂಗವೆಂದೇ ಪರಿಗಣಿಸಲಾಗುವುದು.

## ವಚನಗಳು

**ವಚನ** ಎಂದರೆ ಸಂಖ್ಯೆಯನ್ನು ಸೂಚಿಸುವ ಪದ ಕನ್ನಡದಲ್ಲಿ ಎರಡು ರೀತಿಯ ವಚನಗಳಿವೆ.

೧) ಏಕವಚನ ೨) ಬಹುವಚನ

**ಏಕವಚನ** : ಒಂದು ವಸ್ತುವನ್ನು ಹೇಳುವ ಪದಕ್ಕೆ **'ಏಕವಚನ'** ಎನ್ನುವರು.

**ಉದಾ :** ಹುಡುಗ, ಶಾಲೆ, ಮಗು, ಹುಡುಗಿ, ಗಿಡ, ಪ್ರಾಣಿ

**ಬಹುವಚನ** : ಎರಡು ಅಥವಾ ಎರಡಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವ ಪದವನ್ನು **'ಬಹುವಚನ'** ಎನ್ನುವರು.

**ಉದಾ :** ಹುಡುಗರು, ಶಾಲೆಗಳು, ಮಕ್ಕಳು, ಹುಡುಗಿಯರು, ಗಿಡಗಳು, ಪ್ರಾಣಿಗಳು

## ವಿಭಕ್ತಿ ಪ್ರತ್ಯಯಗಳು

ನಾಮ ಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಸಂಬಂಧಗಳ ಅರ್ಥ ಉಂಟು ಮಾಡುವ ಪ್ರತ್ಯಯಗಳಿಗೆ ವಿಭಕ್ತಿ ಪ್ರತ್ಯಯಗಳು ಎಂದು ಹೆಸರು. ಇವುಗಳಿಗೆ ಕಾರಕಗಳು ಎಂದೂ ಹೆಸರಿದೆ. ಇವು ಸಂಬಂಧಕಾರಕಗಳು. ಅದಕ್ಕೇ ಈ ಹೆಸರು.

©KTBS Not to be republished

ಏಳು ವಿಭಕ್ತಿಗಳಿವೆ. ಹಾಗೆಯೇ ಅವುಗಳಿಗೆ ಏಳು ಪ್ರತ್ಯಯಗಳಿವೆ.

| | ವಿಭಕ್ತಿಯ ಹೆಸರು | ವಿಭಕ್ತಿ ಪ್ರತ್ಯಯಗಳು | ಉದಾಹರಣೆ |
|---|---|---|---|
| ೧. | ಪ್ರಥಮಾ ವಿಭಕ್ತಿ | ಉ | ಮರ+ಉ = ಮರವು |
| ೨. | ದ್ವಿತೀಯಾ ವಿಭಕ್ತಿ | ಅನ್ನು | ಮರ+ಅನ್ನು = ಮರವನ್ನು |
| ೩. | ತೃತೀಯಾ ವಿಭಕ್ತಿ | ಇಂದ | ಮರ+ಇಂದ = ಮರದಿಂದ |
| ೪. | ಚತುರ್ಥೀ ವಿಭಕ್ತಿ | ಗೆ/ಕೆ/ಇಗೆ/ಕ್ಕೆ | ಮರ+ಕ್ಕೆ = ಮರಕ್ಕೆ ಮನೆಗೆ, ಹೆಸರಿಗೆ, ಅದಕ್ಕೆ |
| ೫. | ಪಂಚಮೀ ವಿಭಕ್ತಿ | ದೆಸೆಯಿಂದ | ಮರ+ದೆಸೆಯಿಂದ=ಮರದ ದೆಸೆಯಿಂದ |
| ೬. | ಷಷ್ಠೀ ವಿಭಕ್ತಿ | ಅ | ಮರ+ಅ = ಮರದ |
| ೭. | ಸಪ್ತಮೀ ವಿಭಕ್ತಿ | ಅಲ್ಲಿ | ಮರ+ಅಲ್ಲಿ = ಮರದಲ್ಲಿ |

**ಗಮನಿಸಿ:** ಹೊಸಗನ್ನಡದಲ್ಲಿ ಪ್ರಥಮಾ ವಿಭಕ್ತಿಯನ್ನು ಬಿಟ್ಟು ಬಳಸುವ ಪರಿಪಾಟವಿದೆ.

ಉದಾ: ಹುಡುಗನು ಬಂದನು ಎಂಬುದಕ್ಕೆ ಹುಡುಗ ಬಂದನು ಎಂದೂ ಬಳಸುವರು. ಅದೇ ರೀತಿ ಪಂಚಮೀ ವಿಭಕ್ತಿಯ ಬದಲು ತೃತೀಯಾ ವಿಭಕ್ತಿಯನ್ನೇ ಬಳಸುವರು.

ಉದಾ: 'ಮರದ ದೆಸೆಯಿಂದ' ಎಂಬುದನ್ನು 'ಮರದಿಂದ' ಎಂದು ಬಳಸುತ್ತಾರೆ.

**ಭಾಗ 'ಆ'**

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

ಅ) ಕನ್ನಡದಲ್ಲಿರುವ ಲಿಂಗಗಳು ಯಾವುವು?

ಆ) ಕನ್ನಡದಲ್ಲಿರುವ ವಚನಗಳು ಯಾವುವು?

ಇ) ಕನ್ನಡದಲ್ಲಿರುವ ವಿಭಕ್ತಿ ಪ್ರತ್ಯಯಗಳು ಎಷ್ಟು? ಅವು ಯಾವುವು?

* * * * * *

Not to be republished ©KTBS

# ೪. ಭೂಮಿತಾಯ ಕುಡಿಗಳು

– ಕೆ.ಎಸ್. ನಿಸಾರ್ ಅಹಮದ್

**ಪ್ರವೇಶ:** ಪ್ರಕೃತಿಯಲ್ಲಿ ಅಪಾರ ವೈವಿಧ್ಯ ಇದ್ದರೂ ಒಳಗೆ ಸಾಮರಸ್ಯ ಇರುವಂತೆ, ಭೂಮಿತಾಯ ಮಕ್ಕಳಾದ ನಾವೆಲ್ಲರೂ ಒಗ್ಗಟ್ಟಾಗಿರಬೇಕು. ಪ್ರಪಂಚದ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಆಚಾರ–ವಿಚಾರ, ಉಡುಗೆ–ತೊಡುಗೆ, ರೂಢಿ–ಸಂಪ್ರದಾಯ, ಆಹಾರ ಪದ್ಧತಿಗಳನ್ನು ಹೊಂದಿದ್ದರೂ ಮಾನವರಾದ ನಾವೆಲ್ಲರೂ ಒಂದೇ. ನಾಗರಿಕತೆ ಬೆಳೆದಂತೆ ನಾವೇ ಮಾಡಿಕೊಂಡಿರುವ ಧರ್ಮ, ಭಾಷೆ, ಜನಾಂಗ ಮತ್ತು ಸಂಪ್ರದಾಯಗಳು ಬೇರೆ ಬೇರೆಯಾಗಿರಬಹುದು. ಪಂಚಭೂತಗಳಾದ ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ ಒಂದೇ ಆಗಿರುವಾಗ ಈ ಭೂಮಿತಾಯಿಯ ಮಕ್ಕಳಾದ ನಾವೆಲ್ಲರೂ ಒಂದಾಗಿರಬೇಕು 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದು ಕವಿವಾಣಿ. ಮಾನವ ಹುಟ್ಟುವಾಗ 'ವಿಶ್ವಮಾನವ', ಬೆಳೆಯುತ್ತಾ 'ಅಲ್ಪಮಾನವ'ನಾಗುತ್ತಾನೆ. ಭಾರತವು ವಿಶ್ವದಲ್ಲೇ ವೈವಿಧ್ಯತೆಯನ್ನು ಹೊಂದಿದ ರಾಷ್ಟ್ರ. ಅನೇಕ ಧರ್ಮ, ಭಾಷೆ, ಉಡುಗೆ, ತೊಡುಗೆ, ಆಹಾರ ಪದ್ಧತಿಗಳನ್ನು ಹೊಂದಿದ್ದರೂ ನಾವೆಲ್ಲ ಸೋದರರಂತೆ ಬಾಳ್ವೆ ನಡೆಸಬೇಕೆಂಬ ಏಕತಾಭಾವನೆಯನ್ನು ಈ ಕವನವು ಒಳಗೊಂಡಿದೆ.

ನಾವು ನೀವು ಅವರು ಇವರು
ಒಂದೆ ಒಂದೆ ಒಂದೆ
ಭೂಮಿ ತಾಯ ಕುಡಿಗಳೆಂದು
ಪಣವ ತೊಡಿರಿ ಇಂದೆ ॥೧॥

ಸ್ವಸ್ವಭಾವ ಚಹರೆ ಬೇರೆ
ತಾಯ ಬಸಿರು ಒಂದೆ.
ಕಳಸ ಶಿಲುಬೆ ಬಿಳಿ ಮಿನಾರು
ಧರ್ಮದುಸಿರು ಒಂದೆ ॥೨॥




ಆಂಗ್ಲ ಆಫ್ರಿಕನ್ನರಲ್ಲಿ
ಹರಿವ ನೆತ್ತರೊಂದೆ.
ಅಕ್ಕಿ ರಾಗಿ ಬಿಳಿದು ಕರಿದು
ಹುಲ್ಲು ಬಣ್ಣ ಒಂದೆ ॥೩॥

©KTBS Not to be republished

ಬಾಣ ಬಿರುಸು, ಕುಂಡ, ಹಣತೆ
ಬೆಳಕ ಸತ್ವ ಒಂದೆ.
ಕಂದ ವೃತ್ತ ತ್ರಿಪದಿ ವಚನ
ರಸ ಕವಿತ್ವ ಒಂದೆ. ॥೪॥

ಕರ್ನಾಟಕ ವಂಗ ಆಂಧ್ರ
ಭಾರತೀಯರೊಂದೆ.
ಪೂರ್ವೋತ್ತರ ಪಡು ತೆಂಕಣ
ಗಾಳಿ ಮುಗಿಲು ಒಂದೆ. ॥೫॥

## ಕೃತಿಕಾರರ ಪರಿಚಯ



ಪ್ರೊ. ಕೆ.ಎಸ್. ನಿಸಾರ್ ಅಹಮದ್ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೩೬ರ ಫೆಬ್ರವರಿ ೫ರಂದು ಜನಿಸಿದರು. ಭೂಗರ್ಭಶಾಸ್ತ್ರದ ಪ್ರಾಧ್ಯಾಪಕರಾಗಿ ಸರ್ಕಾರಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿ ಈಗ ಬೆಂಗಳೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಭಾವನೆಗೆ ತಕ್ಕ ಭಾಷೆಯನ್ನು ಲಯ-ಗೇಯತೆಗಳೊಂದಿಗೆ ಅವರು ಬಳಸುವ ರೀತಿ ವಿನೂತನವಾದದ್ದು. ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಇವರು ಗಣನೀಯ ಸೇವೆ ಸಲ್ಲಿಸಿದ್ದಾರೆ. ಗಡಿ ಸಲಹಾ ಸಮಿತಿ ಮತ್ತು ಕನ್ನಡ ಕಾವಲು ಸಮಿತಿಗಳಲ್ಲೂ ಸೇವೆ ಸಲ್ಲಿಸಿದ್ದಾರೆ.

'ಮನಸು ಗಾಂಧಿ ಬಜಾರು', 'ನೆನೆದವರ ಮನದಲ್ಲಿ', 'ಸುಮುಹೂರ್ತ', 'ಸಂಜೆ ಐದರ ಮಳೆ', 'ಸ್ವಯಂ ಸೇವೆಯ ಗಿಳಿಗಳು', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ಅನಾಮಿಕ ಆಂಗ್ಲರು', 'ನವೋಲ್ಲಾಸ' ಮುಂತಾದವು ಇವರ ಕವನ ಸಂಕಲನಗಳು. ನಿತ್ಯೋತ್ಸವದ ಕವಿ ಎಂದೇ ಪ್ರಸಿದ್ಧರು. ಇವರ ಮಕ್ಕಳ ಪುಸ್ತಕ 'ಹಕ್ಕಿಗಳು' ರಾಷ್ಟ್ರೀಯ ಬಹುಮಾನ ಪಡೆದಿದೆ. ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಪಡೆದಿರುವ ಇವರು ಶಿವಮೊಗ್ಗದಲ್ಲಿ ೨೦೦೬ರಲ್ಲಿ ನಡೆದ ೭೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಭೂಮಿತಾಯ ಕುಡಿಗಳು ಕವನವನ್ನು ಶ್ರೀಯುತರ 'ಸಮಗ್ರ ಕವಿತೆಗಳು' ಕವನಸಂಕಲದಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ಕುಂಡ–ವಿವಿಧ ಬಣ್ಣದ ಬೆಳಕನ್ನು ಚೆಲ್ಲುವ ಪಟಾಕಿ;
ಕುಡಿ–ವಂಶ, ಚಿಗುರು;
ಕ್ರಿಮಿ–ಹುಳು;
ಚಹರೆ–ಲಕ್ಷಣ;
ತೆಂಕಣ–ದಕ್ಷಿಣ;
ತ್ರಿಪದಿ–ಮೂರು ಸಾಲಿನ ಪದ್ಯ;
ನೆತ್ತರು–ರಕ್ತ;
ಪಡು–ಪಡುವಣ, ಪಶ್ಚಿಮ;
ಪಣ–ಪ್ರತಿಜ್ಞೆ;
ಬಸಿರು–ಹೊಟ್ಟೆ;
ವಂಗ–ಬಂಗಾಳ;
ವಚನ–ಮಾತು;
ಸತ್ವ–ಸಾರ, ತಿರುಳು;
ಹಣತೆ–ದೀಪ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. 'ಭೂಮಿತಾಯ ಕುಡಿಗಳು' ಪದ್ಯದಲ್ಲಿ ಕವಿ ಯಾರು ಯಾರು ಒಂದು ಎಂದು ಹೇಳಿದ್ದಾರೆ?
೨. ಎಲ್ಲರೂ ಇಂದೇ ಏನೆಂದು ಪಣ ತೊಡಬೇಕೆಂದು ಕವಿ ನಿಸಾರ್ ಅಹಮದ್ ಆಶಿಸಿದ್ದಾರೆ?
೩. ಕಳಸ, ಶಿಲುಬೆ, ಬಿಳಿ ಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ?
೪. ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಯಾವುವು?
೫. ನಿತ್ಯೋತ್ಸವ ಕವಿ ಎಂದೇ ಪ್ರಸಿದ್ಧರಾಗಿರುವ ಕವಿ ಯಾರು?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ಹೇಳಿರುವುದರ ಔಚಿತ್ಯವೇನು?
೨. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ?
೩. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?
೪. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳಾವುವು?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. 'ಮನುಜ ಜಾತಿ ತಾನೊಂದೆ ವಲಂ' ಎಂಬ ಭಾವನೆ 'ಭೂಮಿತಾಯಿ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

೨. 'ಭೂಮಿತಾಯ ಕುಡಿಗಳು' ಈ ಕವನದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩. ನಿಸಾರ್ ಅಹಮದ್‌ರವರು ನಾವೆಲ್ಲರೂ ಭೂಮಿತಾಯಿಯ ಕುಡಿಗಳೆಂದು ಏಕೆ ಪಣ ತೊಡಬೇಕೆಂದು ಹೇಳಿದ್ದಾರೆ?

**ಈ) ಕೆಳಗಿನ ಸಾಲುಗಳ ಸಂದರ್ಭಗಳನ್ನು ಸ್ವಾರಸ್ಯಸಹಿತ ವಿವರಿಸಿ.**

೧. "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ".

೨. "ಸ್ವಸ್ವಭಾವ ಚಹರೆ ಬೇರೆ ತಾಯ ಬಸಿರು ಒಂದೆ".

೩. "ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೆ".

**ಉ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

೧. ಕಂದ, ವೃತ್ತ, ಉಪಮಾ, ತ್ರಿಪದಿ.

೨. ನಾನು, ನೀನು, ಅವರು, ಒಂದೆ.

೩. ಅಕ್ಕಿ, ರಾಗಿ, ಮಾವು, ಗೋಧಿ.

೪. ಬಾಣ, ಹಣತೆ, ಕುಂಡ, ಬಿರುಸು.

೫. ಕಳಸ, ವಚನ, ಶಿಲುಬೆ, ಮಿನಾರ್.

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧) ನೆತ್ತರು ೨) ಭೂಮಿ ೩) ತಾಯಿ ೪) ಬಸಿರು ೫) ಮುಗಿಲು ೬) ಗಾಳಿ.

**ಆ) ಕೆಳಗಿನ ಪದಗಳ ವಿರುದ್ಧಾರ್ಥಕ ರೂಪವನ್ನು ಬರೆಯಿರಿ.**

೧) ಧರ್ಮ ೨) ಕರಿದು ೩) ಬಿಳುಪು ೪) ಹಗಲು ೫) ಬೆಳಕು.

**ಇ) ಕೆಳಗಿನ ತತ್ಸಮಗಳಿಗೆ ತದ್ಭವ ರೂಪವನ್ನು ಬರೆಯಿರಿ.**

೧) ವರ್ಣ ೨) ಧರ್ಮ ೩) ಪ್ರಣತಿ ೪) ಭೂಮಿ.

© KTBS Not to be republished

ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿ.

೧) ಕುಡಿಗಳೆಂದು ೨) ಧರ್ಮದುಸಿರು ೩) ನೆತ್ತರೊಂದೆ

೪) ಪೂರ್ವೋತ್ತರ ೫) ಭಾರತೀಯರೊಂದೆ.

ಉ) "ಅ" ಪಟ್ಟಿಯನ್ನು "ಬ" ಪಟ್ಟಿಗೆ ಹೊಂದಿಸಿ ಬರೆಯಿರಿ.

| ಅ | | ಬ | ಉತ್ತರ |
|---|---|---|---|
| ೧. ಪೂರ್ವ | – | ಅ) ತೆಂಕಣ | ________ |
| ೨. ಪಶ್ಚಿಮ | – | ಆ) ಬಡಗಣ | ________ |
| ೩. ಉತ್ತರ | – | ಇ) ಜರಗಣ | ________ |
| ೪. ದಕ್ಷಿಣ | – | ಈ) ಪಡುವಣ | ________ |
| | – | ಉ) ಮೂಡಣ | |

**ಭಾಷಾ ಚಟುವಟಿಕೆ**

ಅ) ಭೂಮಿ ತಾಯ ಕುಡಿಗಳು ಪದ್ಯದ ಒಂದು ಮತ್ತು ಐದನೆಯ ನುಡಿಗಳನ್ನು ಕಂಠಪಾಠ ಮಾಡಿರಿ.

ಆ) ಕೆ.ಎಸ್. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಧ್ವನಿಸುರುಳಿಯಲ್ಲಿನ ಕವಿತೆಗಳನ್ನು ಆಲಿಸಿರಿ.

ಇ) ಭಾವೈಕ್ಯಕ್ಕೆ ಸಂಬಂಧಿಸಿದ ಇತರೆ ಕವಿಗಳ ಕವನಗಳನ್ನು ಸಂಗ್ರಹಿಸಿ.

## ಅಲಂಕಾರ

### ಭಾಗ 'ಅ'

**ಅರ್ಥಾಲಂಕಾರ**

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದೇ ಅರ್ಥಾಲಂಕಾರ. ಅರ್ಥಾಲಂಕಾರದಲ್ಲಿ ಸುಮಾರು ನೂರಕ್ಕೂ ಮಿಕ್ಕು ಅಲಂಕಾರಗಳಿವೆ ಎನ್ನಲಾಗಿದೆ. ಅವುಗಳಲ್ಲಿ ಉಪಮಾ ಮತ್ತು ರೂಪಕ ಅಲಂಕಾರಗಳ ಬಗ್ಗೆ ತಿಳಿದುಕೊಳ್ಳೋಣ.

**ಉಪಮಾಲಂಕಾರ :**

ಉಪಮಾ ಎಂದರೆ ಹೋಲಿಕೆ ಎಂದರ್ಥ. ಉಪಮೇಯ, ಉಪಮಾನಗಳೊಳಗೆ ಉಪಮಾ (ಹೋಲಿಕೆ) ಇರುವ ಅಲಂಕಾರವೇ ಉಪಮಾಲಂಕಾರ.

**ಉಪಮೇಯ :** ಇದನ್ನು ವರ್ಣ್ಯ ಎಂತಲೂ ಕರೆಯುವರು. ವಾಕ್ಯದಲ್ಲಿ ಕವಿ ಯಾವ ವಸ್ತುವನ್ನು ವರ್ಣಿಸುತ್ತಾನೆಯೋ ಅದೇ ವರ್ಣ್ಯ ಅಥವಾ ಉಪಮೇಯ ಎನಿಸಿಕೊಳ್ಳುತ್ತದೆ.



©KTBS Not to be republished

**ಉಪಮಾನ** : ಇದನ್ನು ವರ್ಣಕ ಎಂತಲೂ ಕರೆಯುವರು. ಯಾವ ವಸ್ತುವನ್ನು ಆಧಾರವಾಗಿಟ್ಟುಕೊಂಡು ಅಥವಾ ಅಳತೆಯನ್ನಾಗಿ ಇಟ್ಟುಕೊಂಡು ಉಪಮೇಯವನ್ನು ವರ್ಣಿಸಲಾಗಿದೆಯೊ ಆ ವಸ್ತುವೇ ವರ್ಣಕ ಅಥವಾ ಉಪಮಾನ.

ಉಪಮೇಯ, ಉಪಮಾನಗಳೊಳಗಿನ ಸಂಬಂಧವನ್ನು ಪರೀಕ್ಷಿಸುವುದರಿಂದ ಅಲಂಕಾರ ಯಾವುದೆಂದು ನಿರ್ಧರಿಸಬಹುದು.

**ಉದಾ:** ಗೌರಿಯ ಮುಖ ಕಮಲದಂತೆ ಅರಳಿತು.

ಇಲ್ಲಿ ಗೌರಿಗೆ ಸಂತೋಷವಾಗಿದೆ ಎಂದರ್ಥ.

| | | |
|---|---|---|
| ಉಪಮೇಯ | : | ಗೌರಿಯ ಮುಖ |
| ಉಪಮಾನ | : | ಕಮಲ |
| ಉಪಮಾವಾಚಕ | : | ಅಂತೆ |
| ಸಾಧಾರಣ ಧರ್ಮ | : | ಅರಳುವಿಕೆ |
| ಅಲಂಕಾರ | : | ಉಪಮಾಲಂಕಾರ |

**ಸಮನ್ವಯ :** ಇಲ್ಲಿ ಉಪಮೇಯವಾದ ಗೌರಿಯ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರ.

**ಭಾಗ 'ಆ'**

ಅ) ಕೆಳಗಿನ ಪದಪುಂಜಗಳಲ್ಲಿರುವ ಅಲಂಕಾರಗಳನ್ನು ಗುರುತಿಸಿ ಸಮನ್ವಯಗೊಳಿಸಿ.

೧. ಹೂವಿನ ಹಾಗೆ ಸುಂದರ, ೨. ಜೇನಿನಂತೆ ಸಿಹಿ ೩. ಹೃದಯ ಕಮಲದಂತೆ

ಆ) ನುಡಿಗನ್ನಡ ಪಠ್ಯ ಪುಸ್ತಕದಲ್ಲಿ ಬಂದಿರುವ ಉಪಮಾಲಂಕಾರವನ್ನು ಪಟ್ಟಿ ಮಾಡಿರಿ.

* * * * *

©KTBS Not to be republished

# ೫. ಶಿಶುನಾಳ ಶರೀಫ ಸಾಹೇಬರು

**– ಆರ್. ಎಸ್. ಸುಂಕದ**

**ಪ್ರವೇಶ:** ಕರ್ನಾಟಕವು ಶರಣರು, ದಾಸರು, ತತ್ವಪದಕಾರರು ಹಾಗೂ ಸೂಫಿಗಳು ಬದುಕಿ ಬಾಳಿದ ನಾಡು. ಇವರು ತಮ್ಮ ಬದುಕು ಚಿಂತನೆ, ಸಾಹಿತ್ಯಗಳಿಂದ ಜನರ ಮೇಲೆ ಒಳ್ಳೆಯ ಪ್ರಭಾವ ಬೀರಿದರು. ಇವರಲ್ಲಿ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಶಿಶುನಾಳ ಶರೀಫರೂ ಒಬ್ಬರು. ಶರೀಫರ ಬದುಕು ಹಾಗೂ ಪದಗಳು ಧಾರ್ಮಿಕ ಸಾಮರಸ್ಯದ ಅಪೂರ್ವ ನಿದರ್ಶನವಾಗಿವೆ. ಈಗಲೂ ಅವರ ಜಾತ್ರೆಗೆ ಉತ್ತರ ಕರ್ನಾಟಕದ ಲಕ್ಷಾಂತರ ಜನ ಸೇರುತ್ತಾರೆ. ನೂರಾರು ಭಜನಾ ತಂಡಗಳು ಶರೀಫರು ರಚಿಸಿದ ಪದಗಳನ್ನು ಹಾಡುತ್ತವೆ.

ಭರತ ಭೂಮಿಯ ಪುಣ್ಯಪುರುಷರಲ್ಲಿ ಶಿಶುನಾಳ ಶರೀಫ ಸಾಹೇಬರೂ ಒಬ್ಬರಾಗಿದ್ದಾರೆ. ಜಾನಪದದ ಪ್ರತಿನಿಧಿಯಾದ ಈ ಸಂತಕವಿ ಸಾಮಾನ್ಯ ಮಾನವನಿಗೂ ಅರ್ಥವಾಗುವಂತೆ ಮಾನವತೆಯ ತತ್ತ್ವಬೋಧನೆ ಮಾಡಿದ್ದಾರೆ. ತತ್ತ್ವವಿವೇಚನೆ, ಶಾಸ್ತ್ರಶ್ರವಣ ಮುಂತಾದವುಗಳು ಕೇವಲ ಉಚ್ಚ ಜನರ ಸೊತ್ತೆಂಬ ಮೂಢ ತಿಳುವಳಿಕೆ ನಮ್ಮಲ್ಲುಂಟು. ಆದರೆ ಶರೀಫರು ಈ ಮಾತನ್ನು ಹುಸಿಯಾಗಿಸಿ ಧರ್ಮಪರಿಪಾಲನೆ ಹಾಗು ತತ್ತ್ವ ಸೌರಭವನ್ನು ಪ್ರತಿಯೊಬ್ಬರೂ ಸವಿಯಲರ್ಹರೆಂಬುದನ್ನು ಸಾರಿದ್ದಾರೆ. ಅಂತೆಯೇ ಶರೀಫರ ತತ್ತ್ವ ಪದಗಳನ್ನು ವೇದಶಾಸ್ತ್ರಗಳನ್ನರಿಯದವರೂ ಗುನುಗುಡುತ್ತಿರುತ್ತಾರೆ. ಮನೆಮನೆಗೂ ಅಲೆದಾಡಿ ಜೀವ ಹೊರೆಯುವ ದಾಸಯ್ಯಗಳು ಭಿಕ್ಷುಕರು ಇಂಥ ತತ್ತ್ವಪದಗಳನ್ನು ಹಾಡುತ್ತಾರೆ. ಶ್ರೀಸಾಮಾನ್ಯನು ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳುವ ರಹಸ್ಯ ಈ ಹಾಡುಗಳಲ್ಲಿವೆ. ಅಲ್ಲದೆ ಶರೀಫರ ಹಾಡುಗಳ ಗತಿ ಗತ್ತುಗಳು ಜನಮನವನ್ನು ಹಿಡಿಯುವಂಥವುಗಳಾಗಿವೆ.

ಶರೀಫ ಸಾಹೇಬರು ೧೯ನೆಯ ಶತಮಾನದಲ್ಲಿ ಆಗಿ ಹೋದ ಅನುಭಾವಿಗಳು. ಅವರು ಶಿಶುನಾಳ ಎಂಬ ಗ್ರಾಮದಲ್ಲಿ ಜನಿಸಿದರು. ಶಿಶುನಾಳವು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲ್ಲೂಕಿನ ಒಂದು ಸಣ್ಣ ಗ್ರಾಮ. ಈ ಸಣ್ಣ ಗ್ರಾಮದ ಮುಸ್ಲಿಂ ಕುಟುಂಬವೊಂದರಲ್ಲಿ ಶರೀಫರು ೧೮೧೯ನೆಯ ಮಾರ್ಚ್ ೭ರಂದು ಜನ್ಮತಾಳಿದರು. ಅವರ ತಂದೆ ಹಜರತ ಇಮಾಮ ಸಾಹೇಬರು, ತಾಯಿಯ ಹೆಸರು ಹಾಜುಮ್. ವೃತ್ತಿಯಲ್ಲಿ ವ್ಯವಸಾಯಗಾರರಾದ ಹಜರತ ಇಮಾಮರು ಅಲ್ಲಾನ ಆದರ್ಶಭಕ್ತರು. ಸಮಾಜಸೇವೆ, ಸಮಾಜಕಲ್ಯಾಣ ಅವರ ಜೀವನದ ಹೆಗ್ಗುರಿಯಾಗಿತ್ತು. ಬಡ ಕುಟುಂಬವಾದರೂ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು.

ಹಜರತ್ ಇಮಾಂ ಸಾಹೇಬರಿಗೆ ಬಹುಕಾಲದವರೆಗೆ ಮಕ್ಕಳಾಗದಿರಲು, ದಂಪತಿಗಳೀರ್ವರೂ ಹುಲಗೂರಿನ ಸಂತ ಖಾದರ್‌ಷಾ ವಲಿಯವರ ಸಮಾಧಿಗೆ ಅನನ್ಯ ಭಕ್ತಿಯಿಂದ ಮಕ್ಕಳ ಫಲವನ್ನಪೇಕ್ಷಿಸಿ ಪ್ರಾರ್ಥಿಸಿದರು. ಮುಂದೆ ಕೆಲ ವರ್ಷಗಳಲ್ಲಿಯೇ ಅವರ ಪ್ರಾರ್ಥನೆ ಖಾದರ್ ಷಾರಿಗೆ ತಲುಪಿತೋ ಎಂಬಂತೆ ಹಾಜುಮ್ ಪುತ್ರರತ್ನಕ್ಕೆ ಜನ್ಮವಿತ್ತಳು. ಅಪರೂಪಕ್ಕೆ ಜನಿಸಿದ ಪುತ್ರರತ್ನಕ್ಕೆ ಮೊಹಮ್ಮದ್ ಶರೀಫ ಎಂದು ಹೆಸರಿಟ್ಟರು. ಮುಂದೆ ಇದೇ ಹೆಸರು ಶಿಶುನಾಳ ಶರೀಫ ಎಂದು ಜನಪ್ರಿಯವಾಯಿತು.

©KTBS Not to be republished

ಶರೀಫರ ಬಾಲ್ಯ ಶಿಶುನಾಳ ಗ್ರಾಮದಲ್ಲಿಯೇ ಕಳೆಯಿತು. ಪ್ರಾಥಮಿಕ ಶಿಕ್ಷಣದ ವಿದ್ಯಾಭ್ಯಾಸವೂ ಇಲ್ಲಿಯೇ ಆಯಿತು. ಮೊದಲು ಅವರು ಕನ್ನಡಕೂಲಿ ಮಠದಲ್ಲಿ ಓದಿದರು. ಶರೀಫರ ವಿದ್ಯಾಭ್ಯಾಸವು ಕನ್ನಡ ಮುಲ್ಕಿಯವರೆಗೆ ಮಾತ್ರ ಆಯಿತು. ಆದರೂ ಉರ್ದು ಹಾಗೂ ಮೋಡಿಗಳನ್ನು ಸ್ವಪ್ರಯತ್ನದಿಂದ ಕಲಿತರು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ. ಅಭಿನಯದಲ್ಲಿಯೂ ತುಂಬಾ ಆಸಕ್ತಿಯಿದ್ದುದರಿಂದ ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಬಯಲಾಟಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಿದ್ದರು. ಜಾತ್ರೆ, ಉತ್ಸವ ಮೊದಲಾದವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ, ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತುಹೋಯಿತು. ಮತ್ತೊಂದೆಡೆ ಇಸ್ಲಾಂ ಹಬ್ಬಗಳಾದ ಮೊಹರಂ ಹಬ್ಬದಲ್ಲಿ ಮತ್ತು ಅದರ ಭಾಗವಾದ ಅಲಾವಿ, ಕರ್ಬಲಾ ಆಚರಣೆಗಳಲ್ಲಿ ಭಾಗವಹಿಸುತ್ತಿದ್ದರು.

ಶರೀಫರು ಪ್ರಾಯಕ್ಕೆ ಬಂದ ಮೇಲೆ ಶಿಶುನಾಳ ಗ್ರಾಮದ ನೆರೆಯ ಹಳ್ಳಿಯೊಂದರಲ್ಲಿ ಕನ್ನಡ ಉಪಾಧ್ಯಾಯರಾಗಿ ಕೆಲವು ದಿನ ಕೆಲಸ ಮಾಡಿದರು. ಉಪಾಧ್ಯಾಯರಾಗಿದ್ದಾಗಲೇ ಅವರ ವಿವಾಹವು ಕುಂದಗೋಳದ ಫಕೀರ ಸಾಹೇಬರ ಜ್ಯೇಷ್ಠ ಪುತ್ರಿ ಫಾತಿಮಾರೊಂದಿಗೆ ಆಯಿತು. ಕೆಲಕಾಲದ ನಂತರ ಅವರಿಗೆ ಹುಟ್ಟಿದ ಏಕೈಕ ಪುತ್ರಿಯು ಕಾಲರಾ ರೋಗಕ್ಕೆ ಬಲಿಯಾದಳು. ಶರೀಫರ ನಡು ಹರೆಯದಲ್ಲಿಯೇ ಮಡದಿಯೂ ತೀರಿಹೋದಳು. ಮಗಳ ಮತ್ತು ಹೆಂಡತಿಯ ಮರಣಗಳಿಂದ ಶರೀಫರಿಗೆ ಸಹಿಸಲಾಗದ ಆಘಾತವಾಯಿತು.

ಆದರೂ ಧೃತಿಗೆಡದೆ ಶರೀಫರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಹಾಗೂ ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನು ಮರೆಯಲು ಹವಣಿಸುತ್ತಿದ್ದರು. ಮನೆಯ ಮಗ್ಗುಲಲ್ಲೆ ಒಂದು ಕಟ್ಟೆಯ ಮೇಲೆ ಅಧ್ಯಾತ್ಮ-ಸುಬೋಧ ಧರ್ಮ-ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ದುಃಖವನ್ನು ದೂರಗೊಳಿಸಿಕೊಂಡರು.

ಗುರುಗಳಲ್ಲಿ ಭಕ್ತಿ ಭಾವವನ್ನು ತೋರಿ ನಡೆಯುವವರನ್ನು ಗುರುಪಂಥದವರೆಂದು ಕರೆಯುತ್ತಾರೆ. ಕರ್ನಾಟಕದಲ್ಲೂ ಗುರುಗಳಿಗೆ ಅಗ್ರಸ್ಥಾನವಿದೆ.

ಶರೀಫರು ಗುರು ಕೃಪೆಯನ್ನು ಪಡೆಯಲು ಮಠ ಮಂದಿರಗಳಿಗೆ ಹೋಗುತ್ತಿದ್ದರು. ಗುರುವಿಗಾಗಿ ತಡಕಾಡುತ್ತಿರುವ ಈ ಭಕ್ತ ಜೀವಕ್ಕೆ ದೇವರು ಫಲವನ್ನೀಯದಿರಲಿಲ್ಲ. 'ಗುರುಗೋವಿಂದ ಭಟ್ಟ'ರೆಂಬ ಆದರ್ಶ ಗುರುಗಳು ಶರೀಫರಿಗೆ ದೊರಕಿದರು.

ಗೋವಿಂದಭಟ್ಟರು ಕಳಸ ಗ್ರಾಮದವರು. ಜ್ಞಾನಿಗಳೂ, ವಿದ್ಯಾವಂತರೂ ಎಂದು ಖ್ಯಾತಿವೆತ್ತವರು. ನಗೆಮೊಗದ ಪ್ರಸಾದ ವಾಣಿಯ ದಿವ್ಯವ್ಯಕ್ತಿಗಳಾಗಿದ್ದರು. ಕೈಯಲ್ಲಿ ತಾಮ್ರದ ತಂಬಿಗೆ, ಹೆಗಲ ಮೇಲೆ ಪಂಚೆ, ನಡುವಿನಲ್ಲಿ ಲಂಗೋಟಿ-ಇವು ಅವರ ವೇಷಭೂಷಣಗಳಾಗಿದ್ದವು. ಗುರುಗೋವಿಂದರು ಶಕ್ತಿಯ ಉಪಾಸಕರಾಗಿದ್ದರು. ಉದಾರ ಹೃದಯಿಗಳಾದ ಗೋವಿಂದ ಭಟ್ಟರು ಮಾನವಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಜಾತಿ ಮತಗಳ ಭೇದವೆಂದರೆ ಇವರಿಗಾಗದು. ಸ್ವಜಾತೀಯನಲ್ಲದ ತಮ್ಮ ಮುಸಲ್ಮಾನ ಶಿಷ್ಯನಿಗೆ ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು. ಗುರುಶಿಷ್ಯರಿಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮಾಡುತ್ತಿದ್ದರು.

©KTBS Not to be republished

'ಅಸಮ ತೇಜೋರೂಪ ಕಿರಣದೊಳಗೆ ಬಂದು, ದೊರಕಿದಾ ಗುರು ದೊರಕಿದಾ ಸದ್ಗುರು ನಿನ್ನ ಮಾಯಕ್ಕೆ ಮರುಳಾದೆ ಗುರುಗೋವಿಂದ ನೀ ಪರಮ ಗಾರುಡಿಗ' ಎಂದು ಭಯಭಕ್ತಿಯಿಂದ ಶರೀಫರು ಹಾಡಿದ್ದಾರೆ. ಇದರಂತೆ ಅನೇಕ ಪದಗಳಲ್ಲಿ ಶರೀಫರು ಗುರುಮಹಿಮೆಯನ್ನು ಸಾರಿದ್ದಾರೆ.



ಗುರು ಶಿಷ್ಯರು ವಿಶೇಷವಾಗಿ ಕೂಡಿಕೊಂಡೇ ಇರುತ್ತಿದ್ದರು.

ಗುರು ಶಿಷ್ಯರಿಬ್ಬರಿಗೂ ಅಂದಿನ ಸಮಾಜ ಬಹಿಷ್ಕಾರ ಹಾಕಿತ್ತು. ಹಾಳು ದೇವಾಲಯ ಮತ್ತು ಸಾರ್ವಜನಿಕ ಗುಡಿಗುಂಡಾರಗಳೇ ಅವರ ವಸತಿಸ್ಥಾನಗಳಾಗಿದ್ದವು. ಸ್ಫಟಿಕದಂತಹ ಸ್ವಭಾವದವರಾದ ಶರೀಫರು ನಿಷ್ಠುರ ಸ್ವಭಾವದವರಾದ್ದರಿಂದ ಯಾವ ದಯಾ ದಾಕ್ಷಿಣ್ಯಗಳಿಗೂ ಒಳಗಾಗುತ್ತಿರಲಿಲ್ಲ. ಸಮಾಜದ ತಪ್ಪು ನಡತೆಗಳನ್ನು ತೀಕ್ಷ್ಣವಾಗಿ ತಿದ್ದಿ ಮಾನವ ಕುಲದ ಹಿತವನ್ನು ಬಯಸುತ್ತಿದ್ದರು. ಶರೀರದ ಮೇಲಿನ ಸ್ಮೃತಿ ಪ್ರಜ್ಞೆಗಳನ್ನು ಕಳೆದುಕೊಂಡು ದೇವೋನ್ಮಾದದಲ್ಲಿ ಲೀನವಾಗುತ್ತಿದ್ದರು. ಸುತ್ತಲಿನ ಗ್ರಾಮಗಳಿಗೆ ಹೋಗಿ ಅಲ್ಲಿಯ ಜನರ ತಿಳಿವಳಿಕೆಯ ಮಟ್ಟದಲ್ಲಿ ಬೆರೆತು ಉಪದೇಶ ಮಾಡುತ್ತಿದ್ದರು.

ಗುಡಿಗೇರಿಯ ಕುಂಬಾರ ಮುದುಕಪ್ಪನ ಮನೆಗೆ ವಿಶೇಷವಾಗಿ ಬರುವ ಹಾಗೂ ಅಲ್ಲಿಯೇ ಊಟ ಉಪಚಾರಗಳನ್ನು ತೀರಿಸಿಕೊಳ್ಳುವ ರೂಢಿಯನ್ನಿಟ್ಟುಕೊಂಡಿದ್ದರು. ಶರೀಫರು ಅನುಭಾವ ಪದಗಳನ್ನು ಆನಂದಲಹರಿಯಲ್ಲಿ ನಾದಬ್ರಹ್ಮನೊಂದಿಗೆ ಒಂದಾಗಿ ಮೈಮರೆತು ಹಾಡುತ್ತಿರುವಾಗ ಆ ಹಾಡುಗಳನ್ನು ಕುಂಬಾರ ಮುದುಕಪ್ಪನೇ ಬರೆದುಕೊಳ್ಳುತ್ತಿದ್ದರು. ಶರೀಫರಿಗೆ ಆಟದ ಬೊಂಬೆಯಂತಿದ್ದ ಕುಂಬಾರ ಮುದುಕಪ್ಪನ ಮಗಳು ಬಸಮ್ಮ ಶರೀಫರ ನೂರಾರು ಹಾಡುಗಳನ್ನು ಚಾಚೂ ತಪ್ಪದೇ ಹೇಳುತ್ತಿದ್ದಳು.

ಉಪವಾಸವಿರುವ ಪ್ರಸಂಗ ಬಂದರೂ ಬೇಡಿ ತಿಂದರೆ ಋಣಭಾರದಲ್ಲಿ ಸಿಲುಕಬೇಕಾಗುವುದಲ್ಲಾ ಎಂದು ಉಪವಾಸವಿರುತ್ತಿದ್ದರು. ಯಾರಾದರೂ ಪ್ರೀತಿಯಿಂದ ಕರೆದಾಗ ನೀಡಿದ್ದೇ ಪ್ರಸಾದವೆಂದು ಸ್ವೀಕರಿಸುತ್ತಿದ್ದರು. ಗುಡಿಗೇರಿ ಕುಲಕರ್ಣಿಯವರು ಶರೀಫರ ಮೇಲಿನ ವಿಶೇಷ ಪೂಜ್ಯ ಭಾವನೆಯಿಂದ ಇವರಿಗೆ ದವಸಧಾನ್ಯಗಳನ್ನು ಕೊಟ್ಟು ಕಳಿಸುತ್ತಿದ್ದರು.

©KTBS Not to be republished

ಸಮಕಾಲೀನ ಮಠ ಮಾನ್ಯರ ಪ್ರಭಾವ ಶರೀಫ ಸಾಹೇಬರ ಮೇಲೆ ಆಗಿತ್ತು. ಶರೀಫರ ಮೇಲೆ ಪ್ರಭಾವ ಬೀರಿದ ಸಮಕಾಲೀನ ಹಿರಿಯ ಕಿರಿಯರೆಲ್ಲರ ಉಲ್ಲೇಖ ಶರೀಫರ ಹಾಡುಗಳಲ್ಲಿವೆ.

ಸತ್ಪುರುಷರ ಸಹವಾಸದಲ್ಲಿ ಬೆಳೆದು, ಬಾಳಿದ ಶರೀಫರು ಶಿಶುನಾಳ ಗ್ರಾಮದಲ್ಲಿ ೧೮೮೯ನೆಯ ಮಾರ್ಚ್ ೭ನೆಯ ದಿನಾಂಕದಂದು ಅವಸಾನ ಹೊಂದಿದರು. ಅವರ ಅಂತ್ಯವು ಶಾಂತಿಯುತವಾಗಿತ್ತು. ಮರಣಕ್ಕೆ ಮುಂಚೆ ಶರೀಫರು ಗುರುಗೋವಿಂದರನ್ನೂ ಹಿರಿಯರನ್ನೂ ಸ್ಮರಿಸಿದರು. ಶಿಶುನಾಳಧೀಶನಿಗೆ ನಮೋ ಎಂದರು. ಖಾದರಲಿಂಗಕ್ಕೆ ನಮೋ ಎಂದರು. ಅವಸಾನಕ್ಕೆ ಕೆಲ ನಿಮಿಷಗಳ ಮುಂಚೆ ಅವರಿಗೆ ದಿವ್ಯ ಸ್ಫೂರ್ತಿಯುಂಟಾಗಿ "ಬಿಡತೇನಿ ದೇಹ ಬಿಡತೇನಿ, ಭೂಮಿಗೆ ಕೊಡತೇನೀ ದೇಹಾ ಬಿಡತೇನಿ" ಎಂದು ಹಾಡಿದರು.

ಅಪೂರ್ವ ಅನುಭಾವ ಜೀವವೊಂದು ಪರತತ್ವ ಧ್ಯಾನದಲ್ಲಿಯೇ ಶಿವಸಾನ್ನಿಧ್ಯವನ್ನು ಹೊಂದಿತು. 'ಶರಣರ ಸಾವು ಮರಣದಲ್ಲಿ ನೋಡು' ಎಂಬಂತೆ ಶರೀಫರು ಬದುಕಿದ್ದಾಗ ಅವರ ಬೆಲೆ ಯಾರಿಗೂ ತಿಳಿಯಲಿಲ್ಲ. ಮರಣಾನಂತರ ಅವರ ಘನತೆ ಲೋಕಕ್ಕೆ ಅರಿವಾಯಿತು.

ಕರ್ನಾಟಕದ ಕಬೀರರೆಂದು ಹೆಸರುವಾಸಿಯಾದ ಶರೀಫರ ಪಾರ್ಥಿವ ಶರೀರವನ್ನು ಹಿಂದೂ ಮುಸ್ಲಿಂ ಸಮಾಜದವರು ತಮ್ಮ ತಮ್ಮ ಸಂಪ್ರದಾಯಗಳಂತೆ ಶವಸಂಸ್ಕಾರ ನಡೆಸಲು ಮುಂದಾದರು.

ಒಂದು ಕಡೆಗೆ ಕುರಾನಿನ ಪಠಣ ನಡೆಯಿತು; ಮತ್ತೊಂದು ಕಡೆಗೆ ವೇದಮಂತ್ರ ಪಠಣ ನಡೆಯಿತು. ಒಂದೆಡೆ 'ಅಲ್ಲಾಹೂ ಅಕ್ಬರ್' ಎಂಬ ಉಗ್ಗಡವಿದ್ದರೆ ಮತ್ತೊಂದೆಡೆ 'ಹರಹರ ಮಹಾದೇವ' ಎಂಬ ಉದ್ಘೋಷವು ಕೇಳಿ ಬರುತ್ತಿತ್ತು. ಎರಡೂ ಪರಂಪರೆಗಳ ಅನ್ವಯ ಶರೀಫರ ಅಂತ್ಯಸಂಸ್ಕಾರವು ನಡೆಯಿತು. ಅಪಾರ ಜನಸ್ತೋಮ ಪಾಲ್ಗೊಂಡು ದಾರ್ಶನಿಕ ಕವಿಗೆ ಅಶ್ರುತರ್ಪಣ ಮಾಡಿತು.

ಜನಸಾಮಾನ್ಯರ ವರಕವಿ ಶರೀಫರ ಸಾಹಿತ್ಯ ಶ್ರೀಮಂತವಾದುದಾಗಿದೆ. ಈ ಸಂತ ಕವಿಯಿಂದಾಗಿ ಶಿಶುನಾಳ ಗ್ರಾಮಕ್ಕೊಂದು ಬೆಲೆ ಬಂದಿದೆ. ಸಾಹಿತಿಗಳಿಗೆ, ರಸಿಕರಿಗೆ, ಕಲೋಪಾಸಕರಿಗೆ ಯಾತ್ರಾಸ್ಥಳವಾಗಿದೆ. ಶರೀಫರ ಮಾರ್ಗದರ್ಶನಕ್ಕಾಗಿ ಕನ್ನಡ ಮಾನವಕೋಟಿ ಅವರಿಗೆ ಋಣಿಯಾಗಿದೆ.

## ಕೃತಿಕಾರರ ಪರಿಚಯ



ಸುಂಕದ ಆರ್.ಎಸ್. ಇವರ ಪೂರ್ಣ ಹೆಸರು ರಾಮಕೃಷ್ಣ ಶ್ರೀಪಾದರಾವ್ ಸುಂಕದ. ಇವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೊರಬದಲ್ಲಿ ೧೯೫೧ರಲ್ಲಿ ಜನಿಸಿದರು. 'ಕನ್ನಡ ವ್ಯಾಕರಣ', 'ಗಂಗಾಧರ ಮಡಿವಾಳೇಶ್ವರ ತುರಮರಿ ಒಂದು ಅಧ್ಯಯನ', 'ಮೊರಬ ಗ್ರಾಮದ ಸಾಂಸ್ಕೃತಿಕ ಅಧ್ಯಯನ', ಇವು ಇವರ ಕೃತಿಗಳು. ಪ್ರಸ್ತುತ ಶಿಶುನಾಳ ಶರೀಫ ಸಾಹೇಬರು ಗದ್ಯಭಾಗವನ್ನು ಶ್ರೀಯುತರು ಸಂಪಾದಿಸಿರುವ 'ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಯಿಂದ ಆರಿಸಿಕೊಳ್ಳಲಾಗಿದೆ.

Not to be republished ©KTBS

## ಪದಗಳ ಅರ್ಥ

ಓರಣ–ಅಚ್ಚುಕಟ್ಟಾಗಿರುವುದು;

ಖ್ಯಾತಿವೆತ್ತ–ಪ್ರಸಿದ್ಧಿ ಹೊಂದಿದ, ಹೆಸರುವಾಸಿಯಾದ;

ಬಾಷ್ಪಾಂಜಲಿ–ಅಶ್ರುತರ್ಪಣ, ಕಣ್ಣೀರು;

ಲಹರಿ–ರಭಸ, ಚುರುಕು, ಕೌಶಲ, ಚಾಕಚಕ್ಯತೆ, ಅಲೆ, ತೆರೆ;

ಶ್ರವಣ–ಕೇಳುವಿಕೆ, ಆಲಿಸುವಿಕೆ;

ಸಾತ್ವಿಕ–ಸತ್ವಗುಣಗಳಿಂದ ಕೂಡಿದ, ಒಳ್ಳೆಯತನ, ಋಜುವಾದುದು;

ಸೌರಭ–ಪರಿಮಳ, ಸುವಾಸನೆ;

ಸ್ಫೂರ್ತಿ–ಪ್ರೇರಣೆ, ಪ್ರಚೋದನೆ;

ಹೆಗ್ಗುರಿ–ಹಿರಿದಾದ ಗುರಿ.

## ಟಿಪ್ಪಣಿ

**ಸಂತ ಖಾದರ್ಷಾ ವಲಿ –** ಈತ ಒಬ್ಬ ಸೂಫಿಸಂತ. ಈ ಸಂತನ ಬಗ್ಗೆ ಶರೀಫರು ಬಹಳ ಆದರ ಇಟ್ಟುಕೊಂಡಿದ್ದರು.

**ಕೂಲಿಮಠ –** ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಸೂಕ್ತ ಕಟ್ಟಡಗಳಿರಲಿಲ್ಲ. ದೇವಸ್ಥಾನದ ಜಗಲಿ, ಮಠದ ಪಡಸಾಲೆ, ಊರಿನ ಚಾವಡಿ ಅಥವಾ ಮಂಟಪಗಳಲ್ಲಿ ತರಗತಿಗಳು ನಡೆಯುತ್ತಿದ್ದವು. ಇಂತಹ ಶಾಲೆಗಳನ್ನು ಗ್ರಾಮೀಣ ಪ್ರದೇಶದಲ್ಲಿ 'ಕೂಲಿಮಠ'ಗಳೆಂದು ಕರೆಯಲಾಗುತ್ತಿತ್ತು.

**ಮುಲ್ಕಿ ಪರೀಕ್ಷೆ –** ಲೋಯರ್ ಸೆಕೆಂಡರಿ ಅಥವಾ ಐದು ರೂಪಾಯಿ ಪರೀಕ್ಷೆ ಎಂದು ಕರೆಯುತ್ತಿದ್ದ ಏಳನೆಯ ತರಗತಿ. ಮುಲ್ಕಿ ಪರೀಕ್ಷೆ ತೇರ್ಗಡೆಯಾದರೆ ಮೇಷ್ಟ್ರು ಕೆಲಸ ಮಾಡಲು ಅರ್ಹತೆ ದೊರೆಯುತ್ತಿತ್ತು.

**ಮೋಡಿ –** ಪ್ರೇಕ್ಷಕರನ್ನು ಮೈಮರೆಸುವಂತೆ ಮಾಡುವ ಎರಡು ಗುಂಪಿನ ನಡುವಿನ ಗಾರುಡಿ ಆಟ (ಮ್ಯಾಜಿಕ್, ಜಾದೂ, ಇಂದ್ರಜಾಲ, ಯಕ್ಷಿಣಿ, ಕೈಚಳಕ)

**ಅಲಾವಿ –** ಮೊಹರಂ ಹಬ್ಬದ ಸಂದರ್ಭದಲ್ಲಿ ಲೋಹದ ಹಸ್ತವಾದ 'ಬಾಬಯ್ಯ'ನನ್ನು ಕೂಡಿಸುವ 'ಬಾಬಯ್ಯನ ಗುಡಿ'ಯ ಮುಂದೆ ಗುಂಡಿ ತೋಡಿ ಅದರಲ್ಲಿ ಬೆಂಕಿ ಉರಿಸುತ್ತಾರೆ. ಆ ಗುಂಡಿಗೆ 'ಅಲಾವಿ' ಎಂದು ಕರೆಯುತ್ತಾರೆ.

**ಕರ್ಬಲಾ –** ಇರಾಕ್ ದೇಶದಲ್ಲಿರುವ ಸ್ಥಳ. ಹಜರತ್ ಹುಸೇನರು ಈ ಸ್ಥಳದಲ್ಲಿ ಶತ್ರುಗಳೊಡನೆ ಹೋರಾಡಿ ಹುತಾತ್ಮರಾದರು. ಮೊಹರಂ ಹಬ್ಬದ ಕೊನೆಯ ದಿನ ಹಜರತ್ ಹುಸೇನರನ್ನು ಸಾಂಕೇತಿಸುವ ಲೋಹದ ಹಸ್ತಗಳನ್ನು ಮೆರವಣಿಗೆಯಲ್ಲಿ ಊರ ಹೊರಗೆ ತಂದು ಸ್ನಾನ ಮಾಡಿಸಿ ಬಿಳಿ

©KTBS Not to be republished

ಬಟ್ಟೆಯಲ್ಲಿ ಅವುಗಳನ್ನು ಗಟ್ಟು ಕಟ್ಟುತ್ತಾರೆ. ಇದು ಹುತಾತ್ಮರಾದ ಹುಸೇನರ ಸಾಂಕೇತಿಕ ಆಚರಣೆಯಾಗಿದೆ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಶರೀಫರು ಯಾವ ಮಾತನ್ನು ಹುಸಿಗೊಳಿಸಿದರು?

೨. ಶರೀಫರು ಸ್ವಪ್ರಯತ್ನದಿಂದ ಏನನ್ನು ಕಲಿತರು?

೩. ಶರೀಫರು ಭಾಗವಹಿಸುತ್ತಿದ್ದ ಇಸ್ಲಾಂ ಹಬ್ಬ ಮತ್ತು ಮೇಳಗಳಾವುವು?

೪. ಶರೀಫರಿಗೆ ಸಹಿಸಲಾಗದ ಆಘಾತವಾಯಿತು ಏಕೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು? ವಿವರಿಸಿ.

೨. ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ?

೩. ಗುರುಪಂಥ ಎಂದರೇನು? ಗುರುಗಳ ಮಹತ್ವವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗೋವಿಂದಭಟ್ಟರು ಯಾರು? ಅವರ ಗುಣ ಸ್ವಭಾವಗಳನ್ನು ತಿಳಿಸಿರಿ.

೨. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿರಿ.

೩. ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ಬರೆಯಿರಿ.

೪. ಕರ್ಬಲಾ ಮತ್ತು ಅಲಾವಿಗಳ ನಡುವಿನ ವ್ಯತ್ಯಾಸವೇನು?

**ಈ) ಕೆಳಗಿನ ಸಂದರ್ಭಗಳನ್ನು ಸ್ವಾರಸ್ಯದೊಂದಿಗೆ ವಿವರಿಸಿ.**

೧. "ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು"

೨. "ದೊರಕಿದಾ ಗುರು ದೊರಕಿದಾ ಸದ್ಗುರು"

೩. "ಅಲ್ಲಾಹೂ ಅಕ್ಬರ್"

೪. "ಭೂಮಿಗೆ ಕೊಡತೇನೀ ದೇಹಾ"

©KTBS Not to be republished

**ಉ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಶರೀಫರ ಜನ್ಮಸ್ಥಳ ----------

೨. ಶರೀಫರ ಆದರ್ಶ ಗುರುವಿನ ಹೆಸರು-------

೩. ಶರೀಫರ ಹಾಡುಗಳನ್ನು ಬರೆದುಕೊಳ್ಳುತ್ತಿದ್ದವರು--------

೪. ಶರೀಫರ ಪತ್ನಿಯ ಹೆಸರು-----------

**ಊ) ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಶರೀಫರ ತಂದೆ : ಹಜರತ ಇಮಾಮ : : ಶರೀಫರ ತಾಯಿ :-------

೨. ಶಿಶುನಾಳದ ಸಂತ : ಶರೀಫರು : : ಹುಲಗೂರಿನ ಸಂತ : --------

೩. ಹಜರತ ಇಮಾಮ : ಹಾಜುಮ್ : : ಶರೀಫರು :--------

## ಭಾಷಾಭ್ಯಾಸ

**ಅ) ಕೆಳಗಿನ ತತ್ಸಮ ಪದಗಳ ತದ್ಭವ ರೂಪವನ್ನು ಬರೆಯಿರಿ.**

ಧರ್ಮ, ಭಿಕ್ಷು, ವ್ಯವಸಾಯ, ಭಕ್ತ, ಜನ್ಮ, ಮುಕ್ತಿ, ಪ್ರಸಾದ.

**ಆ) ಕೆಳಗಿನ ತದ್ಭವ ಪದಗಳ ತತ್ಸಮ ರೂಪವನ್ನು ಬರೆಯಿರಿ.**

ವರುಷ, ಬಿಜ್ಜೆ, ಮೊಗ, ಬಣ್ಣ, ರಿಣ, ಬೊಮ್ಮ, ಜೋಗಿ.

**ಇ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**

ಸದ್ಗುರು, ಬಾಷ್ಪಾಂಜಲಿ, ಜೀವವೊಂದು, ವಿದ್ಯಾಭ್ಯಾಸ, ದೇವೋನ್ಮಾದ.

**ಈ) ಕೆಳಗಿನ ಪದಗಳಿಗೆ ವಿಗ್ರಹವಾಕ್ಯವನ್ನು ಮಾಡಿ ಸಮಾಸದ ಹೆಸರನ್ನು ತಿಳಿಸಿರಿ.**

ಕಾವ್ಯವಾಚನ, ಹೆಗ್ಗುರಿ, ತತ್ತ್ವಪದ, ಮೈಮರೆತು, ಚಕ್ರಾಕಾರ.

## ಭಾಷಾ ಚಟುವಟಿಕೆ

ಅ) ಶರೀಫರ ಗೀತೆಗಳನ್ನು ಸಂಗ್ರಹಿಸಿರಿ.

ಆ) ಶರೀಫರ ಜೀವನ ಚಿತ್ರಣವನ್ನು ನಾಟಕದ ಮೂಲಕ ಅಭಿನಯಿಸಿರಿ.

©KTBS Not to be republished

## ವ್ಯಾಕರಣ

## ಭಾಗ – ಅ

**ವಾಕ್ಯಗಳು:**

ಪೂರ್ಣಾರ್ಥವನ್ನು ಕೊಡುವ ಪದಗಳ ಗುಂಪಿಗೆ ವಾಕ್ಯವೆನ್ನುತ್ತಾರೆ.

ಉದಾ: ೧) ತಮ್ಮಯ್ಯ ಹಣ್ಣನ್ನು ತಿಂದನು.

೨) ಮಾಧುರ್ಯ ತರಗತಿಯಲ್ಲಿ ಚೆನ್ನಾಗಿ ಓದುತ್ತಾಳೆ.

**ವಾಕ್ಯಗಳ ವಿಧಗಳು:**

**ವಾಕ್ಯಗಳಲ್ಲಿ ಮೂರು ವಿಧಗಳು:**

೧) ಸಾಮಾನ್ಯ (ಸರಳ) ವಾಕ್ಯ

೨) ಸಂಯೋಜಿತ ವಾಕ್ಯ

೩) ಮಿಶ್ರವಾಕ್ಯ

೧) **ಸಾಮಾನ್ಯ ವಾಕ್ಯ :** ಒಂದೇ ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥ ಕೊಡುವ ವಾಕ್ಯಗಳೇ 'ಸಾಮಾನ್ಯ ವಾಕ್ಯ'ಗಳು.

ಉದಾ: ೧) ಹಕ್ಕಿ ಹಣ್ಣನ್ನು ತಿನ್ನುತ್ತದೆ. ೨) ಮೀನು ನೀರಲ್ಲಿ ಈಜುತ್ತದೆ.

೨) **ಸಂಯೋಜಿತ ವಾಕ್ಯ:** ಎರಡು ಅಥವಾ ಅನೇಕ ಸಾಮಾನ್ಯ ವಾಕ್ಯಗಳು ಅರ್ಥಸ್ಪಷ್ಟತೆಗಾಗಿ ಸಂಬಂಧಾವ್ಯಯದ ಮೂಲಕ ಸೇರಿಕೊಂಡು ಒಂದು ಪೂರ್ಣ ಅರ್ಥವನ್ನು ನೀಡುವಂತೆ ರಚಿತವಾದ ವಾಕ್ಯಗಳೇ 'ಸಂಯೋಜಿತ ವಾಕ್ಯಗಳು'.

ಉದಾ: ೧) ಮಕ್ಕಳು ಹಾಲನ್ನು ಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನುತ್ತಾರೆ.

೨) ಮಕ್ಕಳು ಶಾಲೆಗೆ ಬರುತ್ತಾರೆ, ಆದರೆ ಪಾಠ ಹೇಳಲು ಅಲ್ಲಿ ಸಾಕಷ್ಟು ಶಿಕ್ಷಕರಿಲ್ಲ.

೩) **ಮಿಶ್ರವಾಕ್ಯ :** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿರುವಂತೆ ರಚಿತವಾದ ವಾಕ್ಯಗಳೇ 'ಮಿಶ್ರ ವಾಕ್ಯಗಳು'.

ಉದಾ: ೧) ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸು ಬರುವುದೆಂದು ತಿಳಿದು ಗ್ರಾಮಸ್ಥರು ಸಂತಸಪಟ್ಟರು.

೨) ಕುವೆಂಪು ಅವರ ಭಾವಗೀತೆಗಳನ್ನು ಕೇಳಿ ವಿದ್ಯಾರ್ಥಿಗಳು ಮೈಮರೆತರು.

## ವಾಕ್ಯ ಪರಿವರ್ತನಾ ಕ್ರಮ

ಸಾಮಾನ್ಯವಾಗಿ ಯಾವುದೇ ಬಗೆಯ ವಾಕ್ಯವನ್ನು ಮತ್ತೊಂದು ಬಗೆಯ ವಾಕ್ಯವಾಗಿ ಪರಿವರ್ತಿಸುವ ಕ್ರಮವನ್ನು 'ವಾಕ್ಯ ಪರಿವರ್ತನಾ ಕ್ರಮ' ಎನ್ನುವರು.

©KTBS Not to be republished

ಉದಾ: ೧) ಸಾಮಾನ್ಯ ವಾಕ್ಯ – ಮಕ್ಕಳು ಶಾಲೆಗೆ ಹೋದರು.

೨) ಸಂಯೋಜಿತ ವಾಕ್ಯ – ಮಕ್ಕಳು ಶಾಲೆಗೆ ಹೋದರು, ಆದರೆ ಅವರು ಅಲ್ಲಿ ಓದಲಿಲ್ಲ.

೩) ಮಿಶ್ರವಾಕ್ಯ – ಮಕ್ಕಳು ಶಾಲೆಗೆ ಹೋದರೆಂಬ ಸುದ್ದಿ ಕೇಳಿ ಪೋಷಕರು ಸಂತೋಷಪಟ್ಟರು.

## ಲೇಖನ ಚಿಹ್ನೆಗಳು :

ಲಿಖಿತ ಭಾಷೆಯಲ್ಲಿ ಉಚಿತ ಸ್ಥಳದಲ್ಲಿ ಅರ್ಥ ಅಥವಾ ಭಾವದ ಪೂರ್ಣ ನಿಲುಗಡೆ, ಅರ್ಧ ಇಲ್ಲವೇ ಅಲ್ಪ ನಿಲುಗಡೆ, ಪ್ರಶ್ನೆ, ಅಚ್ಚರಿ, ಒಪ್ಪಿಗೆ ಮುಂತಾದ ಭಾವಗಳನ್ನು ಸೂಕ್ತ ರೀತಿಯಲ್ಲಿ ಸೂಚಿಸಲು ಸಂಕೇತಗಳನ್ನು ಬಳಸುವುದು ರೂಢಿ. ಮಾತಿನಲ್ಲಾದರೆ ಉಸಿರು ಮತ್ತು ಧ್ವನಿಯ ಏರಿಳಿತದಿಂದ ಇದನ್ನು ಸಾಧಿಸಬಹುದು. ಅಂತಹ ಸ್ಪಷ್ಟಾರ್ಥ, ಸೂಚಿತ ಭಾವಗಳನ್ನು ಲಿಖಿತ ಸಂಕೇತಗಳ ಮೂಲಕ ನಿರ್ದೇಶಿಸುವ ಚಿಹ್ನೆಗಳೇ 'ಲೇಖನ ಚಿಹ್ನೆಗಳು'. ಲೇಖನ ಚಿಹ್ನೆಗಳಿಲ್ಲದ ಬರವಣಿಗೆ ಖಚಿತ ಭಾವಾರ್ಥವನ್ನು ಕೊಡದು.

೧) (.) **ಪೂರ್ಣ ವಿರಾಮ ಬಿಂದು:–** ವಾಕ್ಯದ ಪೂರ್ಣಾರ್ಥ ಕ್ರಿಯೆಯನ್ನು ಸೂಚಿಸುವುದು.

ಉದಾ: ವಿದ್ಯಾರ್ಥಿಗಳು ಚೆನ್ನಾಗಿ ಅಭ್ಯಾಸ ಮಾಡಬೇಕು.

೨) (;) **ಅರ್ಧವಿರಾಮ:–** ಪ್ರಧಾನ ವಾಕ್ಯದಲ್ಲಿಯ ಅನೇಕ ಉಪವಾಕ್ಯಗಳ ಅಂತ್ಯದಲ್ಲಿ ಮಾತ್ರ ಬರುವುದು.

ಉದಾ: ಊರು ಉಪಕಾರ ಅರಿಯದು; ಹೆಣ ಸಿಂಗಾರ ಅರಿಯದು.

೩) (,) **ಅಲ್ಪವಿರಾಮ:–** ಸಂಬೋಧನೆಯ ಮುಂದೆ ಅಲ್ಲದೆ ಕರ್ತೃ, ಕರ್ಮ ಹಾಗೂ ಕ್ರಿಯಾಪದಗಳಿಗೆ ವಿಶೇಷಣಗಳು ಬಂದಾಗ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಬಳಸುವ ಚಿಹ್ನೆ.

ಉದಾ: ಕನ್ನಡ, ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆಗಳು ದ್ರಾವಿಡ ಭಾಷಾ ವರ್ಗಕ್ಕೆ ಸೇರಿವೆ.

೪) (?) **ಪ್ರಶ್ನಾರ್ಥಕ ಚಿಹ್ನೆ:–** ಪ್ರಶ್ನೆಗಳನ್ನು ಬರೆಯುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಸುವ ಚಿಹ್ನೆ.

ಉದಾ: ನಿನ್ನದು ಯಾವ ಊರು? ನಿನ್ನ ಹೆಸರೇನು?

೫) (!) **ಭಾವಸೂಚಕ ಚಿಹ್ನೆ:–** ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಬಳಸುವ ಚಿಹ್ನೆ.

ಉದಾ: ಅಬ್ಬಾ! ಈ ವನ ಎಷ್ಟು ಸುಂದರವಾಗಿದೆ.

೬) (:–) **: ವಿವರಣಾತ್ಮಕ ಚಿಹ್ನೆ:–** ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ.

ಉದಾ: ವಿಷಯ: ಎರಡು ದಿನ ರಜೆ ನೀಡುವ ಬಗ್ಗೆ.

©KTBS Not to be republished

೭) (“ ”) **ಉದ್ಧರಣ ಚಿಹ್ನೆ:**– ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಚಿಹ್ನೆ.

ಉದಾ: “ವಚನ ಸಾಹಿತ್ಯವು ಪ್ರಪಂಚದ ಸಾಹಿತ್ಯದಲ್ಲಿಯೇ ವಿಶಿಷ್ಟ ಬಗೆಯ ಸಾಹಿತ್ಯವಾಗಿದೆ” ಎಂದು ಗುರುಗಳು ಹೇಳಿದರು.

೮) (‘ ’) **ವಾಕ್ಯವೇಷ್ಟನ ಚಿಹ್ನೆ:**– ಬರವಣಿಗೆಯಲ್ಲಿ ಪಾರಿಭಾಷಿಕ/ಪ್ರಧಾನ। ವಿಶಿಷ್ಟ ಅರ್ಥಕೊಡುವ ಪದಗಳನ್ನು ಬಳಸಿದಾಗ ಉಪಯೋಗಿಸುವ ಚಿಹ್ನೆ.

ಉದಾ: ಕನ್ನಡದಲ್ಲಿ ಅನೇಕ ‘ಇಂಗ್ಲಿಷ್’ ಪದಗಳು ಬಳಕೆಯಲ್ಲಿವೆ.

೯) ( ) **ಆವರಣ ಚಿಹ್ನೆ:**– ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: ಒಂದು ದಿನ ನರಿಯು ಕೊಕ್ಕರೆ (ನೀರು ಹಕ್ಕಿ)ಯನ್ನು ಊಟಕ್ಕೆ ಕರೆಯಿತು.

**ಸಂಧಿಗಳು :**

ಎರಡು ವರ್ಣಗಳು (ಅಕ್ಷರಗಳು) ಕಾಲ ವಿಳಂಬವಿಲ್ಲದಂತೆ ಹಾಗೂ ಅರ್ಥ ಕೆಡದಂತೆ ಸೇರುವುದೇ ಸಂಧಿ.

ಕನ್ನಡ ಪದದ ಅಕ್ಷರಕ್ಕೆ ಕನ್ನಡ ಪದ ಅಕ್ಷರ ಪರವಾಗಿ ಬಂದು ಸಂಧಿಯಾದಾಗ ಕನ್ನಡ ಸಂಧಿಯಾಗುತ್ತದೆ.

ಸಂಸ್ಕೃತ ಪದದ ಅಕ್ಷರಕ್ಕೆ ಸಂಸ್ಕೃತ ಪದ ಅಕ್ಷರ ಪರವಾಗಿ ಬಂದು ಸಂಧಿಯಾದಾಗ ಸಂಸ್ಕೃತ ಸಂಧಿಯಾಗುತ್ತದೆ.

ಸಂಧಿಯಾಗುವಾಗ ಸಂಧಿಸಿದ ವರ್ಣಗಳಲ್ಲಿ ಕೆಲವು ವ್ಯತ್ಯಾಸಗಳಾಗುತ್ತವೆ. ಇದನ್ನು ‘ಸಂಧಿಕಾರ್ಯ’ ಎನ್ನುತ್ತಾರೆ. ಸಂಧಿ ಕಾರ್ಯ ನಡೆಯುವಾಗ ಪೂರ್ವಪದ (ಮೊದಲ ಪದ), ಉತ್ತರಪದ (ಎರಡನೆ ಪದ) ಹಾಗೂ ಸಂಧಿಪದ (ಕೂಡುಪದ) ಎಂಬ ಮೂರು ರೀತಿಯ ಪದಗಳು ಬರುತ್ತವೆ.

ಕನ್ನಡದಲ್ಲಿ ಮೂರು ರೀತಿಯ ಸಂಧಿಗಳಿವೆ. ಅವೆಂದರೆ ಲೋಪ ಸಂಧಿ, ಆಗಮ ಸಂಧಿ ಮತ್ತು ಆದೇಶ ಸಂಧಿ.

©KTBS Not to be republished

## ಕನ್ನಡ ಸಂಧಿಗಳು

- **ಸ್ವರ ಸಂಧಿ**
  - **ಲೋಪ ಸಂಧಿ**
    - (ಇದ್ದ ಅಕ್ಷರ ಬಿಟ್ಟು ಹೋಗುವುದು)
    - ಸ್ವರ+ಸ್ವರ ಬಂದಾಗ ಅರ್ಥಕ್ಕೆ ಹಾನಿಯಾಗದಂತೆ ಇದ್ದಾಗ ಪೂರ್ವದ ಕೊನೆಯ ಸ್ವರ ಲೋಪವಾಗುವುದು
  - **ಆಗಮ ಸಂಧಿ**
    - (ಹೊಸದಾಗಿ ಅಕ್ಷರ ಬಂದು ಸೇರುವುದು)
    - ಸ್ವರ+ಸ್ವರ ಬಂದಾಗ ಮಧ್ಯದಲ್ಲಿ ಸಾಮಾನ್ಯವಾಗಿ 'ವ'ಕಾರ ಅಥವಾ 'ಯ'ಕಾರ ಬರುವುದು.
- **ವ್ಯಂಜನ ಸಂಧಿ**
  - **ಆದೇಶ ಸಂಧಿ**
    - (ಒಂದು ಅಕ್ಷರದ ಬದಲು ಬೇರೊಂದು ಅಕ್ಷರ ಬರುವುದು)
    - ಸ್ವರ+ವ್ಯಂಜನ, ವ್ಯಂಜನ+ವ್ಯಂಜನ ಬಂದಾಗ ಉತ್ತರಪದದ ಆದಿಯಲ್ಲಿರುವ
      - ೧ ಕ ತ ಪಗಳಿಗೆ ಗ ದ ಬ ಆದೇಶವಾಗುವುದು.
      - ೨ ಪ ಬ ಮಗಳಿಗೆ ವಕಾರ ಆದೇಶವಾಗುತ್ತದೆ.
      - ೩ ಸ ಕಾರಕ್ಕೆ ಚ ಜ ಛಗಳು ಆದೇಶವಾಗುತ್ತವೆ.

### ಪ್ರಕೃತಿಭಾವ

ಪ್ರಕೃತಿಭಾವ : ಅರ್ಥಕೆಡುವಂತಿದ್ದರೆ ಸಂಧಿ ಮಾಡಬಾರದು. ಸ್ವರದ ಮುಂದೆ ಸ್ವರವು ಬಂದರೂ, ಲೋಪ, ಆಗಮ ಮೊದಲಾದ ಸಂಧಿಕಾರ್ಯಗಳಾಗದೆ ಇದ್ದ ಹಾಗೆಯೇ ಇರುವುದೇ ಪ್ರಕೃತಿಭಾವ.

ಉದಾಹರಣೆ: ಅಯ್ಯೋ + ದೇವರೇ ನೀನೇ ಗತಿ? = ಅಯ್ಯೋ! ದೇವರೇ ನೀನೇ ಗತಿ?
ಅಬ್ಬಾ + ಅದು ಮನೆಯೇ? = ಅಬ್ಬಾ! ಅದು ಮನೆಯೇ?
ಅಕ್ಕಟಾ + ಮುಗ್ಧರಿಗೆ ಹಾನಿಯೇ? = ಅಕ್ಕಟಾ! ಮುಗ್ಧರಿಗೆ ಹಾನಿಯೇ?
ಓಹೋ + ಅವರಾ? = ಓಹೋ! ಅವರಾ

### ಸಂಸ್ಕೃತ ಸಂಧಿಗಳು

ಕನ್ನಡದಲ್ಲಿ ಸಂಸ್ಕೃತ ಶಬ್ದಗಳು ಅಧಿಕ ಸಂಖ್ಯೆಯಲ್ಲಿವೆ. ವ್ಯಾಕರಣದ ದೃಷ್ಟಿಯಲ್ಲಿ ಕನ್ನಡಕ್ಕೂ ಸಂಸ್ಕೃತಕ್ಕೂ ವ್ಯತ್ಯಾಸ ಇದೆ. ಕನ್ನಡದಲ್ಲಿ ಪ್ರಚಾರವಿರುವ ಸಂಸ್ಕೃತ ಪದಗಳು ಸಂಸ್ಕೃತ ವ್ಯಾಕರಣ ನಿಯಮವನ್ನೇ ಅನುಸರಿಸುತ್ತವೆ. ಅಂತಹ ಕೆಲವು ಸಂಧಿಗಳಿಗೆ ಉದಾಹರಣೆಗಳು:

©KTBS Not to be republished

೧) **ಸವರ್ಣದೀರ್ಘ ಸಂಧಿ:** ಒಂದೇ ಜಾತಿಯ ಅಕ್ಷರಗಳು ಪರಸ್ಪರ ಪರವಾದಾಗ ಅದೇ ಅಕ್ಷರ ದೀರ್ಘವಾದರೆ ಅದು 'ಸವರ್ಣ ದೀರ್ಘ ಸಂಧಿ' ಎನಿಸುವುದು.

ಉದಾ: ದೀಪ + ಅಲಂಕಾರ = ದೀಪಾಲಂಕಾರ (ಅ+ಅ=ಆ)
ರವಿ + ಇಂದ್ರ = ರವೀಂದ್ರ (ಇ+ಇ=ಈ)
ಗುರು + ಉಪದೇಶ = ಗುರೂಪದೇಶ (ಉ+ಉ=ಊ)

೨) **ಗುಣಸಂಧಿ:** 'ಅ ಆ'ಕಾರಗಳ ಮುಂದೆ 'ಇ ಈ'ಕಾರವು ಬಂದಾಗ 'ಏ'ಕಾರವೂ; 'ಉ ಊ'ಕಾರವು ಬಂದಾಗ 'ಓ'ಕಾರವೂ; 'ಋ'ಕಾರವು ಬಂದಾಗ 'ಅರ್'ಕಾರವೂ ಆದೇಶವಾಗಿ ಬಂದರೆ 'ಗುಣಸಂಧಿ'ಯಾಗುವುದು.

ಉದಾ: ಸುರ + ಇಂದ್ರ = ಸುರೇಂದ್ರ (ಅ+ಇ=ಏ)
ಜೀವನ + ಉತ್ಸಾಹ = ಜೀವನೋತ್ಸಾಹ (ಅ+ಉ=ಓ)
ಪೂರ್ವ + ಉತ್ತರ = ಪೂರ್ವೋತ್ತರ (ಅ+ಉ=ಓ)
ರಾಜ್ಯ + ಉತ್ಸವ = ರಾಜ್ಯೋತ್ಸವ (ಅ+ಉ=ಓ)
ಮಹಾ + ಋಷಿ = ಮಹರ್ಷಿ (ಅ+ಋ=ಅರ್)

೩) **ವೃದ್ಧಿ ಸಂಧಿ:** 'ಅ ಆ'ಕಾರಗಳ ಮುಂದೆ 'ಐ'ಕಾರವು ಬಂದಾಗ 'ಐ'ಕಾರವೂ; 'ಓ, ಔ'ಕಾರವು ಬಂದಾಗ 'ಔ'ಕಾರವೂ ಆದೇಶವಾಗಿ ಬಂದರೆ ವೃದ್ಧಿ ಸಂಧಿಯಾಗುವುದು.

ಉದಾ: ಏಕ + ಏಕ = ಏಕೈಕ (ಅ+ಏ=ಐ)
ಸಕಲ + ಐಶ್ವರ್ಯ = ಸಕಲೈಶ್ವರ್ಯ (ಅ+ಐ=ಐ)
ಸಿದ್ಧ + ಔಷಧ = ಸಿದ್ಧೌಷಧ (ಅ+ಔ=ಔ)
ಮಹಾ + ಔನ್ನತ್ಯ = ಮಹೌನ್ನತ್ಯ (ಅ+ಔ=ಔ)

೪) **ಯಣ್ ಸಂಧಿ:** 'ಯ್, ರ್, ಲ್, ವ್' ಆ ಅಕ್ಷರಗಳನ್ನು 'ಯಣ್' ಅಕ್ಷರಗಳು ಎನ್ನುವರು. ಇ,ಉ,ಋ, ಸ್ವರಗಳಿಗೆ ಸವರ್ಣವಲ್ಲದ ಸ್ವರಗಳು ಎದುರಾಗಿ ಬಂದಾಗ 'ಇ'ಗೆ ಯ್ 'ಉ'ಗೆ ವ್ 'ಋ'ಗೆ ರ್ ಗಳು ಆದೇಶವಾಗಿ ಬರುವುದೇ ಯಣ್ ಸಂಧಿ.

ಉದಾ: ಗತಿ + ಅಂತರ = ಗತ್ಯಂತರ (ಇ+ಅ=ಯ್)
ಮನು + ಅಂತರ = ಮನ್ವಂತರ (ಉ+ಅ=ವ್)
ಪಿತೃ + ಆರ್ಜಿತ = ಪಿತ್ರಾರ್ಜಿತ (ಋ+ಆ=ರ್)

**ಭಾಗ – ಆ**

**ಪ್ರಕೃತಿಭಾವ ಎಂದರೇನು?**
ಕನ್ನಡ ಮತ್ತು ಸಂಸ್ಕೃತ ಸಂಧಿಗಳಾವುವು? ಉದಾಹರಣೆಯೊಂದಿಗೆ ತಿಳಿಸಿರಿ.

*****

© KTBS Not to be republished

# ೬. ಗ್ರಂಥಾಲಯದಲ್ಲಿ

– ಸಿ.ಪಿ.ಕೆ.

**ಪ್ರವೇಶ:** 'ನಹಿ ಜ್ಞಾನೇನ ಸದೃಶಂ' ಜ್ಞಾನಕ್ಕೆ ಸಮನಾದುದು ಮತ್ತೊಂದಿಲ್ಲ ಎಂಬ ಮಾತಿದೆ. ಜ್ಞಾನವು ಸಾಗರದಂತೆ ವಿಸ್ತಾರವೂ ಸಮೃದ್ಧವೂ ಆಗಿದೆ. ಸಾವಿರಾರು ವರ್ಷಗಳ ಜ್ಞಾನಾನುಭವ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ದಾಖಲಾಗಿದೆ. 'ಪುಸ್ತಕದ ಒಳಗೆ ವಿಸ್ತಾರವಿಶ್ವವೇ ಅಡಕವಾಗಿದೆ'; ಇಂತಹ ಜ್ಞಾನ ಸಾಗರದ ಪ್ರತಿರೂಪವೇ ಗ್ರಂಥಾಲಯ. ಅಪಾರ ಗ್ರಂಥ ರಾಶಿಯ ಮುಂದೆ ನಿಂತಾಗ ನಮ್ಮ ಅಹಂಕಾರ ನಾಶವಾಗಿ ಅಲ್ಪತೆಯ ಅರಿವಾಗುತ್ತದೆ. ಈ ಭಾವನೆ 'ಗ್ರಂಥಾಲಯದಲ್ಲಿ' ಕವನದಲ್ಲಿ ನಿರೂಪಿತವಾಗಿದೆ.

ಕಣ್ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು
ನಿಂತು ಬೆರಗೀಯುತಿವೆ ಪುಸ್ತಕಾಲಯದಲ್ಲಿ;
ಇವುಗಳಡಿ ನಾಧೂಳ ಕಣವಾಗಿ ನಿಲ್ಲುವೆನು–
ಚಣಕಾಲ ಬಂದು ನಿಂತರೆ ಸಾಕು, ನನ್ನ ಮತಿ
ಮುದುಡಿ ಹೋಗುವುದಿಲ್ಲಿ: ನನ್ನ ಅಹಂಕಾರವನು
ನುಚ್ಚು ನೂರಾಗಿಸುವುದೀ ತಾಣ ಅಪ್ಪಳಿಸಿ!
ಒಳಗೆ ಬಂದೆನೊ ಬೇಗ ಹೊರಗೆ ಓಡುವತವಕ–
ಏಕೆನಲು ಬೆದರುವೆನು ನನಗಿಲ್ಲಿ ಬಹ ಲಯಕೆ!

ಬೇಕು ಯಾರಿಗೆ ಇಂಥ ಶಿಕ್ಷೆ! ದೂರವೆ ಇರಲಿ!
ಎನಿತು ಹಿರಿಬಾಳುಗಳ ಮೇಳ ನೆರೆದಿಹುದಿಲ್ಲಿ!
ಈ ಗ್ರಂಥಗಳೊ ಅಂಥ ಬಾಳುಗಳ ಪಳೆಯುಳಿಕೆ;
ಇವಕಂಡು ಮೂಲವನು ಚಿತ್ರಿಸಲು ಯತ್ನಿಸುವೆ!

ಕಡೆಗೆ ನಿಲ್ಲುವೆ ವಿಶ್ವರೂಪಾವಲೋಕನದಿ
ಪಾರ್ಥನೊಲು ತತ್ತರಿಸಿ ಭೀತ ವಿಸ್ಮಿತನಾಗಿ!

©KTBS Not to be republished

## ಕೃತಿಕಾರರ ಪರಿಚಯ



ಸಿ.ಪಿ.ಕೆ. ಎಂದೇ ಪ್ರಖ್ಯಾತರಾಗಿರುವ ಡಾ. ಸಿ.ಪಿ. ಕೃಷ್ಣಕುಮಾರ್ ಅವರು ೧೯೩೯ರಲ್ಲಿ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದ ಶ್ರೀಯುತರು ಕವಿ ಹಾಗೂ ವಿಮರ್ಶಕರು. ಸಂಸ್ಕೃತ ಮತ್ತು ಇಂಗ್ಲಿಷಿನಿಂದ ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ.

'ಅನಂತ ಪೃಥ್ವಿ', 'ತಾರಾಸಖ', 'ಸಾಹಿತ್ಯ ಪ್ರವೇಶ', 'ಕನ್ನಡ ವೇಣಿಸಂಹಾರ', 'ಕನ್ನಡ ನಾಗಾನಂದ', 'ಕಾವ್ಯಾರಾಧನೆ', 'ವರ್ತಮಾನ', 'ಬೊಗಸೆ', 'ಅಂತರತಮ', 'ಜನಪದ ಸರಸ್ವತಿ' ಮುಂತಾದವು ಇವರ ಕೃತಿಗಳು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ. ಗಂಗಾವತಿಯಲ್ಲಿ ನಡೆದ ೭೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಪ್ರಸ್ತುತ 'ಗ್ರಂಥಾಲಯದಲ್ಲಿ' ಕವನವನ್ನು ಸಿ.ಪಿ.ಕೆ ಅವರ 'ಅನಂತ ಪೃಥ್ವಿ' ಎಂಬ ಕವನಸಂಕಲದಿಂದ ಆರಿಸಲಾಗಿದೆ.

## ಪದಗಳ ಅರ್ಥ

ತತ್ತರಿಸು–ನಡುಗು, ಕಂಪಿಸು;
ತವಕ–ಬಯಕೆ, ಆತುರ;
ತಾಣ–ನೆಲೆ, ಬೀಡು, ಸ್ಥಳ;
ದಿಟ್ಟಿ–ದೃಷ್ಟಿ, ನೋಟ;
ನೆರೆ–ಸೇರು, ಜೊತೆಗೂಡು, ಒಟ್ಟುಗೂಡು, ಗುಂಪು ಸೇರು;
ಪಂಕ್ತಿ–ಸಾಲು;
ಪಳೆಯುಳಿಕೆ–ಅವಶೇಷ;
ಪುಸ್ತಕಾಲಯ–ಗ್ರಂಥಾಲಯ;
ಬೆದರು–ಭಯ, ಅಂಜಿಕೆ;
ಬೆರಗು–ಆಶ್ಚರ್ಯ, ವಿಸ್ಮಯ;
ಮೇಳ–ಕೂಡುವಿಕೆ, ಸಭೆ, ಗುಂಪು ಸೇರುವಿಕೆ;
ವಿಸ್ಮಿತ–ಸೋಜಿಗಗೊಳ್ಳು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಸಿ.ಪಿ.ಕೆಯವರು ಯಾವುದರ ಅಡಿಯಲ್ಲಿ ತಾನು ಧೂಳ ಕಣವಾಗಿ ಬಿಡುತ್ತೇನೆಂದು ಹೇಳಿದ್ದಾರೆ?

©KTBS Not to be republished

೨. ಕವಿಯು ತನ್ನ ಮತಿ ಎಲ್ಲಿ ಮುದುಡಿ ಹೋಗುತ್ತದೆ ಎಂದಿದ್ದಾರೆ?

೩. ಅಹಂಕಾರವನ್ನು ನುಚ್ಚು ನೂರಾಗಿಸುವ ತಾಣ ಯಾವುದೆಂದು ಸಿ.ಪಿ.ಕೆ.ಯವರು ಹೇಳಿದ್ದಾರೆ?

೪. ಸಿ.ಪಿ.ಕೆ. ಯವರು ಗ್ರಂಥಗಳನ್ನು ಯಾವುದರ ಪಳೆಯುಳಿಕೆ ಎಂದಿದ್ದಾರೆ?

೫. ಸಿ.ಪಿ.ಕೆಯವರು ಯಾವುದನ್ನು ವಿಶ್ವರೂಪಾವಲೋಕನ ಎಂದಿದ್ದಾರೆ?

೬. ಭೀತವಿಸ್ಮಿತರಾದ ಕವಿ ಯಾರ ಹಾಗೆ ತತ್ತರಿಸಿದರು?

**ಆ) ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವನ್ನು ತಿಳಿಸಿ.

೨. ಕವಿ ಸಿ.ಪಿ.ಕೆ. ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?

೩. ಸಿ.ಪಿ.ಕೆ.ಯವರು 'ಹಿರಿಬಾಳುಗಳ ಪಳೆಯುಳಿಕೆ', ಎಂದು ಯಾವುದನ್ನು ಕರೆದಿದ್ದಾರೆ ಏಕೆ?

**ಇ) ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧) "ಕಣ್‍ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು".

೨) "ಮುದುಡಿಹೋಗುವುದಿಲ್ಲಿ: ನನ್ನ ಅಹಂಕಾರ".

೩) "ಪಾರ್ಥನೊಲು ತತ್ತರಿಸಿ ವಿಸ್ಮಿತನಾಗಿ".

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಗ್ರಂಥಾಲಯದ ಬಗ್ಗೆ ಕವಿ ವ್ಯಕ್ತಪಡಿಸಿರುವ ಭಾವನೆಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ಗ್ರಂಥರಾಶಿಯ ಮುಂದೆ ಮನುಷ್ಯನ ಅಹಂಕಾರ ನುಚ್ಚು ನೂರಾಗುತ್ತದೆ ಎಂದು ಭಾವನೆ 'ಗ್ರಂಥಾಲಯದಲ್ಲಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**

ಪುಸ್ತಕಾಲಯ, ನನಗಿಲ್ಲಿ, ರೂಪಾವಲೋಕನ, ಪಾರ್ಥನೊಲು.

**ಆ) ತತ್ಸಮ ತದ್ಭವವನ್ನು ಬರೆಯಿರಿ.**

ದಿಟ್ಟಿ, ಪುಸ್ತಕ, ಚಣ, ತಾಣ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಗ್ರಂಥಾಲಯ, ಮೇಳ, ಪಳೆಯುಳಿಕೆ, ಭೀತವಿಸ್ಮಿತ.

© KTBS Not to be republished

## ಭಾಷಾ ಚಟುವಟಿಕೆ

೧. ಗ್ರಂಥಾಲಯಕ್ಕೆ ಭೇಟಿ ನೀಡಿ ಗ್ರಂಥಾಲಯದಿಂದ ಉಂಟಾಗುವ ಉಪಯೋಗವನ್ನು ತಿಳಿಸಿರಿ.

೨. 'ಪುಸ್ತಕಗಳು ನಮ್ಮ ಸಂಸ್ಕೃತಿಯ ಪ್ರತೀಕ', 'ಒಳ್ಳೆಯ ಓದುಗನು ದೇಶದ ಸಂಸ್ಕೃತಿಯನ್ನು ನಿರ್ಮಿಸುವವನಾಗಿರುತ್ತಾನೆ'. ಪುಸ್ತಕಗಳನ್ನು ಕುರಿತ ಇಂತಹ ನುಡಿಮುತ್ತುಗಳನ್ನು ಸಂಗ್ರಹಿಸಿರಿ.

೩. 'ಜ್ಞಾನ ಸಂಪಾದನೆಯಲ್ಲಿ ಗ್ರಂಥಾಲಯಗಳ ಪಾತ್ರ' ಈ ವಿಷಯ ಕುರಿತು ಪ್ರಬಂಧ ಬರೆಯಿರಿ.

೪. 'ಗ್ರಂಥಾಲಯದಲ್ಲಿ' ಪದ್ಯಭಾಗದ ಮೊದಲ ಎಂಟು ಸಾಲುಗಳನ್ನು ಕಂಠಪಾಠ ಮಾಡಿರಿ.

### ರೂಪಕಾಲಂಕಾರ

### ಭಾಗ–'ಅ'

ಉಪಮಾನವೇ ಉಪಮೇಯವೆಂದು ರೂಪಿಸಿ, ಅವೆರಡೂ ಒಂದೇ ಎಂದು ಅಭೇದತೆಯನ್ನು ಹೇಳುವ ಅಲಂಕಾರವೇ ರೂಪಕಾಲಂಕಾರ. ಇಲ್ಲಿ ಉಪಮೇಯಕ್ಕೂ ಉಪಮಾನಕ್ಕೂ ಯಾವುದೇ ರೀತಿಯ ವ್ಯತ್ಯಾಸವಿಲ್ಲ, ಏಕೀಭಾವವಿದೆ ಎಂದು ವರ್ಣಿಸಲಾಗುವುದು.

ಉದಾ: "ಮಗುವಿನ ಮುಖಕಮಲ ಅರಳಿತು".

ಇಲ್ಲಿ ಮಗುವಿಗೆ ಸಂತೋಷವಾಗಿದೆ ಎಂದು ಅರ್ಥ.

ಉಪಮೇಯ : ಮಗುವಿನ ಮುಖ

ಉಪಮಾನ : ಕಮಲ

ಅಭೇದ ಕಲ್ಪನೆ : ಮುಖ ಮತ್ತು ಕಮಲ ಎರಡೂ ಒಂದೇ

ಅಲಂಕಾರ : ರೂಪಕಾಲಂಕಾರ

ಸಮನ್ವಯ : ಇಲ್ಲಿ ಉಪಮೇಯವಾದ ಮಗುವಿನ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವ ವ್ಯತ್ಯಾಸವಿಲ್ಲ ಎರಡೂ ಒಂದೇ ಎಂದು ನಿರೂಪಿಸಿರುವುದರಿಂದ ಇದು ರೂಪಕಾಲಂಕಾರ.

### ಭಾಗ–'ಆ'

'ಗ್ರಂಥಾಲಯದಲ್ಲಿ' ಕವನದಲ್ಲಿರುವ ಅಲಂಕಾರ ವಾಕ್ಯಗಳನ್ನು ಪಟ್ಟಿಮಾಡಿರಿ.

*****

©KTBS Not to be republished

# ೭. ಧ್ವಜ ರಕ್ಷಣೆ

– ಎಸ್.ಆರ್. ರೋಹಿಡೇಕರ್

**ಪ್ರವೇಶ :** ೧೯೪೨ರ ಭಾರತದ 'ಚಲೇಜಾವ್' ಚಳುವಳಿಯು ಪ್ರಪಂಚದ ಸ್ವಾತಂತ್ರ್ಯ ಹೋರಾಟಗಳಲ್ಲೇ ಅತಿ ವಿಶಿಷ್ಟವಾದದ್ದು. ಚಳುವಳಿಯ ನಾಯಕರು ಸೆರೆಮನೆ ಸೇರಿದಾಗ ಜನಸಾಮಾನ್ಯರೇ ಚಳುವಳಿಯನ್ನು ಮುಂದುವರಿಸಿದರು. ಅವರಲ್ಲಿ ಜಾತಿ, ವರ್ಗ, ಲಿಂಗಭೇದವಿಲ್ಲದೆ ಹಳ್ಳಿ ಹಳ್ಳಿಗಳಲ್ಲಿ ಚಳುವಳಿ ಜೀವಂತವಾಗಿ ನಡೆಯಿತು. ಹೀಗೆ ಹೋರಾಡಿದವರಲ್ಲಿ ಒಬ್ಬ ಸಾಮಾನ್ಯ ಬಡ ಹುಡುಗನ ಕೆಚ್ಚು, ತಾಯಿಯ ತ್ಯಾಗ ಶ್ಲಾಘನೀಯವಾದುದು. ಸ್ವಾತಂತ್ರ್ಯ ಪೂರ್ವದಲ್ಲಿನ ಸಾಮಾನ್ಯ ಭಾರತೀಯರ ದೇಶ ಪ್ರೇಮವನ್ನು ಈ ನಾಟಕ ಸಂಕೇತಿಸುತ್ತದೆ.

**ಪಾತ್ರಗಳು:**

| | | |
|---|---|---|
| ರಾ. (ರಾಮ್‌ಸಿಂಗ್) | – | ತುಳಜಾಬಾಯಿಯ ಮಗ |
| ತು. (ತುಳಜಾಬಾಯಿ) | – | ರಾಮ್‌ಸಿಂಗನ ತಾಯಿ |
| ಡಿ.ಎಸ್.ಪಿ. | – | ಬ್ರಿಟಿಷ್ ಪೊಲೀಸ್ ಅಧಿಕಾರಿ |
| ಕು. (ಕುಲಕರ್ಣಿ) | – | ಭಾರತೀಯ ಅಧಿಕಾರಿ |
| ಶಿ. (ಶಿಪಾಯಿ) | – | ಸೈನಿಕ |
| ಸೋ. (ಸೋಮಣ್ಣ) | – | ಸ್ವಾತಂತ್ರ್ಯ ಹೋರಾಟಗಾರ |

**ಸಂದರ್ಭ**

ಮೋಹನಪುರವೆಂಬ ಊರಿನಲ್ಲಿ ಚಳವಳಿಯ ಕಾವು ಉಕ್ಕೇರಿದೆ. ಅಲ್ಲಿಯ ಪರಿಸ್ಥಿತಿಯನ್ನು ನಿಯಂತ್ರಿಸಲು ಡಿ.ಎಸ್.ಪಿ. ಅವರು ತಮ್ಮ ಇಲಾಖೆಯ ನಿಷ್ಠಾವಂತ ಅಧಿಕಾರಿ ಮಿ॥ ಕುಲಕರ್ಣಿಯವರನ್ನು ಕರ್ತವ್ಯದ ಮೇಲೆ ಹೋಗುವಂತೆ ಆದೇಶಿಸಿದ್ದಾರೆ.

ರಾಮಸಿಂಗ್ ಮೋಹನಪುರದ ಉತ್ಸಾಹೀ ತರುಣ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಸರ್ವಸಿದ್ಧತೆಯನ್ನು ನಡೆಸಿದ್ದಾನೆ. ಆ ದಿನದ ಬೆಳಗಿನ ಮೆರವಣಿಗೆಯನ್ನು (ಪ್ರಭಾತಫೇರಿ) ಮುನ್ನಡೆಸುವ ಅವಕಾಶ ಅವನಿಗೆ ಬಂದಿದೆ. ಇದನ್ನರಿತ ಊರಿನ ಹುಡುಗರ ದಂಡೇ ಹೋರಾಟದ ಯಶಸ್ಸಿಗಾಗಿ ಪುಟಿದೆದ್ದು ನಿಂತಿದೆ. ಇದನ್ನು ಹತ್ತಿಕ್ಕಲು ಪೊಲೀಸರ ದೊಡ್ಡ ಪಡೆಯೇ ಊರಿಗೆ ಬಂದಿಳಿದಿದೆ.

ಮಗನನ್ನು ಬಲಿ ಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯ ತಂದುಕೊಂಡು ಒಂದು ವರ್ಷದ ಹಿಂದಷ್ಟೆ ಈ ಹೋರಾಟದಲ್ಲಿ ತನ್ನ ಪತಿ ಗತಿಸಿದ್ದರೂ ಲೆಕ್ಕಿಸದೆ ತುಳಜಾಬಾಯಿಯು ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದಲ್ಲಿನ ಹೋರಾಟಕ್ಕೆ ಶುಭಕೋರಿ ಕಳುಹಿಸಿಕೊಟ್ಟಿದ್ದಾಳೆ.

* * * * * *

©KTBS Not to be republished

(ಮೋಹನಪುರದ ಎರಡು ರಸ್ತೆಗಳು ಕೂಡುವ ಒಂದು ಸ್ಥಳದಲ್ಲಿ ಜನ ಸೇರಿದ್ದಾರೆ. ರಾಮ್‌ಸಿಂಗ್ ಸೇರಿದಂತೆ ಅನೇಕ ಸ್ವಯಂಸೇವಕರು ಜಯ ಜಯಕಾರ ಕೂಗುತ್ತಾ ಬಂದು ಸೇರುವರು. ಅಷ್ಟರಲ್ಲಿ ಇಬ್ಬರು ಶಿಪಾಯಿಗಳು ಪೊಲೀಸ್ ಸಮವಸ್ತ್ರದಲ್ಲಿ ಬರುವರು.)

ಶಿಪಾಯಿ(೧) : ಇಲ್ಲಿ ಸಭೆ ಸೇರಿಸಕೂಡದೆಂದು ಡಂಗುರ ಸಾರಿದ್ದನ್ನು ಕೇಳಿಲ್ಲವೇ?

ರಾಮ್‌ಸಿಂಗ್ : ಹಾಗೆ ಡಂಗುರ ಸಾರಲು, ಇದು ನಿಮ್ಮಪ್ಪನ ಮನೆಯಲ್ಲ : ಇದು ನಮ್ಮ ಊರು.

ಶಿ (೨) : ಆದರೆ ಇಲ್ಲಿ ರಾಜ್ಯವಾಳುವವರು ನೀವಲ್ಲ, ಬ್ರಿಟಿಶ್ ಸರಕಾರ.

ರಾ : ನೀವು ಬ್ರಿಟಿಶ್‌ರಲ್ಲವಲ್ಲ!

ಶಿ (೧) : ನಾವು ಬ್ರಿಟಿಶ್ ಸರಕಾರದ ನೌಕರರು.

ರಾ : ನೌಕರರಲ್ಲ, ಗುಲಾಮರು; ಜನರೊಪ್ಪದೆ, ಬ್ರಿಟಿಶರ ಆಟ ಇನ್ನು ಭಾರತದಲ್ಲಿ ನಡೆಯಲಾರದು ಇದನ್ನು ಸೆರಗಿಗೆ ಗಂಟು ಹಾಕಿಕೊಳ್ಳಿ.

(ಕೈಯಲ್ಲಿ ಪಿಸ್ತೂಲು ಹಿಡಿದು ಫೌಜುದಾರ, ಕುಲಕರ್ಣಿ ದರ್ಪದಿಂದ ಪ್ರವೇಶಿಸುವರು.)

ಕುಲಕರ್ಣಿ : ಬ್ರಿಟಿಶರ ರಾಜ್ಯಭಾರ ನಡೆಯುತ್ತದೆಂದು ತೋರಿಸಲು, ನಮಗೆ ಆಜ್ಞೆಯಾಗಿದೆ.

ರಾ : ನಿಮ್ಮ ಅಧಿಕಾರ ನಡೆಯುವುದಿಲ್ಲ ಎಂದು ಸಾರಲಿಕ್ಕೇ ನಾವು ಸಭೆ ಸೇರಿದ್ದೇವೆ.

ಕು : ಎಷ್ಟು ಉದ್ಧಟನಾಗಿದ್ದೀಯಾ!

ರಾ : ನಿಮ್ಮಷ್ಟಲ್ಲ.

ಶಿ (೧) : ನೀನು ಯಾರ ಎದುರು ಮಾತನಾಡುತ್ತೀ ಎಂಬ ಎಚ್ಚರಿಕೆ ಇರಲಿ!

ರಾ : ನಿಮ್ಮ ಹಾಗೇ ಇವರೂ ಒಬ್ಬ ಗುಲಾಮರು.

ಶಿ (೨) : ಇವರು ಸುಪ್ರಸಿದ್ಧ ಕುಲಕರ್ಣಿ ಫೌಜುದಾರರು. ದೊಡ್ಡ ದೊಡ್ಡ ಮುಂದಾಳುಗಳೇ ಇವರಿಗೆ ಹೆದರುತ್ತಿರುವಾಗ ಹುಡುಗನಾದ ನೀನೆಷ್ಟರವನು?

ರಾ : ಇಂತಹ ಕವಡಿ ಕಿಮ್ಮತ್ತಿನ ಗುಲಾಮರಿಗೆ ಮುಂದಾಳುಗಳೇಕೆ? ನನ್ನಂತಹ ದೇಶಾಭಿಮಾನಿ ಹುಡುಗನೊಬ್ಬ ಸಾಕು.

ಕು : ಮುಚ್ಚುಬಾಯಿ.

ರಾ : ಬಿಚ್ಚೆಂದಾಗ ಬಿಚ್ಚಲು, ಮುಚ್ಚೆಂದಾಗ ಮುಚ್ಚಲು ಈ ಬಾಯಿ, ನಿಮ್ಮಂತಹ ಗುಲಾಮರ ಬಾಯಿಯಲ್ಲ.

(ಸತ್ಯಾಗ್ರಹಿಗಳು : **'ಬೋಲೋ ಭಾರತ ಮಾತಾಕಿ ಜೈ'**, **'ವಂದೇ ಮಾತರಂ'** ಎಂದು ಘೋಷಣೆ ಮಾಡುವರು.)

©KTBS Not to be republished

ಕು : ಸುಮ್ಮನೇ ಇಲ್ಲಿಂದ ಹೊರಟು ಹೋಗಿರಿ. ನನ್ನ ಸಿಟ್ಟು ನೆತ್ತಿಗೇರುತ್ತಿದೆ.

ರಾ : ಅದನ್ನು ಇಳಿಸುವ ಮಾಂತ್ರಿಕರು ನಮ್ಮಲ್ಲಿದ್ದಾರೆ.

ಕು : ನನ್ನ ಕೈಯಲ್ಲಿ ಏನಿದೆ ನೋಡಿದೆಯಾ? (ಪಿಸ್ತೂಲು ತೋರಿಸುವನು)

ರಾ : ನನ್ನ ಕೈಯಲ್ಲಿ ಏನಿದೆ ನೋಡಿದಿರಾ? (ರಾಷ್ಟ್ರಧ್ವಜವನ್ನೆತ್ತಿ ತೋರಿಸುವನು)

ಕು : (ಪಿಸ್ತೂಲು ತೋರಿಸಿ) ಇದರ ಶಕ್ತಿಯ ಮುಂದೆ ನೀನು ನಿಲ್ಲಬಲ್ಲೆಯಾ?

ರಾ : ಈ ಧ್ವಜದ ಶಕ್ತಿಯ ಮುಂದೆ ನೀವು ನಿಲ್ಲಬಲ್ಲಿರಾ?

ಕು : ಸುಮ್ಮನೆ ಕೆಳಗಿಡು ಅದನ್ನು.

ರಾ : ಈ ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ.

ಕು : ಅದನ್ನು ಹಿಡಿದುಕೊಂಡು ನಿಲ್ಲುವ ಧೈರ್ಯವಿದೆಯೇ ನಿನಗೆ?

ರಾ : ನನ್ನನ್ನು ಪಿಸ್ತೂಲಿನಿಂದ ಹೊಡೆಯುವ ಕ್ರೌರ್ಯವಿದೆಯೇ ನಿಮಗೆ?

ಕು : ನಮ್ಮದು ಪೋಲೀಸ್ ಡಿಪಾರ್ಟಮೆಂಟು.

ರಾ : ನಮ್ಮದು ಅದನ್ನು ಗೊತ್ತಿಗೆ ಹಚ್ಚುವ ಡಿಪಾರ್ಟಮೆಂಟು.

ಕು : ಈಗಲೇ ನಿನ್ನನ್ನು ಗೊತ್ತಿಗೆ ಹಚ್ಚುವೆನು (ಪಿಸ್ತೂಲಿನ ಕೈ ಮುಂದೆ ಮಾಡುವನು)

ರಾ : **'ಮಾಡು, ಇಲ್ಲವೆ ಮಡಿ'** ಎಂಬುದೇ ಗಾಂಧೀಜಿ ಹೇಳಿಕೊಟ್ಟ ಮಂತ್ರ. ಬದುಕುಳಿದು ಸಾಯುವುದಕ್ಕಿಂತ ಸತ್ತು ಬದುಕುಳಿಯುವುದೇ ಮೇಲು.

ಕು : ಯಾವುದು ಮೇಲೋ, ಯಾವುದು ಕೀಳೋ, ನೋಡು ಹಾಗಾದರೆ, ಇನ್ನೊಮ್ಮೆ ಹೇಳುವೆ, ಚದುರಿರಿ ಇಲ್ಲಿಂದ.

ರಾ : ಸಭೆ ಸೇರಿ, **'ಬ್ರಿಟಿಶರೇ, ಭಾರತ ಬಿಟ್ಟು ತೊಲಗಿರಿ'** ಎಂದು ಸಾರಲು ನಾವು ಬಂದಿದ್ದೇವೆ ಅದಕ್ಕಾಗಿ ಪಣ ತೊಟ್ಟಿದ್ದೇವೆ.

ಕು : ಹೀಗೆ ಹಟ ಮಾಡಬೇಡಿರಿ, ಚದುರಿರಿ ಮೊದಲು.

ರಾ : ಶಕ್ಯವಿಲ್ಲ. ಈ ಮೋಹನಪುರದಲ್ಲಿ ಒಂದು ಪಿಳ್ಳೆ ಜೀವಂತವಿರುವವರೆಗೆ, ನಿಮ್ಮ ಆಜ್ಞೆ ನಡೆಯಲಾರದು ಇಲ್ಲಿ.

ಕು : ನಡೆಯುವುದನ್ನು ತೋರಿಸುವೆ. ಅದಕ್ಕಾಗಿ ನಾನೂ ಪಣ ತೊಟ್ಟು ಬಂದಿರುವೆ.

ರಾ : ನಾವೂ ಸಭೆ ಸೇರಿಸಿಯೇ ತೀರುವೆವೆಂದು ಪಣ ತೊಟ್ಟು ಬಂದಿರುವೆವು.

(ಸತ್ಯಾಗ್ರಹಿಗಳು **'ಬೋಲೋ ಭಾರತ ಮಾತಾಕೀ ಜಯ್, ವಂದೇ ಮಾತರಂ'** ಎಂದು ಉದ್ಘೋಷಿಸುವರು.)

©KTBS Not to be republished

ಕು : ಸಾಕು ಮಾಡು ನಿನ್ನ ಮಾತನ್ನು. ಕೊನೆಯ ಸಾರಿ ಹೇಳುವೆ. (ಗಾಳಿಯಲ್ಲಿ ಮೇಲೆ ಗುಂಡು ಹಾರಿಸುವನು.) ಚದುರಿರಿ ಇಲ್ಲಿಂದ.

ರಾ : ಶಕ್ಯವಿಲ್ಲ. **'ಬೋಲೋ ಭಾರತ ಮಾತಾಕೀ ಜೈ, ಮಹಾತ್ಮಾ ಗಾಂಧೀಜಿ ಕಿ ಜಯ್'**. (ಸತ್ಯಾಗ್ರಹಿಗಳು: **ವಂದೇ ಮಾತರಂ** ಎಂದು ಘೋಷಿಸುವರು)

ಕು : ನಿಲ್ಲಿಸಿರಿ ಈ ಜಯ ಜಯಕಾರವನ್ನು. ಮುಂದಡಿ ಇಟ್ಟರೆ ಗತಿ ಚೆನ್ನಾಗುವುದಿಲ್ಲ.

ರಾ : (ಎರಡು ಹೆಜ್ಜೆ ಮುಂದಡಿ ಇಟ್ಟು) **ಭಾರತ ಮಾತಾ ಕೀ ಜೈ**. (ಸತ್ಯಾಗ್ರಹಿಗಳು 'ಜೈ' ಎನ್ನುವರು).

ಕು : (ಸಿಟ್ಟಿನಿಂದ) ತೆಗೆದುಕೋ ಹಾಗಾದರೆ ಫಲವನ್ನು! ಗುಂಡು ಹಾರಿಸುವನು. ರಾಮಸಿಂಗನು ಕೆಳಗೆ ಬೀಳುವನು – ಅಷ್ಟರಲ್ಲಿ ನೆಹರು ಶರ್ಟು, ಜಾಕೀಟು, ಗಾಂಧೀ ಟೋಪಿ ಧರಿಸಿದ ಸೋಮಣ್ಣನು ಪ್ರವೇಶಿಸುವನು ಸತ್ಯಾಗ್ರಹಿಗಳು **'ಭಾರತಮಾತಾಕಿ ಜಯ್', 'ರಾಮಸಿಂಗ್ ಕೀ ಜಯ್'** ಎಂದು ಘೋಷಿಸುವರು.

ಸೋಮಣ್ಣ : ಏನು? ಏನಿದು ಗದ್ದಲ?

ಸತ್ಯಾಗ್ರಹಿ೧ : ಪೋಲೀಸರು ಈ ರಾಮಸಿಂಗನನ್ನು ಗುಂಡಿಕ್ಕಿ ಕೊಂದರು.

ಸೋ : ಸೈತಾನರೇ, ಇಂತಹ ಬಾಲಕನ ಮೇಲೆ ಗುಂಡು ಹಾರಿಸಿರುವಿರಾ? ಫೌಜುದಾರರೇ, ಈ ಹೀನ ಕಾರ್ಯಕ್ಕೆ ನಿಮ್ಮ ಕೈಗಳಾದರೂ ಹೇಗೆ ಮೇಲೆತ್ತಿದವು?

ಕು : ಇವನು ಅತಿ ಉದ್ಧಟನಾಗಿ ಉತ್ತರಿಸಿದನು. ಇಂಥವರ ಗತಿ ಹೀಗೆಯೇ ಆಗುವುದು ಅವನು ಹಟಮಾರಿ.

ಸೋ : ಏನು? ಇವನು ಉದ್ಧಟನೇ? ಯಾವ ಮಾತಿಗೆ ಹಟ ಹಿಡಿದನು? ಕೊಟ್ಟ ಕೂಳಿಗಾಗಿ ಸರಕಾರದ ಹಟವನ್ನು ನೀವು ನಡೆಸಿಕೊಡುವಾಗ, ಭಾರತ ಮಾತೆಯ ಬಂಧ ವಿಮೋಚನೆಗೆ ಗಟ್ಟಿಯಾಗಿ ನಿಂತರೆ, ಅದು ಹಟ ! ಇವರನ್ನು ಹಿಡಿದು ಜೇಲಿಗೆ ಹಾಕಬಹುದಿತ್ತು. ಅದನ್ನು ಬಿಟ್ಟು, ಗುಂಡಿಟ್ಟು ಅವನನ್ನು ಕೊಂದದ್ದು, ನಿಮ್ಮ ಪರಾಕ್ರಮವಲ್ಲವೇ?

ಕು : ಎಷ್ಟು ಪರಿ ಹೇಳಿದರೂ ಕೇಳದೆ, ನಮ್ಮ ಆಜ್ಞೆ ಮೀರಿದ್ದಕ್ಕಾಗಿ, ಈ ಫಲ ಅವನಿಗೆ.

ಸೋ : ನಿಮ್ಮ ಆಜ್ಞೆ? ದುಶ್ಚಟಗಳಿಂದ ದೂರಾಗಿರಿ ಎಂದು ಆಜ್ಞೆ ಕೊಡಿರಿ. ಅಕ್ಷರಶಃ ಪಾಲಿಸುವೆವು. ಹೊಲಸಿನಲ್ಲಿ ಹೊರಳಾಡುವ ಜನಕ್ಕೆ ಸ್ವಚ್ಛತೆಯ ಪಾಠ ಕಲಿಸಿರಿ! ನಿಮ್ಮ ಆಳಾಗಿ ಸೇವೆ ಮಾಡುವೆವು. ನಮ್ಮ ಅಜ್ಞಾನವನ್ನು ದೂರಮಾಡಿ ಜ್ಞಾನ ಜ್ಯೋತಿಯನ್ನು ಬೆಳಗಿಸಿರಿ. ನಿಮ್ಮನ್ನು ದೇವರಂತೆ ಪೂಜಿಸುವೆವು. ಆದರೆ – ಆದರೆ, ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹಂಬಲಿಸುವ ನಮಗೆ, ಪಾರತಂತ್ರ್ಯದ ಕೆಸರಿನಲ್ಲಿಯೇ ಕೊಳೆಯುತ್ತಲಿರಿ ಎಂದು ಆಜ್ಞೆ ಮಾಡಿದರೆ, ಅದು ಹಿತಕರ ಆಜ್ಞೆಯಲ್ಲ; ಉನ್ಮತ್ತ ಗುಲಾಮರ ಉಪದ್ವ್ಯಾಪ, ದಾನವನ ದರ್ಪ, ದಾಸ್ಯದ ದ್ಯೋತಕ.

ಕು : ಹಿರಿಯರೇ, ನಿಮ್ಮ ಮಾತುಗಾರಿಕೆಯನ್ನು ನಿಲ್ಲಿಸಿರಿ. ಹೀಗೆ ಮಾತಾಡಿ ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು, ಅವರ ಬದುಕನ್ನು ಹಾಳು ಮಾಡದಿರಿ.



©KTBS Not to be republished

ಸೋ : ಅಡ್ಡದಾರಿಗೆಳೆಯಲು, ನಾವೇನು ಅವರಿಗೆ ಸೆರೆ, ಸೇಂದಿ ಸೇವಿಸಲು ಹೇಳಿಲ್ಲ, ನೀಚಕೃತ್ಯಕ್ಕೆ ನೂಕಿಲ್ಲ; ಕಳ್ಳತನ ಕಲಿಸಿಲ್ಲ. ಭಾರತಮಾತೆಯ ಬಂಧ ವಿಮೋಚನೆಗಾಗಿ ಬಲಿದಾನ ಮಾಡಲು ಉಪದೇಶಿಸಿದ್ದೇವೆ.

ಕು : ಇದರಿಂದ ಅವರಿಗೇನು ಲಾಭ?

ಸೋ : ಏನು ಲಾಭ? ದೇಶದ ಸ್ವಾತಂತ್ರ್ಯ ಹೋರಾಟವು ಲಾಭ–ಹಾನಿಗಳ ವ್ಯಾಪಾರವಲ್ಲ. ಪ್ರತಿಫಲಕ್ಕೆ ಆಶಿಸುವ ನಿಮ್ಮ ಸ್ವಾರ್ಥಬುದ್ಧಿಯೇ ನಿಮ್ಮನ್ನು ಗುಲಾಮರನ್ನಾಗಿ ಮಾಡಿದೆ. ಮಾವಿನ ಗಿಡಗಳನ್ನು ಹಚ್ಚಿ, ನೀರೆರೆಯುವವರು ಅದರ ಹಣ್ಣುಗಳನ್ನು ತಾವೇ ತಿಂದು ತೇಗಬೇಕೆಂಬ ಆಸೆಯಿಂದಲ್ಲ. ನಾವು ತಿನ್ನುವ ಮಾವಿನ ಹಣ್ಣಿನ ಗಿಡಗಳನ್ನು ನಾವೇ ಹಚ್ಚಿಲ್ಲ. ಪೂರ್ವಜರು ಮುಂದಿನ ಪೀಳಿಗೆಗಾಗಿ ಹಚ್ಚಿದ್ದಾರೆ.

ಕು : ಅದಕ್ಕೂ ನಿಮ್ಮ ಚಳುವಳಿಗೂ ಏನು ಸಂಬಂಧ?

ಸೋ : ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ ನಮ್ಮ ಮುಂದಿನ ಪೀಳಿಗೆಯವರು ಅದರ ಫಲವನ್ನು ಸವಿಯುತ್ತಾರೆ. ನಮ್ಮ ಕರ್ತವ್ಯದಲ್ಲಿ ಚ್ಯುತಿಯಾದರೆ, ನಾವು ನರಕಕ್ಕೆ ಹೋಗುವುದು ಖಂಡಿತ.

ಕು : ಈ ಸ್ವರ್ಗ–ನರಕಗಳ ಕಲ್ಪನೆಯನ್ನು ತಲೆಯಲ್ಲಿ ತುಂಬಿಕೊಂಡೇ ನಮ್ಮ ದೇಶ ಹಾಳಾಗಿದೆ.

ಸೋ : ನೀವು ಫೌಜುದಾರರಾದಾಕ್ಷಣ, ನಿಮಗೆ ಸುಖ ಸಿಗುವುದೆಂಬ ಭ್ರಾಂತಿ ಬಿಡಿ. ನಿಮ್ಮ ಸುತ್ತಮುತ್ತಲಿನ ಜನರ ಗೋಳಿಗೆ ನೀವೇ ಕಾರಣರು.

ಕು : ಸಾಕು ಮಾಡಿರಿ ನಿಮ್ಮ ಪುರಾಣ. ನಾನು ಸರಕಾರದ ನೌಕರ. ನನ್ನಲ್ಲಿ ಕರ್ತವ್ಯ ನಿಷ್ಠೆಯಿದೆ.

ಸೋ : ಕರ್ತವ್ಯ ನಿಷ್ಠೆಯೇ? ಹ ಹ ಹ ! ಗೇಣುಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ಅವರ ರಕ್ತದ ಮಡುವಿನಲ್ಲಿ ಮೆರೆಯುವುದು ಕರ್ತವ್ಯನಿಷ್ಠೆಯೇ? ಧಿಕ್ಕಾರವಿರಲಿ ನಿಮ್ಮ ಬದುಕಿಗೆ, ಶತಧಿಕ್ಕಾರ!

(ಅಷ್ಟರಲ್ಲಿ ತುಳಜಾಬಾಯಿ ಗೋಳಿಡುತ್ತಾ ರಭಸದಿಂದ ಬರುವಳು)

ತು : ರಾಮಸೀ, ಅಯ್ಯೋ ನನ್ನ ರಾಮಸಿ, ನಿನ್ನ ಕೈಯಲ್ಲಿಯ ನಿಶಾನೆಯನ್ನು ಕಸಿದುಕೊಂಡರೊ? ಇಕೋ, ಇನ್ನೊಂದು ಧ್ವಜ ತಂದಿರುವೆ, ತಕ್ಕೊ (ಅವನ ದೇಹದ ಮೇಲೆ ಬಿದ್ದು ಪ್ರಲಾಪಿಸುವಳು)

ಕು : ಹೆಣ್ಣುಮಗಳೇ, ಆ ಧ್ವಜವನ್ನು ಕೆಳಗಿಡು ಮೊದಲು.

ತು : ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಕೊಟ್ಟಿರುವೆ. ನನ್ನ ಪ್ರಾಣವನ್ನು ತ್ಯಜಿಸಲು ನಾನು ಸಿದ್ಧಳಿದ್ದೇನೆ. ಆದರೆ ಈ ಧ್ವಜವನ್ನು ಕೆಳಗಿಡಲಾರೆ. **'ಭಾರತ ಮಾತೆಗೆ ಜಯವಾಗಲಿ'!** (ಧ್ವಜವನ್ನು ಎತ್ತಿ ಹಿಡಿಯುವಳು. ತೆರೆಬೀಳುವುದು).

~~ **ಸಮಾಪ್ತಿ** ~~

©KTBS Not to be republished

## ಕೃತಿಕಾರರ ಪರಿಚಯ



'ಶಾಮ್ ರೋಹಿಡೆ' ಇದು ಪ್ರೊ॥ ಎಸ್.ಆರ್. ರೋಹಿಡೇಕರ್ ಅವರ ಕಾವ್ಯನಾಮ. ಇವರು ೧೯೧೫ ಸೆಪ್ಟೆಂಬರ್ ೧೫ರಂದು ವಿಜಯಪುರದಲ್ಲಿ ಜನಿಸಿದರು. ಅಲ್ಲಿಯೇ ಶಾಲಾ ಶಿಕ್ಷಣ ಮುಗಿಸಿ ಕೊಲ್ಲಾಪುರ ಮತ್ತು ಬೆಳಗಾವಿಯ ಕಾಲೇಜುಗಳಲ್ಲಿ ಶಿಕ್ಷಣ ಪಡೆದರು. ವಿಜಯಪುರದ ಶ್ರೀ ಸಿದ್ಧೇಶ್ವರ ಹೈಸ್ಕೂಲಿನಲ್ಲಿ ತಮ್ಮ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿ ನಂತರ ಸರಕಾರಿ ಸೇವೆಗೆ ಸೇರಿ ಹಳೆಯ ಮುಂಬೈ ಪ್ರಾಂತ್ಯದಲ್ಲೂ ೧೯೫೬ರ ನಂತರ ಈಗಿನ ಕರ್ನಾಟಕ ಪ್ರಾಂತ್ಯದಲ್ಲಿಯೂ ಪ್ರಾಧ್ಯಾಪಕ, ಪ್ರಾಂಶುಪಾಲ, ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಣ ಶಾಖಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ೧೯೭೫ರಲ್ಲಿ ನಿವೃತ್ತರಾದರು. ಶ್ರೀಯುತರು ೧೯.೧.೨೦೧೪ ರಂದು ನಿಧನರಾದರು.

ಇವರು ಬರೆದ **'ಮೂರು ಏಕಾಂಕ ನಾಟಕಗಳು'** ಕೃತಿಯಲ್ಲಿನ 'ರಾಮಸಿಂಗ್ ಚೌಕಾ' ಎಂಬ ಏಕಾಂಕ ನಾಟಕದಿಂದ **'ಧ್ವಜ ರಕ್ಷಣೆ'** ಈ ಭಾಗವನ್ನು ಆಯ್ದುಕೊಂಡಿದೆ.

©KTBS Not to be republished

## ಪದಗಳ ಅರ್ಥ

ಉದ್ಧಟ–ಒರಟ;
ಉಪದ್ವ್ಯಾಪ–ಕಿರುಕುಳ;
ಕಿಮ್ಮತ್ತು–ಬೆಲೆ, ಗೌರವ;
ಗೊತ್ತಿಗೆ ಹಚ್ಚು–ಪರೀಕ್ಷಿಸಿ ತಿಳಿ;
ಘೋಷಣೆ–ಆಜ್ಞೆ ಮಾಡುವ ಅಧಿಕಾರ;
ಸಾರುವಿಕೆ, ಜಾರಿಗೆ ತರುವಿಕೆ;
ಚ್ಯುತಿ–ಹಾನಿ;
ಡಂಗುರ–ತಮಟೆಯಂತಹ ವಾದ್ಯಗಳನ್ನು ಬಾರಿಸಿ ಸುದ್ದಿಯನ್ನು ಸಾರುವುದು;
ದಾಸ್ಯ–ಅಧೀನತೆ;
ದ್ಯೋತಕ–ಗುರುತು;
ಧುಮುಕು–ಸೇರು, ಭಾಗವಾಗು;
ಪಣತೊಡು–ನಿರ್ಧಾರ ತೆಗೆದುಕೊಳ್ಳು;
ಪರಾಕ್ರಮ–ಶೌರ್ಯ;
ಪೀಳಿಗೆ–ಸಂತತಿ;
ಫೌಜುದಾರರು–ಸ್ವಾತಂತ್ರ್ಯಪೂರ್ವದಲ್ಲಿದ್ದ ಪೊಲೀಸ್ ಪಡೆಯ ಒಬ್ಬ ಅಧಿಕಾರಿ;
ಮಾಂತ್ರಿಕರು–ಮಂತ್ರವಾದಿಗಳು;
ಸುಪ್ರಸಿದ್ಧ–ಹೆಸರುವಾಸಿಯಾದುದ್ದು;
ಸೈತಾನ–ಭೂತ, ಪಿಶಾಚಿ, ದುಷ್ಟಶಕ್ತಿ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಮೋಹನಪುರದಲ್ಲಿ ನಡೆದ ಚಳುವಳಿ ಯಾವುದು?

೨. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು?

೩. ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯವರು ಏನು ಮಾಡಿದರು?

೪. ಮೋಹನಪುರದ ಪರಿಸ್ಥಿತಿಯನ್ನು ನಿಯಂತ್ರಿಸಲು ಡಿ.ಎಸ್.ಪಿ ಏನು ಮಾಡಿದನು?

೫. ರಾಮಸಿಂಗ್ ಶಿಪಾಯಿಗಳಿಗೆ ಯಾವ ಮಾತನ್ನು ಸೆರಗಿಗೆ ಗಂಟು ಹಾಕಿಕೊಳ್ಳುವಂತೆ ಹೇಳಿದನು?

**ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

೧. ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.

೨. ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ.

೩. "ಅರಿಯದ ಬಾಲಕನನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಏಕೆ ಹೇಳಿದನು.?

೪. ಮೋಹನಪುರದ ಸತ್ಯಾಗ್ರಹಿಗಳು ಮಾಡುತ್ತಿದ್ದ ಘೋಷಣೆಗಳಾವುವು?

೫. ಕುಲಕರ್ಣಿಯು ರಾಮಸಿಂಗ್‌ನ ಮೇಲೆ ಗುಂಡುಹಾರಿಸಿದ್ದೇಕೆ?

**ಇ) ಸಂದರ್ಭ ಸಹಿತ ಕೆಳಗಿನ ಮಾತುಗಳ ಸ್ವಾರಸ್ಯವನ್ನು ವಿವರಿಸಿರಿ.**

೧. "ನಾವು ತಿನ್ನುವ ಮಾವಿನ ಹಣ್ಣಿನ ಗಿಡಗಳನ್ನು ನಾವೆ ಹಚ್ಚಿಲ್ಲ"

೨. "ಸಾಕು ಮಾಡಿರಿ ನಿಮ್ಮ ಪುರಾಣ"

೩. "ಹೆಣ್ಣುಮಗಳೇ, ಆ ಧ್ವಜವನ್ನು ಮೊದಲು ಕೆಳಗಿಡು"

೪. "ಕವಡಿ ಕಿಮ್ಮತ್ತಿನ ಗುಲಾಮರಿಗೆ ಮುಂದಾಳುಗಳೇಕೆ?"

೫. "ಒಂದು ಪಿಳ್ಳೆ ಜೀವಂತವಿರುವವರೆಗೆ, ನಿಮ್ಮ ಆಜ್ಞೆ ನಡೆಯಲಾರದು ಇಲ್ಲಿ."

೬. "ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ."

**ಈ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

೧. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು?ವಿವರಿಸಿರಿ.

೨. ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

೩. ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು? ವಿವರಿಸಿರಿ.

೪. ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.

©KTBS Not to be republished

**ಉ) ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಚಲೇಜಾವ್ ಚಳವಳಿ ನಡೆದ ವರ್ಷ----------

೨. ಮೋಹನಪುರದ ಚಳುವಳಿಯನ್ನು ಮುನ್ನಡೆಸಿದ ಉತ್ಸಾಹಿ ತರುಣನ ಹೆಸರು--------

೩. ರಾಮ್‌ಸಿಂಗ್‌ನ ತಾಯಿಯ ಹೆಸರು---------

೪. ಇಬ್ಬರು ಪೊಲೀಸಿನವರ ಜತೆ ಸೇರಿದ ಅಧಿಕಾರಿಯ ಹೆಸರು--------

೫. ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯು ಮಾಡದ ಕೆಲಸ--------

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**

ಜನರೊಪ್ಪದೆ, ಮುಚ್ಚೆಂದಾಗ, ದೇಶಾಭಿಮಾನ.

**ಆ) 'ಧ್ವಜ ರಕ್ಷಣೆ' ಪಾಠದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿರಿ.**

**ಇ) ಕೆಳಗೆ ಕೊಟ್ಟಿರುವ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.**

೧) ಸಿಟ್ಟು ನೆತ್ತಿಗೇರು ೨) ಪಣತೊಡು ೩) ಕವಡಿ ಕಿಮ್ಮತ್ತು

## ಭಾಷಾ ಚಟುವಟಿಕೆ

ಅ) ಪು.ತಿ.ನ. ಅವರ 'ಧ್ವಜರಕ್ಷಣೆ' ಪ್ರಬಂಧವನ್ನು ಓದಿರಿ.

ಆ) ಜಿ.ಪಿ. ರಾಜರತ್ನಂ ಅವರ 'ನಮ್ಮ ರಾಷ್ಟ್ರಧ್ವಜ' ಪುಸ್ತಕ ಓದಿರಿ.

ಇ) ಡಾ॥ ಸೂರ್ಯನಾಥ ಕಾಮತ್ ಅವರ 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು' ಮತ್ತು ಎಂ.ಪಿ ಶಂಕರನಾರಾಯಣರಾವ್ ಅವರ 'ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು' ಕೃತಿಗಳನ್ನು ಓದಲು ಪ್ರಯತ್ನಿಸಿ.

ಈ) ಹತ್ತು ಕ್ರಿಯಾಪದಗಳನ್ನು ಈ ಪಾಠದಿಂದ ಆಯ್ದು ಪಟ್ಟಿ ಮಾಡಿರಿ.

ಉ) ಕುಲಕರ್ಣಿಯ ಪಿಸ್ತೂಲು ಮತ್ತು ರಾಮಸಿಂಗ್ ಹಿಡಿದಿದ್ದ ಧ್ವಜ ಇವುಗಳಲ್ಲಿ ಯಾವುದು ಶ್ರೇಷ್ಠ? ಏಕೆ? ತರಗತಿಯಲ್ಲಿ ಚರ್ಚಿಸಿರಿ.

ಊ) ರಾಮಸಿಂಗ್, ತುಳಜಾಬಾಯಿ, ಡಿ.ಎಸ್.ಪಿ., ಸೋಮಣ್ಣ - ಪಾತ್ರದ ಬಗ್ಗೆ ತರಗತಿಯಲ್ಲಿ ಚರ್ಚಿಸಿ ಐದಾರು ವಾಕ್ಯಗಳಲ್ಲಿ ಟಿಪ್ಪಣಿ ಬರೆಯಿರಿ.

©KTBS Not to be republished

## ವ್ಯಾಕರಣ

ದೇಶ್ಯ ಅನ್ಯದೇಶ್ಯ

ಅಚ್ಚಗನ್ನಡ ಶಬ್ದಗಳೇ ದೇಶ್ಯ ಪದಗಳು

ಉದಾಹರಣೆ: ಮರ, ಗಿಡ, ಮನೆ, ಹೊಲ, ಗದ್ದೆ, ತೆಂಕಣ, ಮೂಡಣ, ಪಡುವಣ, ಬಡಗಣ, ತೆವರು, ತಗ್ಗು, ಇಳಿ, ನೇಸರು, ತಿಂಗಳು, ಕಲ್ಲು, ನೆಲ್ಲು, ಹೊಳೆ, ಬರು, ತಿನ್ನು, ಒಂದು, ಕೈ, ಕಾಲು, ಬಾಯಿ, ಕಣ್ಣು, ತಲೆ, ಕಿವಿ, ಹಾಲು, ಮೊಸರು, ಮಜ್ಜಿಗೆ, ಮೂಗು– ಮುಂತಾದವು.

ಸಂಸ್ಕೃತವನ್ನು ಒಳಗೊಂಡಂತೆ ಬೇರೆ ಬೇರೆ ಭಾಷೆಗಳಿಂದ ಬಂದಿರುವ ಶಬ್ದಗಳೇ ಅನ್ಯದೇಶ್ಯ ಪದಗಳು.

ಉದಾಹರಣೆ:

**ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು:** ಭೂಮಿ, ಪೃಥ್ವಿ, ಋಣ, ಋತು, ನಗರ, ಗ್ರಾಮ, ಅಧಿಕಾರ, ಮಂತ್ರಿ, ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಆಕಾಶ, ಗಗನ, ಶಾಲಾ, ಫಲ, ಪತ್ರ ಇತ್ಯಾದಿ.

**ಹಿಂದೂಸ್ಥಾನೀ ಭಾಷೆಯಿಂದ ಬಂದ ಶಬ್ದಗಳು:** ಕಚೇರಿ, ರಸ್ತೆ, ಕುರ್ಚಿ, ಕಾಗದ, ಬಂದೂಕ, ಅಸಲಿ, ನಕಲಿ, ರೈತ– ಇತ್ಯಾದಿ.

**ಇಂಗ್ಲಿಷಿನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಶಬ್ದಗಳು:** ಮೈಲು, ಪೊಲೀಸ್, ಪೋಸ್ಟ್, ಕಾರ್ಡು, ಕವರು, ಟಿಕೆಟ್, ಹೋಟೆಲ್, ಚೇರಮನ್, ರೂಂ, ಸ್ಕೂಲ್, ಕಾಲೇಜ್, ಯೂನಿವರ್ಸಿಟಿ, ರಿಕಾರ್ಡ್, ಆಕ್ಸಿಜನ್, ಹೈಡ್ರೋಜನ್–ಇತ್ಯಾದಿ.

**ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು:** ಅಲಮಾರು, ಸಾಬೂನು, ಪಾದ್ರಿ, ಮೇಜು–ಇತ್ಯಾದಿಗಳು.

### ತತ್ಸಮ – ತದ್ಭವಗಳು

ಸಂಸ್ಕೃತದಿಂದ ಕನ್ನಡಕ್ಕೆ ಸಾಕಷ್ಟು ಪದಗಳು ಬಂದಿವೆ. ಹೀಗೆ ಸಂಸ್ಕೃತದಿಂದ ಬಂದ ಪದಗಳಲ್ಲಿ ಕೆಲವು ಅಲ್ಪಸ್ವಲ್ಪ ಬದಲಾವಣೆಗೊಂಡು ಬಂದಿವೆ. ಇನ್ನು ಕೆಲವು ಪೂರ್ತಿ ಬದಲಾವಣೆಗೊಂಡು ಬಂದಿವೆ. ಹೀಗೆ ಸಂಸ್ಕೃತದಿಂದ ಬಂದಿರುವ ಪದಗಳನ್ನು ತತ್ಸಮ–ತದ್ಭವಗಳೆಂದು ಕರೆಯುವ ರೂಢಿಯಿದೆ.

**ತತ್ಸಮಗಳು** : ಸಂಸ್ಕೃತದಿಂದ ಬರುವಾಗ ಯಾವುದೇ ರೀತಿ ಬದಲಾವಣೆ ಹೊಂದದೆ ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದಗಳನ್ನು 'ತತ್ಸಮ'ಗಳೆಂದು ಕರೆಯುತ್ತಾರೆ. 'ತತ್' ಎಂದರೆ 'ಅದಕ್ಕೆ' (ಸಂಸ್ಕೃತಕ್ಕೆ) 'ಸಮ' ಎಂದರೆ 'ಸಮಾನ' ಎಂದರ್ಥ. ಅಂದರೆ ಸಂಸ್ಕೃತಕ್ಕೆ ಸಮಾನವಾದದ್ದು ಎಂದರ್ಥ.

ಉದಾ : ರಾಮ, ವಸಂತ, ಸೋಮ, ಚಂದ್ರ, ಗ್ರಹ, ಸ್ತ್ರೀ, ಶ್ರೀ ಭುವನ, ಶ್ರುತಿ, ಕಾವ್ಯ, ಪಶು – ಇತ್ಯಾದಿ.

©KTBS Not to be republished

**ತದ್ಭವಗಳು** : ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಬದಲಾವಣೆ, ಪೂರ್ಣ ಬದಲಾವಣೆ ಹೊಂದಿ ಬಂದಿರುವ ಪದಗಳನ್ನು 'ತದ್ಭವ' ಎಂದು ಕರೆಯುತ್ತಾರೆ. 'ತತ್' ಎಂದರೆ ಅದರಿಂದ, ಎಂದರೆ ಸಂಸ್ಕೃತದಿಂದ 'ಭವ' ಎಂದರೆ ಹುಟ್ಟಿದ್ದು. ಅಂದರೆ ಸಂಸ್ಕೃತದಿಂದ ಹುಟ್ಟಿದ್ದು ಎಂದರ್ಥ.

ಅಲ್ಪಸ್ವಲ್ಪ ಬದಲಾವಣೆಗೊಂಡ ತದ್ಭವರೂಪಗಳು : ಶಶಿ–ಸಸಿ, ಶಿರ–ಸಿರ, ಕಲಶ–ಕಳಸ, ಅಂಕುಶ–ಅಂಕುಸ, ವರ್ಷ–ವರುಷ ಇತ್ಯಾದಿ.

ಪೂರ್ಣ ವ್ಯತ್ಯಾಸ ಹೊಂದಿದ ತದ್ಭವರೂಪ : ದ್ಯೂತ–ಜೂಜು, ವಂಧ್ಯಾ–ಬಂಜೆ, ವಿದ್ಯಾಧರ–ಬಿಜ್ಜೋದರ, ವೈಶಾಖ–ಬೇಸಗೆ, ಕುಠಾರ–ಕೊಡಲಿ, ಪಾದುಕಾ–ಹಾವುಗೆ, ಅರ್ಕ–ಎಕ್ಕ–ಇತ್ಯಾದಿ.

**ಅನುಕರಣಾವ್ಯಯ – ದ್ವಿರುಕ್ತಿ – ಜೋಡಿನುಡಿ – ನುಡಿಗಟ್ಟು (ಪಡೆನುಡಿ)**

ಅನುಕರಣಾವ್ಯಯ – ಶಬ್ದವನ್ನು ಅನುಕರಿಸಿ ಬರುವ ಪದಗಳೇ ಅನುಕರಣಾವ್ಯಯಗಳು.

**ಉದಾ** : ಸರಸರ, ಚಟಚಟ, ಪಟಪಟ, ಥಣಥಣ, ಧಗಧಗ

**ದ್ವಿರುಕ್ತಿ** : ತೀವ್ರ ತರವಾದ ಭಾವನೆಗಳನ್ನು ಅಭಿವ್ಯಕ್ತಿಪಡಿಸಲು ಒಂದೇ ಪದವನ್ನು ಎರಡೆರಡು ಬಾರಿ ಪ್ರಯೋಗಿಸುವುದಕ್ಕೆ ದ್ವಿರುಕ್ತಿ ಎನ್ನುವರು.

**ಉದಾ:** ನೋಡಿನೋಡಿ, ಹೌದುಹೌದು, ಬೇಗಬೇಗ, ನಡೆನಡೆ.

**ಜೋಡಿನುಡಿ** : ಪ್ರಾಸಕ್ಕಾಗಿ, ಪರಿಣಾಮಕ್ಕಾಗಿ ಕೆಲವು ಪದಗಳನ್ನು ಭಾಷೆಯಲ್ಲಿ ಜೊತೆಜೊತೆಯಾಗಿ ಬಳಕೆಯಾಗುತ್ತದೆ. ಅದನ್ನು ಜೋಡುನುಡಿ ಎನ್ನುವರು.

**ಉದಾ:** ಕಪ್ಪಕಾಣಿಕೆ, ಹಣ್ಣುಹಂಪಲು, ಆಟಪಾಠ, ಮನೆಮಠ, ರೀತಿನೀತಿ.

**ನುಡಿಗಟ್ಟು (ಪಡೆನುಡಿ)** : ವಿಶೇಷಾರ್ಥ ನೀಡುವ ಪದಪುಂಜವನ್ನು ನುಡಿಗಟ್ಟು ಅಥವಾ ಪಡೆನುಡಿ ಎಂದು ಕರೆಯುತ್ತಾರೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ ಇಲ್ಲವೆ ಒಳಅರ್ಥ ಪ್ರಧಾನವಾಗಿರುತ್ತವೆ.

**ಉದಾ** : ಕೈಕೊಡು, ಹೊಂಚುಹಾಕು, ತಲೆದೂಗು, ಸಿಟ್ಟುನೆತ್ತಿಗೇರು

**"ಗುರಿ ಸಾಧಿಸಲು ಪ್ರಾಣ ತ್ಯಜಿಸಲು ಸಿದ್ಧನಾದವರು ನಾಯಕರಾಗುತ್ತಾರೆ"**

*****

Not to be republished ©KTBS

# ೮. ಬಸವಣ್ಣನವರ ವಚನಗಳು

– ಬಸವಣ್ಣ

**ಪ್ರವೇಶ:** ಹನ್ನೆರಡನೆಯ ಶತಮಾನವು ಜನ ಸಾಮಾನ್ಯರಿಗೆ ಸಾಹಿತ್ಯ ಲೋಕದ ಹೆಬ್ಬಾಗಿಲನ್ನು ತೆರೆದ ಕಾಲ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಇದು ಉಜ್ವಲವಾದ ಒಂದು ಘಟ್ಟ. ಶರಣರು ತಾಯ್ನುಡಿಯಲ್ಲಿಯೇ ತಮ್ಮ ಚಿಂತನೆ ಮತ್ತು ಅನುಭವಗಳನ್ನು ವ್ಯಕ್ತಪಡಿಸಿದರು. ಕೆಳಸ್ತರದಿಂದ ಬಂದ ಸಾಮಾನ್ಯ ಜನರು, ಅಸ್ಪೃಶ್ಯರು ಮತ್ತು ಮಹಿಳೆಯರು ತಮ್ಮ ಚಿಂತನೆ ಪ್ರಕಟಿಸಲು ಮುಕ್ತ ವಾತಾವರಣ ನಿರ್ಮಿಸಿದ್ದ ಕಾಲವದು. ಜನ ಸಾಮಾನ್ಯರ ನಡುವಿದ್ದುಕೊಂಡೇ ಶರಣರು ರಚಿಸಿದ ವಚನ ಸಾಹಿತ್ಯವು ಜನ ಮಾನಸದ ಕನ್ನಡಿಯಾಗಿದೆ. ಪ್ರಸ್ತುತ ವಚನಗಳಲ್ಲಿ ಬಸವಣ್ಣನವರು ಸ್ವರ್ಗ ನರಕಗಳ ಕಲ್ಪನೆಯನ್ನು ಸ್ಪಷ್ಟಪಡಿಸುತ್ತಾ, ಮನುಷ್ಯರು ಪರಿಶುದ್ಧ ಮನಸ್ಸಿನಿಂದ ದೈವ ಕೃಪೆಗೆ ಪಾತ್ರರಾಗುವ ಮಾರ್ಗವನ್ನು ಸೂಚಿಸುತ್ತಾರೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ಕೂಡಲ ಸಂಗಮದೇವರನೊಲಿಸುವ ಪರಿ.



ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿರೋ!
ಸತ್ಯವ ನುಡಿವುದೇ ದೇವ ಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ!
ಆಚಾರವೇ ಸ್ವರ್ಗ, ಅನಾಚಾರವೇ ನರಕ
ಕೂಡಲಸಂಗಮದೇವಾ ನೀವೇ ಪ್ರಮಾಣು.

## ಕೃತಿಕಾರರ ಪರಿಚಯ



ಬಸವಣ್ಣನವರು ಹನ್ನೆರಡನೆಯ ಶತಮಾನದ ಪ್ರಮುಖ ವಚನಕಾರರು. ವಿಜಯಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಜನಿಸಿದ ಬಸವಣ್ಣನವರು, ರಾಜ ಬಿಜ್ಜಳನಲ್ಲಿ ಕರಣಿಕರೂ ಹಾಗೂ ಭಂಡಾರದ ಮಂತ್ರಿಯೂ ಆಗಿದ್ದರು. ತಮ್ಮ ಅಂತರಂಗವನ್ನು ಸದಾ ಪರೀಕ್ಷೆಗೆ ಒಳಪಡಿಸುತ್ತಲೇ ಲೋಕಕಲ್ಯಾಣ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ವಚನ ಚಳುವಳಿಯ ನೇತಾರರಾಗಿ ಇವರು ಹೊಸ ಸಮಾಜದ ನಿರ್ಮಾಣಕ್ಕಾಗಿ ಹೊಸ ಮೌಲ್ಯಗಳನ್ನು ರೂಪಿಸಿದರು. 'ಕೂಡಲ ಸಂಗಮದೇವ' ಇವರ ವಚನಗಳ ಅಂಕಿತವಾಗಿದೆ. ಈ ವಚನಗಳನ್ನು ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ 'ಬಸವಣ್ಣನ ವಚನಗಳು' ಕೃತಿಯಿಂದ ಆರಿಸಲಾಗಿದೆ.

©KTBS Not to be republished

## ಪದಗಳ ಅರ್ಥ

ಅಂತರಂಗ–ಮನಸ್ಸಿನ ಒಳಗೆ; ಅನಾಚಾರ–ಕೆಟ್ಟ ನಡವಳಿಕೆ; ಆಚಾರ–ಒಳ್ಳೆಯ ನಡವಳಿಕೆ; ಪರಿ–ರೀತಿ; ಪ್ರಮಾಣು–ಅಳತೆ, ಆಧಾರ, ಮಾನದಂಡ, ಸಾಕ್ಷಿ; ಬಹಿರಂಗ–ಮನಸ್ಸಿನ ಹೊರಗೆ; ಬಣ್ಣಿಸು–ವರ್ಣಿಸು; ಮರ್ತ್ಯಲೋಕ–ಮನುಷ್ಯ ಲೋಕ, ಇಹ ಲೋಕ; ಮಿಥ್ಯ–ಸುಳ್ಳು; ಮುನಿ–ಕೋಪಗೊಳ್ಳು; ಹಳಿ–ದೂಷಿಸು, ನಿಂದಿಸು; ಹುಸಿ–ಸುಳ್ಳು.

### ಟಿಪ್ಪಣಿ

**ವಚನ:**

ವಚನ ಎಂದರೆ 'ಪ್ರಮಾಣ', 'ಕೊಟ್ಟ ಮಾತು' 'ಮಾಡಿದ ಸಂಕಲ್ಪ' ಎಂಬ ಅರ್ಥಗಳಿವೆ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಲಕ್ಷಣದಿಂದ ಕೂಡಿರುವ 'ವಚನ'ಗಳು ಕನ್ನಡ ಸಾಹಿತ್ಯದ ವಿಶೇಷ ಪ್ರಕಾರವಾಗಿವೆ. ಇವು ಅತ್ಯಂತ ಸರಳ ಹಾಗೂ ನೇರವಾಗಿದ್ದು ದೇಶೀ ಸೊಗಡಿನಿಂದ ಕೂಡಿವೆ. ಜನಸಾಮಾನ್ಯರ ಆಂದೋಲನದ ಭಾಗವಾಗಿ ಬೆಳೆದು, ಆತ್ಮಶುದ್ಧಿ ಮತ್ತು ಕಾಯಕದ ಮಹತ್ವವನ್ನು ಜಗತ್ತಿಗೇ ತಿಳಿಯುವಂತೆ ಸಾರಿವೆ. ಜನಸಾಮಾನ್ಯರ ಜೀವನದಲ್ಲಿ ಹಾಸುಹೊಕ್ಕಾಗಿರುವ ಸೂಕ್ಷ್ಮ ಸಮಸ್ಯೆಗಳ ಎಳೆಗಳನ್ನು ವಚನಗಳು ಮಾರ್ಮಿಕವಾಗಿ ತಿಳಿಸುತ್ತವೆ.

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ.**

೧. ಬಸವಣ್ಣನವರು ಹೇಳಿರುವಂತೆ ದೇವರನ್ನು ಒಲಿಸುವ ಪರಿ ಯಾವುದು?

೨. ದೇವಲೋಕ, ಮರ್ತ್ಯಲೋಕವೆಂಬುದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ?

೩. ಅಂತಃಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಬಸವಣ್ಣನವರು ತಿಳಿಸಿದ್ದಾರೆ?

೪. ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು?

©KTBS Not to be republished

ಆ) **ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯದಲ್ಲಿ ಬರೆಯಿರಿ.**

೧. ಆತ್ಮಶುದ್ಧಿಗೆ ಬಸವಣ್ಣನವರು ತಿಳಿಸಿರುವ ಸರಳ ಮಾರ್ಗಗಳಾವುವು? ವಿವರಿಸಿ.

೨. ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆ ಎಂದು ಬಸವಣ್ಣನವರು ಹೇಳಿದ್ದಾರೆ? ವಿವರಿಸಿರಿ.

೩. ನುಡಿ, ನಡೆಗಳು ಎಲ್ಲಕ್ಕಿಂತ ಮುಖ್ಯವಾದುದೆಂದು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.

೪. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಮಾನವೀಯ ಮೌಲ್ಯಗಳಾವುವು? ವಿವರಿಸಿರಿ.

೫. ಸ್ವಸ್ಥಸಮಾಜ ನಿರ್ಮಾಣಕ್ಕೆ 'ಬಸವಣ್ಣನವರ ವಚನಗಳು' ಪದ್ಯದಲ್ಲಿರುವ ಸಂದೇಶಗಳಾವುವು?ವಿವರಿಸಿರಿ.

ಇ) **ಕೆಳಗಿನ ಸಾಲುಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. 'ಇದೇ ಅಂತರಂಗ ಶುದ್ಧಿ'.

೨. 'ತನ್ನ ಬಣ್ಣಿಸ ಬೇಡ'.

೩. 'ಆಚಾರವೇ ಸ್ವರ್ಗ! ಅನಾಚಾರವೇ ನರಕ'.

ಈ) **ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಬಸವಣ್ಣನವರ ವಚನದಲ್ಲಿ ಹೇಳಿರುವಂತೆ ದೇವಲೋಕ -----------

೨. ಬಸವಣ್ಣನವರ ಪ್ರಕಾರ ಮರ್ತ್ಯಲೋಕವೆಂದು -----------

೩. ಬಸವಣ್ಣನವರ ವಚನಗಳ ಅಂಕಿತ -----------

೪. ಆಚಾರ ಸ್ವರ್ಗವಾದರೆ, ಅನಾಚಾರ---------

೫. ಅನ್ಯರಿಗೆ ಅಸಹ್ಯ ಪಡಬಾರದು, ತನ್ನನ್ನು---------

## ಭಾಷಾಭ್ಯಾಸ

ಅ) **ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

ಬೇಡ, ಅಂತರಂಗ, ಆಚಾರ, ಸತ್ಯ, ಸಹ್ಯ.

ಆ) **ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಬಣ್ಣಿಸು, ಹಳಿ, ಮುನಿ, ಹುಸಿ.

ಇ) **ಕೆಳಗಿನ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ.**

ವರ್ಣಿಸು, ಲೋಕ, ಸ್ವರ್ಗ.

© KTBS Not to be republished

## ಭಾಷಾ ಚಟುವಟಿಕೆ

ಅ) ಪ್ರಮುಖ ವಚನಕಾರರ ವಚನಗಳನ್ನು ಸಂಗ್ರಹಿಸಿ.

ಆ) ವಚನಕಾರರ ವಚನಗಳನ್ನು ಸಂಗ್ರಹಿಸಿ ರಾಗವಾಗಿ ಹಾಡಿರಿ.

ಇ) ಬಸವಣ್ಣನವರ ವಚನಗಳು ಪದ್ಯವನ್ನು ಕಂಠಪಾಠ ಮಾಡಿರಿ.

ಈ) ಬೇರೆ ಬೇರೆ ವಚನಕಾರರ ಅಂಕಿತಗಳನ್ನು ತಿಳಿಯಿರಿ.

## ಭಾಷಾ ರಚನೆ

### ಆಯ್ದ ಪದ್ಯಗಳ ಭಾವಾರ್ಥ

ಇದು ಪಠ್ಯವಸ್ತುವಿನ ಒಂದು ಅಂಶ. ನಿಗದಿ ಪಡಿಸಲಾದ ಯಾವುದಾದರೊಂದು ಪದ್ಯದ ಸಾರಾಂಶವನ್ನು ಬರೆಯಬೇಕಾಗುತ್ತದೆ.

ಭಾವಾರ್ಥ ಎಂದರೆ, ಪದ್ಯವನ್ನು ಪದಶಃ ಓದಿ, ಅನಂತರ ಪುನಃ ಓದಿದಾಗ ತಿಳಿಯುವ ಪದಗಳ ಹಿಂದೆ ಅವಿತಿರುವ ಅರ್ಥ. ಇದೇ ಪದ್ಯದ ಹೃದಯ. ಇದನ್ನು ಅರಿತರೆ ಆಗುವ ಆನಂದವೇ ಕಾವ್ಯಾನಂದ.

ಈಗ ಬಿ.ಎಂ.ಶ್ರೀ. ಅವರು ಅನುವಾದಿಸಿರುವ ಒಂದು ಕಿರುಗವನವನ್ನು ಈ ರೀತಿ ಅಭ್ಯಸಿಸೋಣ.

**ಅಡವಿ ಮರದಡಿಯಲ್ಲಿ**

ಅಡವಿ ಮರದಡಿಯಲ್ಲಿ
ನನ್ನೊಡನೆ ಕೆಡೆದಲ್ಲಿ
ಇನಿಯ ಹಕ್ಕಿಯ ಕೊರಲ
ತನ್ನ ಕೊರಲಲಿ ತಂದು ನಲಿವನಾರೈ –
ಇತ್ತ ಬಾ, ಇತ್ತ ಬಾ, ಇತ್ತ ಬಾರೈ
ಎತ್ತ ನೋಡಿಲ್ಲೆಲ್ಲ
ಮತ್ತೆ ಹಗೆಯೊಂದಿಲ್ಲ
ಕೊರೆವ ಚಳಿ ಬಿರುಗಾಳಿಯಲ್ಲದಿಲ್ಲೈ
ಆಸೆ ಬಲೆಯನು ತೊಲಗಿ
ಬಿಸಿಲಕಾಯುತ ಮಲಗಿ
ಉಣ್ಣುವೂಟವ ಕಂಡು
ತಣ್ಣನೆಯೆ ನಲಿದುಂಡು ನಲಿವರಾರೈ –
ಇತ್ತ ಬಾ, ಇತ್ತ ಬಾ, ಇತ್ತಬಾರೈ

©KTBS Not to be republished

ಎತ್ತ ನೋಡಿಲ್ಲೆಲ್ಲ
ಮತ್ತೆ ಹಗೆಯೊಂದಿಲ್ಲ
ಕೊರೆವ ಚಳಿ ಬಿರುಗಾಳಿಯಲ್ಲದಿಲ್ಲೈ

**–ಬಿ.ಎಂ.ಶ್ರೀ.**

**– ಮೂಲ : ಶೇಕ್ಸ್‌ಪಿಯರ್**

**ಮಾದರಿ**

ಇದೊಂದು ಪ್ರಕೃತಿ ಗೀತ.

ಪ್ರಕೃತಿಯ ಮಡಿಲಲ್ಲಿ ಆನಂದದಿಂದ ಕಾಲ ಕಳೆಯುತ್ತಿರುವ ಗೆಳೆಯನೊಬ್ಬನು ಆನಂದವನ್ನು ಹಂಚಿಕೊಳ್ಳಲು ತನ್ನ ಗೆಳೆಯನನ್ನು ಕರೆಯುತ್ತಿದ್ದಾನೆ. ಬರುವ ಗೆಳೆಯನು ಅಂಜಬೇಕಾಗಿಲ್ಲ, ಹಗೆವವರು ಯಾರೂ ಇಲ್ಲ, ಇಲ್ಲಿರುವುದು ಕೊರೆಯುವ ಚಳಿ ಮತ್ತು ಬೀಸುವ ಕುಳಿರ್ಗಾಳಿ ಅಷ್ಟೆ. ಇಂಪಾಗಿ ಹಾಡುವ ಹಕ್ಕಿಯ ಧ್ವನಿಯೊಡನೆ ದನಿ ಸೇರಿಸಿ ಹಾಡುತ್ತ ಆನಂದಿಸಬಹುದು ಬಾ.

ಆಸೆಗಳ ಕಾಟವನ್ನು ಕಳೆದುಕೊಂಡು, ಬಿಸಿಲಿನಲ್ಲಿ ಮೈಕಾಯಿಸುತ್ತ ಮಲಗಿ, ತಂದ ಊಟವ ಉಂಡು, ತಂಗಾಳಿಯಲ್ಲಿ ಮೈಯೊಡ್ಡಿ ಆನಂದಿಸೋಣ.

ಸುತ್ತಲೂ ಯಾವ ವಿರೋಧವೂ ಇಲ್ಲ. ಕೊರೆವ ಚಳಿ, ಶೀತಗಾಳಿ ಎರಡೇ ಎಲ್ಲ. ಪ್ರಕೃತಿ ಮಡಿಲಿನಲ್ಲಿ ಪಡೆಯುವ ಆನಂದಾನುಭವದ ಅಭಿವ್ಯಕ್ತಿ ಇಲ್ಲಿದೆ.

**"ಚಿಂತೆಯೇ ಮುಪ್ಪು; ಸಂತೋಷವೇ ಯೌವನ"**

*****

©KTBS Not to be republished

# ೯. ಕರ್ನಾಟಕದ ವೀರ ವನಿತೆಯರು

– ಡಾ॥ ವಿಜಯಲಕ್ಷ್ಮಿ ಬಾಳೇಕುಂದ್ರಿ

**ಪ್ರವೇಶ:** ಕನ್ನಡ ನಾಡು ವೀರವನಿತೆಯರ ಬೀಡು. ಪ್ರಾಣವನ್ನು ಒತ್ತೆಯಿಟ್ಟು ಧೈರ್ಯ ಸ್ವಾಭಿಮಾನದಿಂದ ಹೋರಾಡಿದ ವೀರ ಮಹಿಳೆಯರಿಗೆ ನಾಡಿನಲ್ಲಿ ಕೊರತೆಯಿಲ್ಲ. ನಾಡಿನ ಹಿತಕ್ಕೆ ಧಕ್ಕೆ ಬಂದಾಗ ತಮ್ಮೆಲ್ಲಾ ವೈಯಕ್ತಿಕ ಆಸೆಗಳನ್ನೂ ಬದಿಗಿಟ್ಟು ಅವರು ಹೋರಾಡಿದ್ದಾರೆ. ತಮ್ಮ ದುಡಿಮೆ ತ್ಯಾಗದ ಬಲದಿಂದ ನಾಡನ್ನು ಕಟ್ಟಿದ್ದಾರೆ. ಕನ್ನಡ ನಾಡನ್ನು ವಿದೇಶಿಯರಿಂದ ಉಳಿಸಿದ ಹಾಗೂ ಕಟ್ಟಿದ ವೀರ ವನಿತೆಯರ ಸಾಹಸ ಗಾಥೆಯನ್ನು ಈ ಲೇಖನವು ಬಿತ್ತರಿಸುತ್ತದೆ.

ಕರ್ನಾಟಕದಲ್ಲಿ ಕೆಚ್ಚೆದೆಯಿಂದ ಕತ್ತಿ ಝಳಪಿಸಿ ವಿಜಯಿಗಳಾಗಿ ವಿಜೃಂಭಿಸಿದ ವೀರವನಿತೆಯರ ಸಂಗತಿ ನೆನೆಸಿಕೊಂಡರೆ ಮೈನವಿರೇಳುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡದ **ಉಲ್ಲಾಳದ ರಾಣಿ ಅಬ್ಬಕ್ಕದೇವಿ (೧೫೯೦–೧೬೨೫)**. ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದರಂತೆ. ಆಗ ರಾಣಿ ಅಬ್ಬಕ್ಕದೇವಿಯ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದು ಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋಗಿ, ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆಸೆದರಂತೆ ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ, ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಹೀಗೆ ಪೋರ್ಚುಗೀಸರ ಹಡಗನ್ನು ಮುಳುಗಿಸಿ, ಮಿರಾಂಡಾ ಮತ್ತು ಡಿ ಮೆಲ್ಲೊ ಎಂಬ ಸೇನಾಪತಿಗಳನ್ನು ಓಡಿಸಿ ಸಪ್ತ ಸಮುದ್ರದಾಚೆ ವಿಖ್ಯಾತಳಾದಳು ವೀರ ರಾಣಿ ಅಬ್ಬಕ್ಕದೇವಿ! ತನ್ನ ಪ್ರೀತಿಯ ಪ್ರಜೆಗಳಾದ ರೈತರು ಕಷ್ಟಪಟ್ಟು, ಬೆವರು ಸುರಿಸಿ ಬೆಳೆದ ಏಲಕ್ಕಿ, ಅಕ್ಕಿ, ಮೆಣಸಿನ ಕಾಳು ಮತ್ತು ನೇಕಾರರು ನೇಯ್ದ ಬಟ್ಟೆಯ ವ್ಯಾಪಾರಕ್ಕೆ ಬಂದ ಪೋರ್ಚುಗೀಸರು ಕೇಳಿದ ಬೆಲೆಗೆ ಕೊಡಲು ಅಬ್ಬಕ್ಕದೇವಿ ಒಪ್ಪಲಿಲ್ಲ. ಅನ್ಯಾಯವಾಗಿ ಪೋರ್ಚುಗೀಸರು ಪಡೆಯುತ್ತಿದ್ದ ವಾರ್ಷಿಕ ಕಪ್ಪವನ್ನು ವಿರೋಧಿಸಿದಳು. ಅವರ ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿ ರಾಣಿ ಅಬ್ಬಕ್ಕದೇವಿ ವಿವೇಚನಾಶೀಲಳೂ, ನ್ಯಾಯಪರಳೂ, ಕುಶಲಳೂ ಆಗಿದ್ದಳೆಂದು ಜಿನೋವ (ಇಟಲಿಯ) ಪ್ರವಾಸಿ ಪಿತ್ರೋ ಬರೆದಿದ್ದಾನೆ. ಬಾಗ್ದಾದಿನ ದೊರೆ ಷಾ ಅಬ್ಬಾಸ್‌ರನ್ನು ಅವನು ಭೇಟಿಯಾದಾಗ ಅವರು ರಾಣಿ ಅಬ್ಬಕ್ಕ ಪೋರ್ಚುಗೀಸರನ್ನು ಪಲಾಯನಗೈಯುವಂತೆ ಮಾಡಿದ್ದನ್ನು ವಿವರಿಸಿ "ಭಾರತಕ್ಕೆ ಹೋದರೆ ರಾಣಿಯನ್ನು ಭೇಟಿಯಾಗದೆ ಬರಬೇಡಿ" ಎಂದು ಹೇಳಿದ್ದರಂತೆ! ಆದ್ದರಿಂದ ರಾಣಿಯನ್ನು ನೋಡಿ ಪಿತ್ರೋ ಸಂತಸದಿಂದ "ವಿಶ್ವವಿಖ್ಯಾತರಾದ ನಿಮ್ಮನ್ನು ನೋಡಲು ಅಷ್ಟು ದೂರದಿಂದ ಬಂದದ್ದು ಸಾರ್ಥಕವಾಯಿತು" ಎಂದಾಗ ಪ್ರಸನ್ನಳಾದ ರಾಣಿ ಅಬ್ಬಕ್ಕದೇವಿ "ಅಪರಿಚಿತವಾದ ಈ ದೇಶದಲ್ಲಿ ಸುತ್ತಾಡುವಾಗ ಏನಾದರೂ ರೋಗರುಜಿನ ಬಂದರೆ ಒಬ್ಬಂಟಿಗರಾದ ನಿಮ್ಮನ್ನು ನೋಡುವವರ್ಯಾರು?" ಎಂದು ಸ್ತ್ರೀ ಸಹಜವಾದ ವಾತ್ಸಲ್ಯದಿಂದ ವಿಚಾರಿಸಿಕೊಂಡಳೆಂದು ಪಿತ್ರೋ ಬರೆದಿದ್ದಾನೆ.

ಉಲ್ಲಾಳದ ರಾಣಿ ಅಬ್ಬಕ್ಕದೇವಿ ಪರದೇಶದ ಪೋರ್ಚುಗೀಸರನ್ನು ಸೋಲಿಸಿದರೆ, ಬೆಳಗಾವಿ ಜಿಲ್ಲೆಯ ಅಜೇಯ **ಬೆಳವಡಿ ಮಲ್ಲಮ್ಮಾಜಿ** ಪಕ್ಕದ ರಾಜ್ಯದ ಪರಾಕ್ರಮಿ ಛತ್ರಪತಿ ಶಿವಾಜಿ ಮಹಾರಾಜರನ್ನು ಸೋಲಿಸಿದ

©KTBS Not to be republished

ಅಪ್ರತಿಮ ಪರಾಕ್ರಮಿ! ಕರ್ನಾಟಕದ ಮೇಲೆ ದಂಡಯಾತ್ರೆ ಪ್ರಾರಂಭಿಸಿದ ಶಿವಾಜಿ ಬೆಳವಡಿ ಸಂಸ್ಥಾನದ ಯಾದವಾಡದಲ್ಲಿ ಪಾಳೆಯ ಹೂಡಿದ. ಶಿವಾಜಿಯ ಸೈನಿಕರು ಸುತ್ತಮುತ್ತಲಿನ ಹಳ್ಳಿಗರ ಹಸು, ಎಮ್ಮೆಗಳನ್ನು ಅಪಹರಿಸಿಕೊಂಡು ಹೋಗಿ ಅವರಿಗೆ ಕಿರುಕುಳ ಕೊಡುವುದನ್ನು ಕೇಳಿ ಕಿಡಿಕಿಡಿಯಾದ ಬೆಳವಡಿಯ ದೇಸಾಯಿ ಈಶಪ್ರಭುಗಳಿಗೆ ಸಮಾಧಾನ ಹೇಳಿ ೨೦೦೦ ಸ್ತ್ರೀಯರುಳ್ಳ ಸೈನ್ಯದೊಂದಿಗೆ ಹೋದಳು. ಸ್ತ್ರೀ ಸೈನಿಕರನ್ನು ಕಂಡು ಅಪಹಾಸ್ಯ ಮಾಡಿದ ಸೈನಿಕರನ್ನು ಕೊಚ್ಚಿ ಹಾಕಿದ ಮಲ್ಲಮ್ಮಾಜಿಯ ಕಾಳಿರೂಪವನ್ನು ಕಂಡು ಕಂಗೆಟ್ಟ ಸೈನಿಕರು ಜಾನುವಾರುಗಳನ್ನು ಹಿಂದಿರುಗಿಸಿದರು. ಹಳ್ಳಿಗರು ಸಂತಸದಿಂದ ವಿಜಯೋತ್ಸವ ಆಚರಿಸಿದ್ದನ್ನು ಗಂಡನಿಗೆ ತಿಳಿಸಲು ಸಂಭ್ರಮದಿಂದ ಬಂದ ಮಲ್ಲಮ್ಮಾಜಿಗೆ ಆಘಾತವಾಯಿತು. ಮಲ್ಲಮ್ಮಾಜಿ ಅತ್ತ ಹೋದಾಗ ಇತ್ತ ೧೦,೦೦೦ ಮರಾಠ ಸೈನಿಕರು ಕೋಟೆಗೆ ಮುತ್ತಿಗೆ ಹಾಕಿ ಈಶಪ್ರಭುಗಳನ್ನು ತೀವ್ರವಾಗಿ ಗಾಯಗೊಳಿಸಿದ್ದರು. "ರಾಣಿ ನಿಮ್ಮ ಪರಾಕ್ರಮದ ಪರಿಚಯ ನಮಗಿದೆ. ಶಿವಾಜಿಯನ್ನು ನೀವು ಸೋಲಿಸಲೇಬೇಕು, ಹಾಗೆ ಮಾಡುತ್ತೀರೆಂದು ನನ್ನ ಕೈ ಮೇಲೆ ಕೈ ಇಟ್ಟು ಪ್ರಮಾಣ ಮಾಡಿ" ಎಂದು ಹೆಂಡತಿಯನ್ನು ಈಶಪ್ರಭುಗಳು ಕೇಳಿಕೊಂಡರು. ಒಂದು ಸಲ ವಿಹಾರಕ್ಕೆ ಹೋದಾಗ ಈಶಪ್ರಭು ನಿದ್ರಿಸಿದಾಗ ಬಂದ ಎರಡು ಹುಲಿಗಳನ್ನು ಸಾಯಿಸಿದ ಮಲ್ಲಮ್ಮಾಜಿಯ ಪರಾಕ್ರಮದಲ್ಲಿ ಅಪಾರ ನಂಬಿಕೆ ಇದ್ದ ಈಶಪ್ರಭುಗಳ ಪ್ರಾಣಪಕ್ಷಿ ರಾಣಿಯ ಆಶ್ವಾಸನೆ ಸಿಗುತ್ತಿದ್ದಂತೆ ಹಾರಿಹೋಯಿತು.

ದುಃಖತಪ್ತಳಾದ ರಾಣಿ ಮಲ್ಲಮ್ಮಾಜಿ ಧೃತಿಗೆಡದೆ ಗಂಡನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಶಕ್ತಿಯ ಜೊತೆಗೆ ಯುಕ್ತಿಯಿಂದ ದಿಟ್ಟ ಹೆಜ್ಜೆ ಇಟ್ಟಳು. ಬೆಳವಡಿಯ ಸರದಾರ ಶಾಂತಯ್ಯನನ್ನು ಸಂನ್ಯಾಸಿಯ ವೇಷದಲ್ಲಿ ಶಿವಾಜಿಯ ಹತ್ತಿರ ಕಳಿಸಿದಳು. ಅವನು "ಸಿದ್ಧ ಸಮುದ್ರದಲ್ಲಿರುವ ದ್ಯಾಮವ್ವ ಎಂಬ ಜಾಗೃತ ಜಗದಾಂಬೆ ದೇವಿಯ ದರ್ಶನ ಪಡೆದರೆ ಉತ್ತಮ" ಎಂದು ತಿಳಿಸಿದ. ಈ ಸೂಚನೆಗೆ ಶಿವಾಜಿ ಒಪ್ಪಿದರು. ಇತ್ತ ರಾಣಿ ಮಲ್ಲಮ್ಮಾಜಿ ತನ್ನ ಪುಟ್ಟ ಮಗ ನಾಗಭೂಷಣನನ್ನು ಕರೆದುಕೊಂಡು ಗದ್ಗದಿತ ಕಂಠದಿಂದ ಪ್ರಜೆಗಳಿಗೆ "ಇದು ನಮ್ಮ ಕೊನೆಯ ಭೇಟಿ" ಎಂದು ಹೇಳಿ ಪತಿ ಈಶಪ್ರಭುವಿನ ಕಿರೀಟ ಧರಿಸಿ ಅರಸನ ಕುದುರೆ ಏರಿ ಗುಪ್ತಮಾರ್ಗದಿಂದ ತನ್ನ ಸ್ತ್ರೀ ಸೈನ್ಯದೊಡನೆ ಮುನ್ನಡೆದಳು. ೮-೧೦ ಸರದಾರರೊಂದಿಗೆ ಜಗದಾಂಬೆಯ ದರ್ಶನ ಪಡೆದು ಮರಳುತ್ತಿದ್ದ ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲ ನೆಲಕ್ಕುರುಳಿಸಿದಳು. ಹಠಾತ್ತನೆ ದಾಳಿ ಮಾಡಿದ ರಾಣಿಯನ್ನು ಕಂಡ ಶಿವಾಜಿ ತಲ್ಲಣಗೊಂಡನು. ಕುದುರೆಯಿಂದ ಕೆಳಗಿಳಿದು ಕೈ ಜೋಡಿಸಿ "ದೇವಿ ನನ್ನ ಅಪರಾಧವನ್ನು ಕ್ಷಮಿಸು. ನಾನು ನಿನ್ನ ಮಗನೆಂದು ತಿಳಿ" ಎಂದು ಕೇಳಿಕೊಂಡನು. ರಾಣಿಯು ಶಿವಾಜಿಗೆ "ನನ್ನ ಪತಿಯನ್ನು ಕೊಂದು ಈಗ ಕ್ಷಮೆ ಯಾಚಿಸುತ್ತಿದ್ದೀರಾ?" ಎಂದಳು. ಅದು "ನನ್ನ ದುಷ್ಟ ಸರದಾರನ ಕೆಲಸ, ಅದರಲ್ಲಿ ನನ್ನ ತಪ್ಪಿಲ್ಲ" ಎಂದು ಪ್ರತಿಪಾದಿಸಿದನು, ಶಿವಾಜಿ. "ನಾನು ಕರ್ನಾಟಕಕ್ಕೆ ಬಂದು ದೊಡ್ಡ ತಪ್ಪು ಮಾಡಿದೆ" ಎಂದು ಒಪ್ಪಿಕೊಂಡನು. ಇಬ್ಬರೂ ರಾಜಿ ಮಾಡಿಕೊಂಡ ನಂತರದ ಹೃದಯಂಗಮ ದೃಶ್ಯವನ್ನು ಶಿಲ್ಪಿ ಯಾದವಾಡದಲ್ಲಿ ನಿರ್ಮಿಸಿದನು. ಶಿವಾಜಿ ತನ್ನ ತೊಡೆಯ ಮೇಲೆ ಮಲ್ಲಮ್ಮನ ಮಗನನ್ನು ಕೂಡಿಸಿಕೊಂಡು ಹಾಲು ಕುಡಿಸುತ್ತಿರುವ ದೃಶ್ಯ, ಪಕ್ಕದಲ್ಲಿ ನಿಂತ ರಾಣಿ ಹಿಂದೆ ಶಿವಾಜಿಯ ನಾಯಿ ಇಂದಿಗೂ ಕಾಣ ಸಿಗುತ್ತವೆ!

©KTBS
Not to be republished

ಬೆಳವಡಿ ಮಲ್ಲಮ್ಮ ಶಿವಾಜಿಯನ್ನು ಸೋಲಿಸಿದರೆ, ಶಿವಮೊಗ್ಗ ಜಿಲ್ಲೆಯ, **ಕೆಳದಿಯ ರಾಣಿ ಚೆನ್ನಮ್ಮ** (೧೫೭೨–೧೬೯೭) ಮೊಘಲರಿಗೆ ಅಂಜಿ ತಲೆ ಮರೆಸಿಕೊಂಡು ಓಡಿ ಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದ ಕೆಚ್ಚೆದೆಯ ರಾಣಿ. ಔರಂಗಜೇಬ್ ತನ್ನ ಮಗ ಅಜಮತಾರನ ಜೊತೆಗೆ ಭಾರಿ ಸೈನ್ಯ ಕಳಿಸಿದನು. ಆದರೆ ಚಾಣಾಕ್ಷಳಾದ ಚನ್ನಮ್ಮಾಜಿ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿ ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟು ದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮುಘಲ್ ಸೇನೆಗೆ ಅನ್ನ ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣಭೀತಿಯಿಂದ ಪಲಾಯನಗೈದರು ಮೊಗಲರು. ಕಕ್ಕಾಬಿಕ್ಕಿಯಾಗಿ ಓಡುವಾಗ ಹೇರಳವಾದ ಯುದ್ಧ ಸಾಮಗ್ರಿ ಬಿಟ್ಟುಹೋದರು. ಕರ್ನಾಟಕದ ಮಲೆನಾಡಿನ ಪುಟ್ಟ ರಾಜ್ಯದ, ಚಿಕ್ಕ ವಯಸ್ಸಿನಲ್ಲಿ ಗಂಡನ ಭೀಕರ ಕೊಲೆಯನ್ನು ಕಂಡ ರಾಣಿ, ಬಲಾಢ್ಯ ಮೊಗಲ್ ಚಕ್ರವರ್ತಿ ಔರಂಗಜೇಬನನ್ನು ಸೋಲಿಸಿದ್ದು ಇತಿಹಾಸದಲ್ಲಿಯೇ ಅಪೂರ್ವ ಮತ್ತು ಅಮೋಘ ಸಾಧನೆ!

ಕೆಳದಿಯ ಚೆನ್ನಮ್ಮ ಮೊಗಲರನ್ನು ಸೋಲಿಸಿದರೆ, ಬೆಳಗಾವಿ ಜಿಲ್ಲೆಯ **ಕಿತ್ತೂರು ಚೆನ್ನಮ್ಮ** ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು. ಅವಳು ಸೆರೆಯಾಳುಗಳನ್ನು ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ. ಮುಂದೆ ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮೋಸಮಾಡಿ ಅವಳನ್ನು ಸೆರೆ ಹಿಡಿದು ಇಟ್ಟಾಗ, ಸ್ವಾತಂತ್ರ್ಯದ ಕನಸನ್ನೇ ಕಂಡಳು ವೀರರಾಣಿ. ಸೆರೆಮನೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣ 'ತಾಯಿ' ಎಂದು ಕರೆದಾಗ "ತಾಯಿ ಎಂದು ಕರೆದ ಕನ್ನಡದ ಕಂದ ಯಾರು?" ಎದು ಕೇಳಿದ ಕೆಚ್ಚಿನ ರಾಣಿ ಚೆನ್ನಮ್ಮ. "ನಿಮ್ಮ ಧಮನಿ–ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ" ಎಂದು ಹುರಿದುಂಬಿಸಿದ ಕಿತ್ತೂರು ಚನ್ನಮ್ಮ, ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಹಳೆ ಊದಿದ್ದು ಝಾನ್ಸಿ ಲಕ್ಷ್ಮೀಬಾಯಿಗಿಂತಲೂ ೨೪ ವರ್ಷ ಮೊದಲು!

ಧೈರ್ಯ, ಸ್ಥೈರ್ಯ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯದ ಸಾಕಾರ ಮೂರ್ತಿಗಳಾಗಿ ನಮ್ಮ ಕರ್ನಾಟಕದಲ್ಲಿ ವಿಜಯ ಪತಾಕೆ ಹಾರಿಸಿ ಚಿರಸ್ಮರಣೀಯರಾಗಿ ಈ ವೀರವನಿತೆಯರು ವಿಜೃಂಭಿಸಿದ್ದಾರೆ.

## ಕೃತಿಕಾರರ ಪರಿಚಯ



ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದ್ರಿಯವರು ಬೆಳಗಾವಿಯಲ್ಲಿ ೧೯೫೦ ಆಗಸ್ಟ್ ೬ರಂದು ಜನಿಸಿದರು. ಇವರು ಕರ್ನಾಟಕದ ಪ್ರಪ್ರಥಮ ಮಹಿಳಾ ಹೃದ್ರೋಗ ತಜ್ಞೆ. ಇವರಿಗೆ ೨೦೦೮ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿತು. ೨೦೧೨ರಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

©KTBS Not to be republished

ಶ್ರೀಮತಿ ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ವೈದ್ಯಕೀಯ ಕೃತಿಗಳನ್ನೂ ಅಂಕಣಗಳನ್ನೂ ಬರೆದಿದ್ದಾರೆ. 'ಸಮಾಜ ವಿಕಾಸಕ್ಕೆ ಶರಣ ಸಂಸ್ಕೃತಿ', 'ಜೀವನ್ಮುಕ್ತಿ', 'ಚಿಣ್ಣರ ಚಿತ್ತಾರ', 'ಚಿಣ್ಣರ ಚಿಲಿಪಿಲಿ' ಇವರ ಪ್ರಮುಖ ಕೃತಿಗಳಾಗಿವೆ. 'ಕರ್ನಾಟಕದ ವೀರ ಮಹಿಳೆಯರು' ಪಾಠವನ್ನು ಇವರ 'ಜೀವನಧಾರೆ'. ಕೃತಿಯಿಂದ ಆಯ್ಕೆ ಮಾಡಲಾಗಿದೆ.

## ಪದಗಳ ಅರ್ಥ

ಈಟಿ – ಶೂಲ;
ಕಕ್ಕಾಬಿಕ್ಕಿ – ದಿಗ್ಭ್ರಮೆ;
ಕರಾ(ಲ)ಳ – ಭಯಂಕರವಾದ;
ಕಹಳೆ – ಉದ್ದವಾಗಿ ಬಾಗಿರುವ ತುತ್ತೂರಿ;
ಗದ್ಗದಿತ – ದುಃಖಭರಿತ ನಡುಕದ ಧ್ವನಿ;
ಜಾನುವಾರು – ಪ್ರಾಣಿಗಳು;
ತಲ್ಲಣ – ತಳಮಳ;
ತೋಪು – ಮರಗಳ ಸಮೂಹ;
ದಾಸ್ಯ – ಊಳಿಗ, ಅಧೀನತೆ;
ಪತಾಕೆ – ಧ್ವಜ, ಬಾವುಟ;
ಪಲಾಯನ (ನಾ) – ಓಟ, ಪರಾರಿ, ತಪ್ಪಿಸಿಕೊಳ್ಳುವಿಕೆ;
ಪ್ರಾಣಭೀತಿ – ಜೀವಭಯ;
ಪ್ರಮಾಣ – ಅಳತೆ, ಪರಿಮಿತಿ, ನಿಯಮ;
ಲಂಗರು (ನಾ) – ಬಂದರಿನಲ್ಲಿ ಹಡಗನ್ನು ನಿಲ್ಲಿಸುವುದಕ್ಕಾಗಿ ಹಡಗಿನ ಪಕ್ಕದಲ್ಲಿ ಸಮುದ್ರದಾಳಕ್ಕೆ ಇಳಿಬಿಡುವ ಭಾರವಾದ ಕಬ್ಬಿಣದ ಸಲಕರಣೆ;
ವಿಜಯೋತ್ಸವ – ಗೆಲುವು ದೊರೆತಾಗ ಆಚರಿಸುವ ಸಮಾರಂಭ;
ಸಪ್ತಸಮುದ್ರ – ಏಳು ಸಮುದ್ರಗಳು;
ಸಾರ್ಥಕ– ಪ್ರಯೋಜನವುಳ್ಳ, ಸಫಲವಾದ;
ಹೃದಯಂಗಮ – ಮನಮುಟ್ಟುವಂತಹದು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಪೋರ್ಚುಗೀಸರು ಕೇಳಿದ ಬೆಲೆಗೆ ವಸ್ತುಗಳನ್ನು ಕೊಡಲು ಅಬ್ಬಕ್ಕದೇವಿಯು ಏಕೆ ಒಪ್ಪಲಿಲ್ಲ?
೨. ಮಲ್ಲಮ್ಮಾಜಿಯ ಪರಾಕ್ರಮದಲ್ಲಿ ಈಶಪ್ರಭುವಿಗೆ ಅಪಾರ ನಂಬಿಕೆ ಇತ್ತು ಏಕೆ?
೩. ವಿಜಯೋತ್ಸವದ ಸಂಭ್ರಮದಲ್ಲಿದ್ದ ಮಲ್ಲಮ್ಮಾಜಿಗೆ ಆಘಾತವಾಯಿತು ಏಕೆ?
೪. ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೇ ಏಕೆ ಬಂದರು?
೫. ದೇಸಾಯಿ ಈಶಪ್ರಭು ಕಿಡಿಕಿಡಿಯಾದುದೇಕೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಜಿನೋವದ ಪ್ರವಾಸಿ ಪಿತ್ರೋ ಅಬ್ಬಕ್ಕನನ್ನು ಕುರಿತು ಏನೆಂದು ಬರೆದಿದ್ದಾನೆ?
೨. ಕಿತ್ತೂರು ಚೆನ್ನಮ್ಮನು ಸೆರೆಯಾದುದೇಕೆ?

Not ©KTBS to be republished

೩. ಕೆಳದಿ ಚೆನ್ನಮ್ಮನು ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು?

೪. ಪೋರ್ಚುಗೀಸರು ಭಾರತೀಯರನ್ನು ಯಾವರೀತಿಯಲ್ಲಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು?

**ಇ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿರಿ**

೧. "ಒಬ್ಬಂಟಿಗರಾದ ನಿಮ್ಮನ್ನು ನೋಡುವವರ್‍ಯಾರು?"

೨. "ದೇವಿ ನನ್ನ ಅಪರಾಧವನ್ನು ಕ್ಷಮಿಸು"

೩. "ಇತಿಹಾಸದಲ್ಲಿಯೇ ಅಪೂರ್ವಮತ್ತು ಅಮೋಘ ಸಾಧನೆ!"

೪. "ತಾಯಿ ಎಂದು ಕರೆದ ಕನ್ನಡದ ಕಂದ ಯಾರು?"

೫. "ಇದು ನಮ್ಮ ಕೊನೆಯ ಭೇಟಿ."

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಶಿವಾಜಿಯು ಮಲ್ಲಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದುದು ಹೇಗೆ? ವಿವರಿಸಿರಿ.

೩. ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು? ವಿವರಿಸಿರಿ.

೪. ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಕುರಿತು ಬರೆಯಿರಿ.

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ.**

ಪ್ರಾಣಪಕ್ಷಿ, ಸಂಕೋಲೆ, ತಲ್ಲಣ, ಹೃದಯಂಗಮ, ಪತಾಕೆ, ವಿಜಯೋತ್ಸವ.

**ಆ) ಕೆಳಗಿನ ಶಬ್ದಗಳಲ್ಲಿ ಅನುಕರಣಾವ್ಯಯ, ಜೋಡುನುಡಿ ಮತ್ತು ದ್ವಿರುಕ್ತಿಗಳನ್ನು ಗುರುತಿಸಿ ಪಟ್ಟಿ ಮಾಡಿ.**

ಕಣಕಣ, ಧಗಧಗ, ಧಮನಿಧಮನಿ, ಕಿಡಿಕಿಡಿ, ಝಳಝಳ, ಮನೆಮಠ, ರೋಗರುಜಿನ.

**ಇ) ಕೆಳಗಿನ ಸಾಲುಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸರಿಹೊಂದುವ ಸೂಕ್ತ ಹೆಸರು(ಅಂಕಿತನಾಮ)ಗಳಿಂದ ಭರ್ತಿಮಾಡಿರಿ.**

೧. ಅಬ್ಬಕ್ಕದೇವಿಯ ಸೈನ್ಯದಲ್ಲಿದ್ದ ಮೀನುಗಾರ ಸಾಹಸಿ ಸೈನಿಕರು ----------

೨. ಸಂನ್ಯಾಸಿಯ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ----------

೩. ಛತ್ರಪತಿ ಶಿವಾಜಿಯನ್ನು ಸೋಲಿಸಿದ ಬೆಳವಡಿಯ ರಾಣಿ-------

೪. ಅಬ್ಬಕ್ಕನ ಸೈನ್ಯಕ್ಕೆ ಹೆದರಿ ಓಡಿಹೋದ ಪೋರ್ಚುಗೀಸ್ ಸೇನಾಪತಿಗಳು --------ಮತ್ತು---

೫. ಅಬ್ಬಕ್ಕನ ಆಸ್ಥಾನಕ್ಕೆ ಭೇಟಿ ನೀಡಿದ ಜಿನೋವದ ಪ್ರವಾಸಿ---------

೬. ಉಲ್ಲಾಳವನ್ನು ಆಕ್ರಮಿಸಲು ಸಜ್ಜಾಗಿ ಕರಾವಳಿಯಲ್ಲಿ ಲಂಗರು ಹಾಕಿದ ವಿದೇಶಿಯರು-------

೭. ಕೆಳದಿಯ ಚೆನ್ನಮ್ಮನಲ್ಲಿ ಆಶ್ರಯ ಪಡೆದ ಶಿವಾಜಿಯ ರಾಜಾರಾಮನ ಮಗ--------

೮. ಕೆಳದಿಯ ಮೇಲೆ ದಂಡೆತ್ತಿ ಬಂದ ಔರಂಗಜೇಬನ ಮಗ------------

೯. ಕಿತ್ತೂರು ರಾಣಿ ಚೆನ್ನಮ್ಮನನ್ನು ಸೆರೆಮನೆಯಲ್ಲಿ ಭೇಟಿಯಾಗಲು ಬಂದ ವೀರ---------

೧೦. ಪೋರ್ಚುಗೀಸರನ್ನು ಸೋಲಿಸಿದ ಉಲ್ಲಾಳ ರಾಣಿ---------

## ಭಾಷಾ ಚಟುವಟಿಕೆ

ಅ) ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಪಟ್ಟಿ ಮಾಡಿರಿ.

ಆ) ನಿಮ್ಮ ಜಿಲ್ಲೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಿಳೆಯರ ಮಾಹಿತಿಯನ್ನು ಸಂಗ್ರಹಿಸಿರಿ.

ಇ) ಹತ್ತು ಕ್ರಿಯಾಪದಗಳನ್ನು 'ಕರ್ನಾಟಕದ ವೀರವನಿತೆಯರು' ಪಾಠದಿಂದ ಆಯ್ದು ಪಟ್ಟಿ ಮಾಡಿರಿ.

## ವ್ಯಾಕರಣ

### ಕ್ರಿಯಾಪದಗಳು

ಕ್ರಿಯೆಯ ಅರ್ಥವನ್ನು ಸೂಚಿಸುವ ಪದಗಳೇ ಕ್ರಿಯಾಪದ. ಕ್ರಿಯಾ ಪದದ ಮೂಲ ರೂಪಕ್ಕೆ 'ಧಾತು' ಅಥವಾ 'ಕ್ರಿಯಾಪ್ರಕೃತಿ' ಎಂದು ಹೆಸರು. ಧಾತುಗಳಿಗೆ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ.

ಕ್ರಿಯೆಯ ಅರ್ಥವನ್ನು ಸಂಪೂರ್ಣವಾಗಿ ಕೊಡುವ ಪದಗಳು ಕ್ರಿಯಾಪದ ಎನಿಸುತ್ತವೆ. ಭಾಷೆಯಲ್ಲಿ ಕ್ರಿಯಾಪದವು ತುಂಬಾ ಮುಖ್ಯವಾದುದು. ಅದು ಕರ್ತೃವಿನ ಕಾರ್ಯವನ್ನು ಹೇಳುತ್ತದೆ.

ಕನ್ನಡದಲ್ಲಿ ಕಾಲ ಪ್ರತ್ಯಯವನ್ನು ಹಚ್ಚಿದಾಗ ಕರ್ತೃವಿನ ಲಿಂಗ ವಚನಗಳಿಗೆ ಅನುಗುಣವಾಗಿ ಕ್ರಿಯಾಪದ ವರ್ತಿಸುತ್ತದೆ.

ಉದಾಹರಣೆ: ೧) ಹಸೀನ ಆಟವನ್ನು ಆಡುತ್ತಾಳೆ.
೨) ಜಾನ್ ಮೈದಾನಕ್ಕೆ ಹೋಗುತ್ತಾನೆ.
೩) ಬಾಲಕರು ಪ್ರವಾಸ ಹೋಗುತ್ತಾರೆ.

ಈ ಮೇಲಿನ ಎಲ್ಲಾ ವಾಕ್ಯಗಳ ಕೊನೆಯ ಪದಗಳು ಸಂಪೂರ್ಣವಾದ ಅರ್ಥವನ್ನು ಕೊಡುವ, ಕ್ರಿಯೆಯನ್ನು ತಿಳಿಸುವ ಪದಗಳಾಗಿವೆ. ಹಾಗಾಗಿ ಇವನ್ನು 'ಕ್ರಿಯಾ ಪದಗಳು' ಎನ್ನುತ್ತೇವೆ. ಕ್ರಿಯಾಪದದ ಮೂಲ ರೂಪವಾದ 'ಧಾತು', ಕ್ರಿಯಾರ್ಥ ಕೊಡುವ ಪ್ರತ್ಯಯರಹಿತ ಶಬ್ದವಾಗಿರುತ್ತದೆ.

ಕ್ರಿಯಾಪದಗಳಿಗೆ ಉದಾ: ಮಾಡುತ್ತೇನೆ, ತಿನ್ನುತ್ತಾಳೆ, ಹೋಗುವರು.

©KTBS Not to be republished

**ಧಾತುಗಳು : ಮಾಡು, ತಿನ್ನು, ಹೋಗು.**

**(ಧಾತು ಯಾವಾಗಲೂ ದ್ವಿತೀಯ ಪುರುಷ ಏಕವಚನದಲ್ಲಿರುತ್ತದೆ)**

| **ಪುಲ್ಲಿಂಗ** | **ಸ್ತ್ರೀಲಿಂಗ** | **ನಪುಂಸಕಲಿಂಗ** |
|---|---|---|
| ಮಾಡುತ್ತಾನೆ | ಮಾಡುತ್ತಾಳೆ | ಮಾಡುತ್ತದೆ |
| ಮಾಡಿದನು | ಮಾಡಿದಳು | ಮಾಡಿತು |
| ಮಾಡುವನು | ಮಾಡುವಳು | ಮಾಡುವುದು |

ಮೂರು ಲಿಂಗಗಳಲ್ಲಿ ಉದಾಹರಣೆಯನ್ನು ಕೊಟ್ಟಿರುವ ಈ ಎಲ್ಲಾ ಪದಗಳು ಕ್ರಿಯಾಪದಗಳಾಗಿವೆ. ಈ ಎಲ್ಲಾ ಕ್ರಿಯಾಪದಗಳಿಗೂ 'ಮಾಡು' ಎಂಬ ಶಬ್ದ ಕ್ರಿಯೆಯ ಅರ್ಥವನ್ನು ಕೊಡುವ ಮೂಲ ಪದವಾಗಿದೆ. ಇದನ್ನು 'ಧಾತು' ಎನ್ನುತ್ತೇವೆ.

## ಕಾಲ ಮತ್ತು ಕ್ರಿಯಾಪದದ ರೂಪಗಳು

'ಕಾಲ' ಎಂಬ ಪದಕ್ಕೆ ಎರಡು ಘಟನೆಗಳ ನಡುವಣ ಅವಧಿಯೆಂಬ ಅರ್ಥವಿದೆ. ಇದು ಅನಾದಿ, ಅನಂತ. ಇದನ್ನು ಲೆಕ್ಕಾಚಾರದ ಅನುಕೂಲಕ್ಕಾಗಿ ಹಿಂದೆ (ನಡೆದದ್ದು) ಇಂದು (ನಡೆಯುತ್ತಿರುವುದು) ಮುಂದೆ (ಮುಂದೆ ನಡೆಯಲಿರುವುದು) ಎಂದು ಕಾಲ್ಪನಿಕ ವಿಭಾಗ ಮಾಡಿದ್ದಾರೆ. ಆದರೆ ಕಾಲವು ಅಖಂಡದ್ರವ್ಯ (Continuum). ಈ ಕಾಲವಾಹಿನಿಯನ್ನು 'ವರ್ತಮಾನವು' ಎರಡು ಖಂಡಗಳಾಗಿ ವಿಭಜಿಸುತ್ತದೆ. ಭೂತಕಾಲಕ್ಕೂ ಭವಿಷ್ಯತ್ ಕಾಲಕ್ಕೂ ನಡುವಣ ವಿಭಾಜಕವು ತುಂಬ ತೆಳು. ಗಡಿಯಾರದಲ್ಲಿ ಪ್ರತಿ ಸೆಕೆಂಡೂ ನಮ್ಮ ಆಯುಷ್ಯವನ್ನು ಭೂತಕಾಲಕ್ಕೆ ಸೇರಿಸುತ್ತ ಹೋಗುತ್ತದೆ. ನಮ್ಮ ಜೀವನ ಕ್ರಿಯೆಯು ಈ ಮೂರು ಕಾಲಗಳಿಂದ ನಿಬದ್ಧವಾಗಿದೆ. ನಮ್ಮ ಕ್ರಿಯೆಯನ್ನು ಸೂಚಿಸುವ ಪದಗಳಿಗೆ 'ಕ್ರಿಯಾಪದ'ಗಳೆಂದು ಹೇಳುತ್ತಾರೆ. ಕರ್ತೃವಿನ ಕ್ರಿಯೆ ನಡೆಯುವ ಕಾಲವನ್ನು ಸೂಚಿಸುವ ವ್ಯವಸ್ಥೆ ಭಾಷೆಯಲ್ಲಿದೆ. ಕ್ರಿಯೆಯ ಕಾಲವನ್ನು ಕಾಲಸೂಚಕ ಪ್ರತ್ಯಯಗಳು ನಿರ್ದೇಶಿಸುತ್ತವೆ. ಭೂತಕಾಲ, ವರ್ತಮಾನಕಾಲ, ಭವಿಷ್ಯತ್ ಕಾಲಗಳು ಕ್ರಮವಾಗಿ ನಡೆದ, ನಡೆಯುತ್ತಿರುವ ಮತ್ತು ನಡೆಯಬಹುದಾದ ಘಟನೆಗಳನ್ನು ಸೂಚಿಸುತ್ತವೆ. ಕನ್ನಡದಲ್ಲಿ ಭೂತಕಾಲವನ್ನು ಸೂಚಿಸಲು 'ದ' ಪ್ರತ್ಯಯವನ್ನು ವರ್ತಮಾನ ಕಾಲವನ್ನು ಸೂಚಿಸಲು 'ಉತ್ತ' ಪ್ರತ್ಯಯವನ್ನು ಹಾಗೂ ಭವಿಷ್ಯತ್ ಕಾಲವನ್ನು ಸೂಚಿಸಲು 'ವ' ಪ್ರತ್ಯಯವನ್ನು ಬಳಸಲಾಗುತ್ತದೆ.

ಕ್ರಿಯಾ ರೂಪಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ:

೧) ಕಾಲರೂಪಗಳು

೨) ಅರ್ಥರೂಪಗಳು

ಉದಾ : ೧. ಜೋಸೆಫ್ ಊಟ ಮಾಡಿದನು (ಭೂತಕಾಲ).

೨. ಸಲೀಂ ಊಟ ಮಾಡುತ್ತಾನೆ (ವರ್ತಮಾನ).

೩. ಹುಡುಗನು ಊಟ ಮಾಡುವನು (ಭವಿಷ್ಯತ್ ಕಾಲ).

©KTBS Not to be republished

ಕನ್ನಡ ಕ್ರಿಯಾಪದಗಳಲ್ಲಿ ಕಾಲರೂಪಗಳು ಬಳಕೆಯಲ್ಲಿವೆ. ಕ್ರಿಯೆಗಳಿಗನುಗುಣವಾಗಿ ಕ್ರಿಯಾಪದದ ರೂಪವು ಬದಲಾವಣೆಯಾಗುತ್ತದೆ. ಅವುಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

೧) ಭೂತಕಾಲ ರೂಪ ೨) ವರ್ತಮಾನಕಾಲ ರೂಪ ೩) ಭವಿಷ್ಯತ್‌ಕಾಲ ರೂಪ

೧) **ಭೂತಕಾಲ ರೂಪ –** ನಡೆದು ಹೋದ ಕಾಲವನ್ನು ತಿಳಿಸುವ ಕ್ರಿಯಾಪದ ರೂಪಕ್ಕೆ ಭೂತಕಾಲ ರೂಪ ಎನ್ನುತ್ತಾರೆ. ಭೂತಕಾಲದ ಸೂಚಕ ಪ್ರತ್ಯಯ 'ದ' ಆಗಿರುತ್ತದೆ.

ಉದಾ: ರಾಮನು ಕಾಡಿಗೆ ಹೋದನು = (ಹೋಗು + ದ + ಅನು)

೨) **ವರ್ತಮಾನಕಾಲ ರೂಪ –** ಪ್ರಸ್ತುತ ನಡೆಯುವ ಕಾಲಕ್ಕೆ ವರ್ತಮಾನ ಕಾಲ ಎನ್ನುತ್ತಾರೆ. ವರ್ತಮಾನ ಕಾಲಸೂಚಕ ಪ್ರತ್ಯಯ 'ಉತ್ತ' ಆಗಿರುತ್ತದೆ.

ಉದಾ: ಬಡಗಿಯು ಕಾಡಿಗೆ ಹೋಗುತ್ತಾನೆ = (ಹೋಗು + ಉತ್ತ + ಆನೆ)

೩) **ಭವಿಷ್ಯತ್‌ಕಾಲ ರೂಪ –** ಮುಂದೆ ನಡೆಯುವ ಕ್ರಿಯೆಯ ಕಾಲಸೂಚಕ ಕ್ರಿಯಾರೂಪಕ್ಕೆ ಭವಿಷ್ಯತ್‌ಕಾಲ ರೂಪ ಎನ್ನುತ್ತಾರೆ. ಭವಿಷ್ಯತ್‌ಕಾಲ ಸೂಚಕ ಪ್ರತ್ಯಯ 'ವ', 'ಉವ' ಆಗಿರುತ್ತದೆ.

ಉದಾ: ನಮ್ಮ ತಂದೆ ನಾಳೆ ಬರುವರು = (ಬರು + ಉವ + ಅರು)

## ಸಮಾಸ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಲೋಪ ಬಾರದ ರೀತಿಯಲ್ಲಿ ತಮ್ಮ ನಡುವಿನ ವಿಭಕ್ತಿ ಪ್ರತ್ಯಯ ಅಥವಾ ವಿವರಣೆಯನ್ನು ಕಳೆದುಕೊಂಡು ಒಂದಾಗುವ ಕ್ರಿಯೆಯನ್ನು ಸಮಾಸ ಎನ್ನುವರು. ಒಟ್ಟು ಸೇರಿ ಆದ ಹೊಸ ಪದವನ್ನೇ 'ಸಮಾಸ ಪದ' ಅಥವಾ 'ಸಮಸ್ತಪದ' ಎನ್ನುವರು.

ಉದಾ: ಕಾಲಿಗೆ + ಬಳೆ = ಕಾಲ್ಬಳೆ.

ಹಣೆಯಲ್ಲಿ + ಕಣ್ಣು ಉಳ್ಳವನು = ಹಣೆಗಣ್ಣ.

ಸಮಾಸ ರಚನೆಯಲ್ಲಿ ಬರುವ ಮೊದಲನೆಯ ಪದವನ್ನು 'ಪೂರ್ವಪದ'ವೆಂದು, ಎರಡನೆಯ ಪದವನ್ನು 'ಉತ್ತರಪದ'ವೆಂದು ಸಮಾಸ ಪದವನ್ನು ಬಿಡಿಸಿ ಬರೆಯುವುದನ್ನು 'ವಿಗ್ರಹ ವಾಕ್ಯ'ವೆಂದು ಕರೆಯುವರು. ಸಮಾಸದಲ್ಲಿ ಪೂರ್ವ ಮತ್ತು ಉತ್ತರ ಪದಗಳೆರಡು ಸಂಸ್ಕೃತ ಪದಗಳಾಗಿರಬೇಕು ಅಥವಾ ಎರಡೂ ಕನ್ನಡ ಪದಗಳಾಗಿರಬೇಕು. ಒಂದು ಕನ್ನಡ ಇನ್ನೊಂದು ಸಂಸ್ಕೃತ ಪದವಾದಾಗ ಅದು 'ಅರಿಸಮಾಸ'ವೆನಿಸುತ್ತದೆ. ಇದು ನಿಷಿದ್ಧ. ಆದರೆ ಬಿರುದುಗಳಿಗೆ, ಪೂರ್ವ ಕವಿ ಪ್ರಯೋಗಗಳಿಗೆ ಇದು ಅನ್ವಯಿಸುವುದಿಲ್ಲ.

**ಸಮಾಸದಲ್ಲಿ ಒಟ್ಟು ಎಂಟು ವಿಧಗಳಿವೆ.**

(೧) ತತ್ಪುರುಷ (೨) ಕರ್ಮಧಾರಯ (೩) ದ್ವಿಗು (೪) ಅಂಶಿ

(೫) ದ್ವಂದ್ವ (೬) ಕ್ರಿಯಾ (೭) ಬಹುವ್ರೀಹಿ (೮) ಗಮಕ

©KTBS Not to be republished

**೧. ತತ್ಪುರುಷ ಸಮಾಸ:**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

**ಪೂರ್ವಪದ + ಉತ್ತರ ಪದ = ಸಮಸ್ತ ಪದ/ಸಮಾಸ ಪದ**

೧) ತೇರಿಗೆ + ಮರ = ತೇರುಮರ

೨) ಅರಸನ + ಮನೆ = ಅರಮನೆ

೩) ತಲೆಯಲ್ಲಿ + ನೋವು = ತಲೆನೋವು

ಇಲ್ಲಿ ಪೂರ್ವ ಮತ್ತು ಉತ್ತರಪದಗಳು ನಾಮಪದಗಳಾಗಿವೆ. ಅವೆರಡರಲ್ಲಿ ಉತ್ತರ ಪದದ ಅರ್ಥ ಪ್ರಧಾನವಾಗಿದೆ. ವಿಭಕ್ತಿ ಪ್ರತ್ಯಯಗಳು ಸಹಜವಾಗಿ ಲೋಪವಾಗಿವೆ. ಇಂತಹ ಉತ್ತರಪದ ಪ್ರಧಾನ ಸಮಸ್ತ ಪದರಚನಗಳೇ ತತ್ಪುರುಷ ಸಮಾಸ.

**೨. ಕರ್ಮಧಾರಯ ಸಮಾಸ:**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ.

| | | | | |
|---|---|---|---|---|
| ಪೂರ್ವಪದ | + | ಉತ್ತರಪದ | = | ಸಮಸ್ತಪದ |
| ಹಳೆಯದು | + | ಕನ್ನಡ | = | ಹಳೆಗನ್ನಡ |
| ಇನಿದು | + | ಸರ | = | ಇಂಚರ |
| ಬಿಳಿದಾದ | + | ತಿಂಗಳು | = | ಬೆಳದಿಂಗಳು |
| ಹಿರಿದು | + | ಬಾಗಿಲು | = | ಹೆಬ್ಬಾಗಿಲು |

ಇಲ್ಲಿ ಸಮಾಸ ರಚನೆಯಲ್ಲಿ ಪೂರ್ವಪದ ಗುಣವಾಚಕವಾಗಿಯೂ ಉತ್ತರಪದ ನಾಮಪದವಾಗಿಯೂ ಇವೆ. ಈ ಎರಡು ಪದ ರಚನೆಗಳ ನಡುವೆ ವಿಶೇಷಣ ಮತ್ತು ವಿಶೇಷ್ಯ ಸಂಬಂಧವಿದ್ದು ಅದರಿಂದ ಉಂಟಾಗುವ ಸಮಾಸವೇ ಕರ್ಮಧಾರಯ ಸಮಾಸ.

**೩. ದ್ವಿಗು ಸಮಾಸ :**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

ಒಂದು + ಕಟ್ಟು = ಒಗ್ಗಟ್ಟು

ಎರಡು + ಭಾಗ = ಇಬ್ಭಾಗ

ಮೂರು + ಮಡಿ = ಮುಮ್ಮಡಿ

ಮೂರು + ಕಣ್ಣು = ಮುಕ್ಕಣ್ಣು

ಸಮಾಸ ರಚನೆಯಲ್ಲಿ ಪೂರ್ವಪದ ಸಂಖ್ಯಾ ವಾಚಕವಾಗಿದ್ದು ಉತ್ತರ ಪದ ನಾಮವಾಚಕವಾಗಿದ್ದು ಅವೆರಡೂ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ.

©KTBS Not to be republished

**೪. ಅಂಶೀ ಸಮಾಸ :**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

| **ಪೂರ್ವಪದ** | + | **ಉತ್ತರಪದ** | = | **ಸಮಾಸಪದ (ಸಮಸ್ತಪದ)** |
|---|---|---|---|---|
| ಕೈಯ | + | ಅಡಿ | = | ಅಂಗೈ |
| ಕೈಯ | + | ಮುಂದು | = | ಮುಂಗೈ |
| ತಲೆಯ | + | ಹಿಂದು | = | ಹಿಂದಲೆ |

ಸಮಾಸ ರಚನೆಯಲ್ಲಿ ಪೂರ್ವಪದ ಅನೇಕ ಭಾಗಗಳನ್ನು ಹೊಂದಿರುವುದು ಅಂದರೆ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ಉತ್ತರಪದ ಕೇವಲ ಆ ಅಂಶಿಯ ಒಂದಂಶವನ್ನು ಮಾತ್ರ ಸೂಚಿಸುತ್ತದೆ. ಪೂರ್ವೋತ್ತರ ಪದಗಳು ಅಂಶ, ಅಂಶೀ ಸಂಬಂಧದಿಂದ ಕೂಡಿದ್ದು ಪೂರ್ವಪದದ ಅರ್ಥ ಪ್ರಧಾನವಾಗಿರುವ ಸಮಾಸವೇ ಅಂಶೀ ಸಮಾಸ.

**೫. ದ್ವಂದ್ವ ಸಮಾಸ :**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

| **ಸಮಸ್ತ ಪದದ ವಿಗ್ರಹ ರೂಪ** | | **ಸಮಸ್ತ ಪದ** |
|---|---|---|
| ಕಸವೂ, ಕಡ್ಡಿಯೂ | = | ಕಸಕಡ್ಡಿ/ಕಸಕಡ್ಡಿಗಳು |
| ಕೆರೆಯೂ, ಕಟ್ಟೆಯೂ, ಬಾವಿಯೂ | = | ಕೆರೆಕಟ್ಟೆಬಾವಿಗಳು |

ಸಮಾಸ ರಚನೆಯಲ್ಲಿ ಎರಡು ಅಥವಾ ಹಲವು ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲ ಪದಗಳ ಅರ್ಥವೂ ಪ್ರಧಾನವಾಗುಳ್ಳ ಸಮಾಸ ರಚನೆಯೇ ದ್ವಂದ್ವ ಸಮಾಸ.

**೬. ಕ್ರಿಯಾ ಸಮಾಸ :**

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

| **ಪೂರ್ವಪದ** | + | **ಉತ್ತರಪದ** | = | **ಸಮಸ್ತಪದ** |
|---|---|---|---|---|
| ಕೈಯನ್ನು | + | ಮುಗಿ | = | ಕೈಮುಗಿ |
| ಮೈಯನ್ನು | + | ತಡವಿ | = | ಮೈದಡವಿ |
| ತಲೆಯನ್ನು | + | ಕೊಡವು | = | ತಲೆಗೊಡವು |

ಸಮಾಸರಚನೆಯಲ್ಲಿ ಪೂರ್ವಪದ ನಾಮಪದವಾಗಿದ್ದು (ಸಾಮಾನ್ಯವಾಗಿ 'ಅನ್ನು' ದ್ವಿತೀಯಾ ವಿಭಕ್ತಿ ಅಂತ್ಯವಾಗಿದ್ದು) ಉತ್ತರಪದ ಕ್ರಿಯಾಪದವಾಗಿದ್ದು ಅವೆರಡೂ ಸೇರಿ ಆಗುವ ಸಮಾಸವೇ ಕ್ರಿಯಾಸಮಾಸ.

©KTBS Not to be republished

## ೭. ಬಹುವ್ರೀ ಸಮಾಸ :

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ:

| ಸಮಸ್ತ ಪದದ ವಿಗ್ರಹ ರೂಪ / | | ಸಮಸ್ತ ಪದ |
|---|---|---|
| ಹಣೆಯಲ್ಲಿ ಕಣ್ಣುಳ್ಳವನು | = | ಹಣೆಗಣ್ಣ (ಶಿವ) |
| ಮೂರು ಕಣ್ಣುಳ್ಳವನು | = | ಮುಕ್ಕಣ್ಣ (ಶಿವ) |
| ಒಂದು ಕಣ್ಣುಳ್ಳವನು | = | ಒಕ್ಕಣ್ಣ |

ಸಮಾಸ ರಚನೆಯಲ್ಲಿ ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ (ಅನ್ಯ ಪದದ) ಅರ್ಥ ಪ್ರಧಾನವಾಗುವ ಸಮಾಸವೇ ಬಹುವ್ರೀಹಿ ಸಮಾಸ.

## ೮. ಗಮಕ ಸಮಾಸ :

ಕೆಳಗಿನ ಸಮಾಸ ರಚನಾ ವಿನ್ಯಾಸಗಳನ್ನು ಗಮನಿಸಿ.

| **ಪೂರ್ವಪದ** | + | **ಉತ್ತರಪದ** | = | **ಸಮಸ್ತಪದ** |
|---|---|---|---|---|
| ಇವಳು | + | ಹುಡುಗಿ | = | ಈ ಹುಡುಗಿ |
| ಮಾಡಿದ್ದು | + | ಅಡುಗೆ | = | ಮಾಡಿದಡಿಗೆ |
| ಅರಳುವುದು | + | ಮಲ್ಲಿಗೆ | = | ಅರಳುಮಲ್ಲಿಗೆ |

ಪೂರ್ವ ಪದದಲ್ಲಿ ಸರ್ವನಾಮ ಅಥವಾ ಕೃದಂತಗಳಿದ್ದು ಉತ್ತರಪದ ನಾಮಪದದೊಂದಿಗೆ ಸೇರಿದಾಗ ಆಗುವ ಸಮಾಸವೇ ಗಮಕ ಸಮಾಸ.

**“ನೀ ಶಾಶ್ವತವಲ್ಲ – ನೀ ಮಾಡಿದ ಸೇವೆ ಶಾಶ್ವತ”**

*****

©KTBS Not to be republished

# ೧೦. ಉದರ ವೈರಾಗ್ಯ

–ಪುರಂದರದಾಸರು

**ಪ್ರವೇಶ:** ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಾಸ ಸಾಹಿತ್ಯವು ಒಂದು ಪ್ರಮುಖ ಘಟ್ಟವಾಗಿದೆ. ದಾಸ ಸಾಹಿತ್ಯದಲ್ಲಿ ಕೀರ್ತನೆಗಳು ಮತ್ತು ಉಗಾಭೋಗಗಳು ಪ್ರಮುಖ ರೂಪಗಳಾಗಿವೆ. ಹರಿನಾಮ ಸ್ಮರಣೆ, ಅಂತರಂಗ ನಿವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ ಮುಂತಾದ ವಸ್ತುವನ್ನು ಇಟ್ಟುಕೊಂಡು ಇವು ರಚಿತವಾಗಿವೆ. ಸಮಾಜಮುಖಿ ಚಿಂತನೆ, ಸರಳ ರಚನೆ, ಹಾಡಿಕೆಯ ಲಕ್ಷಣ ಹಾಗೂ ಭಾಷಾ ಶೈಲಿಗಳಿಂದ ಜನರ ಮನಸ್ಸನ್ನು ಇವು ಗೆದ್ದಿವೆ. ಪ್ರಸ್ತುತ ಕೀರ್ತನೆಯಲ್ಲಿ ಮಹಾಭಕ್ತನಂತೆ ನಟಿಸುವ ಡಾಂಭಿಕ ಭಕ್ತನ ತೋರಿಕೆಯ ಭಕ್ತಿಯ ಪ್ರದರ್ಶನವನ್ನು ಪುರಂದರದಾಸರು ವಿಡಂಬಿಸಿರುವರು.

ಉದರ ವೈರಾಗ್ಯವಿದು, ನಮ್ಮ
ಪದುಮನಾಭನಲಿ ಲೇಶ ಬಕುತಿಯಿಲ್ಲ ॥ಪ॥
ಉದಯ ಕಾಲದಲೆದ್ದು ಗಡಗಡ ನಡುಗುತ
ನದಿಯಲಿ ಮಿಂದೆನೆಂದು ಹಿಗ್ಗುತಲಿ
ಮದ ಮತ್ಸರ ಕ್ರೋಧ ಒಳಗೆ ತುಂಬಿಟ್ಟು ಕೊಂಡು
ಬದಿಯಲಿದ್ದವರಿಗಾಶ್ಚರ್ಯ ತೋರುವುದು ॥೧॥

ಕಂಚುಗಾರನ ಬಿಡಾರದಂದದಿ
ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ
ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ
ವಂಚನೆಯಿಂದಲಿ ಪೂಜೆ ಮಾಡುವುದು ॥೨॥

ಕರದಲಿ ಜಪಮಣಿ ಬಾಯಲಿ ಮಂತ್ರವು
ಅರಿವೆಯ ಮುಸುಕನು ಮೋರೆಗೆ ಹಾಕಿ
ಪರಸತಿಯರ ಗುಣ ಮನದಲಿ ಸ್ಮರಿಸುತ
ಪರಮ ವೈರಾಗ್ಯಶಾಲಿ ಎಂದೆನಿಸುವುದು ॥೩॥

ಬೂಟಕತನದಲಿ ಬಹಳ ಬಕುತಿ ಮಾಡಿ
ದಿಟನೀತ ಸರಿಯಾರಿಲ್ಲೆನಿಸಿ
ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರಿ
ಊಟದ ಮಾರ್ಗದ ಜ್ಞಾನವಿದಲ್ಲದೆ ॥೪॥

©KTBS Not to be republished

ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ
ಏನಾದರು ಹರಿ ಪ್ರೇರಣೆಯೆಂದು
ಧ್ಯಾನಿಸಿ ಮೌನದಿ ಪುರಂದರವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲವು ॥೫॥

## ಕೃತಿಕಾರರ ಪರಿಚಯ



ಪುರಂದರದಾಸರು ಹರಿದಾಸ ಸಾಹಿತ್ಯದ ಅಗ್ರಗಣ್ಯ ಕವಿಗಳಲ್ಲಿ ಒಬ್ಬರು. ಪುರಂದರಗಡದಲ್ಲಿ ಜನಿಸಿದ ಇವರು ೧೬ನೆಯ ಶತಮಾನದಲ್ಲಿ ಜೀವಿಸಿದ್ದರು. ಇವರ ಮೊದಲ ಹೆಸರು ಶ್ರೀನಿವಾಸನಾಯಕ. ಶ್ರೀಮಂತರಾಗಿದ್ದ ಪುರಂದರದಾಸರು ಕಾರಣಾಂತರದಿಂದ ಜೀವನದಲ್ಲಿ ವೈರಾಗ್ಯ ತಾಳಿ ಹರಿದಾಸರಾದರೆಂಬ ಪ್ರತೀತಿ ಇದೆ.

ಪುರಂದರದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇವರನ್ನು **‘ಕರ್ನಾಟಕ ಸಂಗೀತ ಪಿತಾಮಹ’** ಎಂದು ಕರೆಯುತ್ತಾರೆ. ತಮ್ಮ ದೀಕ್ಷಾಗುರುಗಳಾದ ವ್ಯಾಸರಾಯರಿಂದ ‘ದಾಸರೆಂದರೆ ಪುರಂದರದಾಸರಯ್ಯ’ ಎಂದು ಹೊಗಳಿಸಿಕೊಂಡ ಶ್ರೇಷ್ಠ ಕೀರ್ತನಕಾರರು ಇವರು. ಇವರ ಕೀರ್ತನೆಗಳ ಅಂಕಿತ ‘ಪುರಂದರವಿಠಲ’.

ಪ್ರಸ್ತುತ **‘ಉದರ ವೈರಾಗ್ಯ’** ಎಂಬ ಕೀರ್ತನೆಯನ್ನು ‘ಪುರಂದರ ಸಾಹಿತ್ಯ ದರ್ಶನ ಸಂಪುಟ-೧ (ಜೀವನ ದರ್ಶನ)’ ದಿಂದ ಆರಿಸಿಕೊಳ್ಳಲಾಗಿದೆ.

Not to be republished ©KTBS

## ಪದಗಳ ಅರ್ಥ

ಅರಿವೆ–ಬಟ್ಟೆ;
ಉದರ–ಹೊಟ್ಟೆ;
ಕರ–ಕೈ;
ಡಂಬ–ಮೋಸ, ವಂಚನೆ;
ನೆರೆಹಿ–ಜೋಡಿಸಿ;
ಪ್ರತಿಮೆ–ವಿಗ್ರಹ;
ಬೂಟಕತನ–ನಟನೆ;
ಮಿಂದು–ಸ್ನಾನ ಮಾಡಿ, ಜಳಕಮಾಡಿ;
ಮೋರೆ–ಮುಖ;
ಲೇಶ–ಸ್ವಲ್ಪ;
ವೈರಾಗ್ಯ–ವಿರಕ್ತಿ, ಪ್ರಾಪಂಚಿಕ ವಿಷಯಗಳಲ್ಲಿ ಅನಾಸಕ್ತಿ.

## ಟಿಪ್ಪಣಿ:

**ಉದರ ವೈರಾಗ :** ಹೊಟ್ಟೆಪಾಡಿಗಾಗಿ ವೈರಾಗ್ಯದ ಸೋಗು.

**ಕಂಚುಗಾರನ ಬಿಡಾರದಂದದಿ :** ಕಂಚು, ಹಿತ್ತಾಳೆ ತಾಮ್ರದಂತಹ ಲೋಹಗಳನ್ನು ಕರಗಿಸಿ ಎರಕ ಹೊಯ್ದು ಮೂರ್ತಿಗಳನ್ನು ತಯಾರಿಸುವವರು, ಅವನ್ನು ಮಾರಲೆಂದು ಸಾಲಾಗಿ ಜೋಡಿಸಿರುತ್ತಾರೆ. ಅವರಿಗೆ ಅವುಗಳ ಬಗ್ಗೆ ಭಕ್ತಿಯೇನೂ ಇರುವುದಿಲ್ಲ. ಅವು ಅವರಿಗೆ ಮಾರಾಟದ ಸರಕುಗಳು ಮಾತ್ರ.

**ಬೂಟಕತನ :** ಬೂಟಾಟಿಕೆ, ವಂಚನೆ, ಸೋಗು.

**ನಾಟಕ ಸ್ತ್ರೀಯಂತೆ :** ನಿಜ ಜೀವನ ಬೇರೆ, ನಾಟಕದ ಪಾತ್ರವೇ ಬೇರೆ. ಹಿಂದಿನ ಕಾಲದಲ್ಲಿ ನಾಟಕಗಳಲ್ಲಿ ಸ್ತ್ರೀಪಾತ್ರ ಮಾಡುತ್ತಿದ್ದವರೆಲ್ಲಾ ಪುರುಷರೇ.

**ದಿಟನೀತ :** ದಿಟನು ಈತ. ನಿಜವಾಗಿ ಧಾರ್ಮಿಕನು.

**ಏನಾದರು ಹರಿ ಪ್ರೇರಣೆ :** ಲೋಕದಲ್ಲಿ ಎಲ್ಲ ಕಾರ್ಯ ಮಾಡುವವನು ಮತ್ತು ಮಾಡಿಸುವವನು ಪರಮಾತ್ಮನೇ ಎಂಬ ಭಾವನೆ.

### ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಉದರ ವೈರಾಗ್ಯ ಎಂದರೇನು?

೨. ಪುರಂದರದಾಸರು ಯಾವುದನ್ನು ಉದರ ವೈರಾಗ್ಯವೆಂದಿದ್ದಾರೆ?

೩. ಡಾಂಭಿಕ ಭಕ್ತನ ಮನಸ್ಸು ಯಾವ ಗುಣಗಳಿಂದ ತುಂಬಿದೆ ಎಂದು ಪುರಂದರ ದಾಸರು ಹೇಳಿದ್ದಾರೆ?

೪. ಪುರಂದರದಾಸರು ಡಾಂಭಿಕ ಭಕ್ತನ ದೇವರ ಕೋಣೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ?

೫. ಪುರಂದರದಾಸರ ಪದಗಳ ಅಂಕಿತ ಯಾವುದು?

**ಆ) ಕೆಳಗಿನ ಪದಗಳಿಗೆ ಎರಡು, ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಡಾಂಭಿಕನ ಭಕ್ತಿ ಬದಿಯಲ್ಲಿದ್ದವರಿಗೆ ಆಶ್ಚರ್ಯವಾಗುವುದು ಯಾವಾಗ?

೨. ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಎಂದೆನಿಸುವ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?

೩. ಪುರಂದರದಾಸರು ಡಾಂಭಿಕನ ಭಕ್ತಿಯನ್ನು ನಾಟಕಸ್ತ್ರೀಗೆ ಏಕೆ ಹೋಲಿಸಿದ್ದಾರೆ?

೪. ನಿಜವಾಗಿ ಪುರಂದರವಿಠಲನನ್ನು ಯಾವಾಗ ಕಾಣಬಹುದು ಎಂದು ಪುರಂದರದಾಸರು ಹೇಳುತ್ತಾರೆ?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಗಳನ್ನು ಬರೆಯಿರಿ.**

೧. ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ?

೨. ಪುರಂದರದಾಸರು ಕಪಟ ಭಕ್ತಿಯ ಆರಾಧಕರನ್ನು ದಾಸರು ಹೇಗೆ ಅಣಕಿಸಿ ಅವಹೇಳನ ಮಾಡಿದ್ದಾರೆ?

**ಈ) ಕೆಳಗಿನ ಸಾಲುಗಳ ಸ್ವಾರಸ್ಯವನ್ನು ವಿವರಿಸಿ.**

೧. "ಕರದೊಳು ಜಪಮಣಿ ಬಾಯೊಳು ಮಂತ್ರವು"

೨. "ಪರಸತಿ ಪರಧನಕಾಗಿ ಚಿಂತಿಸುತೆ"

೩. "ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ"

೪. "ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರಿ"

೫. "ವಂಚನೆಯಿಂದಲಿ ಪೂಜೆ ಮಾಡುವುದು"

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ.**

ವೈರಾಗ್ಯವಿದು, ನದಿಯೊಳು, ಪ್ರೇರಣೆಯೆಂದು, ಅಂಗಡಿಯಂದದಿ, ಏನೆಲ್ಲಕೆ.

**ಆ) ಕೆಳಗಿನ ತದ್ಭವಗಳಿಗೆ ತತ್ಸಮಗಳನ್ನು ಬರೆಯಿರಿ.**

ಪದುಮ, ಬಕುತಿ, ಅಚ್ಚರಿ, ಮೂರುತಿ, ಕಜ್ಜ.

## ಭಾಷಾ ಚಟುವಟಿಕೆ

ಅ) ಕೆ. ಎಸ್. ನಿಸಾರ್ ಅಹಮದ್ ಅವರ 'ಶ್ರೀ ಪುರಂದರರು' ಕವಿತೆಯನ್ನು ಸಂಗ್ರಹಿಸಿ ಓದಿರಿ.

ಆ) ಪುರಂದರದಾಸರ ಕೀರ್ತನೆಗಳನ್ನು ರಾಗವಾಗಿ ಹಾಡಿರಿ.

ಇ) ಉದರ ವೈರಾಗ್ಯ ಪದ್ಯದ ಎರಡನೆಯ ಮತ್ತು ಐದನೆಯ ನುಡಿಗಳನ್ನು ಕಂಠಪಾಠ ಮಾಡಿರಿ.

ಈ) ಪುರಂದರದಾಸರ ಜೀವನವನ್ನು ಬಿಂಬಿಸುವ ನಾಟಕವನ್ನು ಮಾಡಿರಿ.

ಉ) ಬೂಟಾಟಿಕೆಯ ಭಕ್ತಿಯ ಪ್ರದರ್ಶನವನ್ನು ಪುರಂದರ ದಾಸರು ಹೇಗೆ ಕೀರ್ತನೆಯ ಮೂಲಕ ತೆರೆದಿಟ್ಟಿದ್ದಾರೆ? ತರಗತಿಯಲ್ಲಿ ಚರ್ಚಿಸಿರಿ.

ಊ) ಆಷಾಢಭೂತಿತನದ ಭಕ್ತಿಯನ್ನು ಪುರಂದರರು ಹೇಗೆ ಲೇವಡಿ ಮಾಡಿದ್ದಾರೆ? ಚಿತ್ರಿಸಲು ಪ್ರಯತ್ನಿಸಿ.

©KTBS Not to be republished

## ಛಂದಸ್ಸು

ಪದ್ಯ ರಚನೆಯ ನಿಯಮಗಳನ್ನು ವಿವರಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಛಂದಸ್ಸಿನ ಶಾಸ್ತ್ರದ ಪ್ರಕಾರ ರಚಿತವಾದ ಪದ್ಯವನ್ನು ಛಂದೋಬದ್ಧ ಪದ್ಯಗಳು ಎನ್ನುತ್ತಾರೆ. ಛಂದಸ್ಸಿನಲ್ಲಿ ಮುಖ್ಯವಾಗಿ ಈ ಅಂಶಗಳು ಇರುತ್ತವೆ.

೧. ಪ್ರಾಸ

೨. ಯತಿ

೩. ಗಣ

**೧. ಪ್ರಾಸ :** ಒಂದು ನಿರ್ದಿಷ್ಟ ವ್ಯಂಜನವು ಪದ್ಯದ ಪ್ರತಿ ಸಾಲಿನ ಆದಿ, ಮಧ್ಯ, ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಪ್ರಾಸ.

೧. ಆದಿಪ್ರಾಸ : ಕಾವ್ಯದ ಪ್ರತಿಸಾಲಿನ ಎರಡನೆಯ ಅಕ್ಷರದಲ್ಲಿ ಒಂದೇ ರೀತಿಯ ವ್ಯಂಜನ ಬರುವುದೇ ಆದಿಪ್ರಾಸ.

೨. ಮಧ್ಯಪ್ರಾಸ : ಕಾವ್ಯದ ಪ್ರತಿಸಾಲಿನ ಮಧ್ಯದಲ್ಲಿ ನಿಯಮಿತವಾಗಿ ಬರುವ ಒಂದೇ ರೀತಿಯ ವ್ಯಂಜನಾಕ್ಷರಗಳೇ ಮಧ್ಯಪ್ರಾಸ.

೩. ಅಂತ್ಯಪ್ರಾಸ : ಕಾವ್ಯದ ಸಾಲುಗಳ ಕೊನೆಯಲ್ಲಿ ನಿಯಮಿತವಾಗಿ ಬರುವ ಒಂದೇ ರೀತಿಯ ವ್ಯಂಜನಾಕ್ಷರಗಳೇ ಅಂತ್ಯಪ್ರಾಸ.

**೨. ಯತಿ :** ಯತಿ ಎಂದರೆ ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣ.

**೩. ಗಣ :** ಗಣ ಎಂದರೆ ಗುಂಪು.

ಛಂದಸ್ಸಿನಲ್ಲಿ ೧. ಮಾತ್ರಾಗಣ, ೨. ಅಕ್ಷರಗಣ ೩. ಅಂಶಗಣ ಎಂಬ ಮೂರು ವಿಧದ ಗಣಗಳಿವೆ.

ಅಕ್ಷರವನ್ನು ಉಚ್ಚರಿಸಲು ಬೇಕಾದ ಕಾಲವನ್ನು 'ಮಾತ್ರೆ' ಎಂಬ ಮಾನದಿಂದ ಅಳೆಯಲಾಗುವುದು.

**ಲಘು:** ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳನ್ನು ಲಘು (∪) ಎನ್ನುವರು

**ಗುರು:** ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲಾಗುವ ಅಕ್ಷರಗಳನ್ನು ಗುರು (–) ಎಂದು ಕರೆಯುವರು.

**ಪ್ರಸ್ತಾರ:** ಲಘು ಗುರುಗಳನ್ನು ಗುರುತಿಸುವ ಕ್ರಿಯೆಯನ್ನು ಪ್ರಸ್ತಾರ ಹಾಕುವುದು ಎನ್ನುವರು.

©KTBS Not to be republished

**ಅಕ್ಷರವು ಗುರು ಎನಿಸುವ ಅಕ್ಷರಗಳು**

| ಅಕ್ಷರಗಳು | ಉದಾಹರಣೆ |
|---|---|
| ದೀರ್ಘಾಕ್ಷರ | — ∪<br>ಮೋರೆ |
| ಒತ್ತಕ್ಷರದ ಹಿಂದಿನ ಅಕ್ಷರ | — ∪<br>ಪ ದ್ಯ |
| ಅನುಸ್ವಾರದಿಂದ ಕೂಡಿರುವ ಅಕ್ಷರ | — ∪<br>ಚಿಂತೆ |
| ವಿಸರ್ಗದಿಂದ ಕೂಡಿರುವ ಅಕ್ಷರ | — ∪<br>ದುಃಖ |
| ವ್ಯಂಜನಾಕ್ಷರದಿಂದ ಕೂಡಿದ ಅಕ್ಷರ | ∪ ∪ —<br>ಘನದೊಳ್ |
| ಐ ಸ್ವರವಿರುವ ಅಕ್ಷರ | — ∪ ∪<br>ಕೈಯಲಿ |
| ಔ ಸ್ವರವಿರುವ ಅಕ್ಷರ | — ∪<br>ಮೌನ |

ಷಟ್ಪದಿಯ ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರ ಲಘುವಾಗಿದ್ದರೂ ಗುರುವೆಂದೇ ಪರಿಗಣಿಸಬೇಕು.

**ಲಘು ಎನಿಸುವ ಅಕ್ಷರಗಳು**

ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಹ್ರಸ್ವಸ್ವರ ಮತ್ತು ಹ್ರಸ್ವಸ್ವರದಿಂದ ಕೂಡಿದ ಗುಣಿತಾಕ್ಷರಗಳೆಲ್ಲವನ್ನೂ ಲಘು ಎಂದು ಪರಿಗಣಿಸಬೇಕು.

**ಮಾತ್ರಾಗಣ :** ಮಾತ್ರೆಗಳ ಆಧಾರದಿಂದ ಗಣ ವಿಭಾಗ ಮಾಡುವುದೇ ಮಾತ್ರಾಗಣ. ಮೂರು, ನಾಲ್ಕು ಅಥವಾ ಐದು ಮಾತ್ರೆಗಳಿಗೆ ಒಂದೊಂದು ಗಣದಂತೆ, ಸಾಲಿನಲ್ಲಿರುವ ಎಲ್ಲಾ ಮಾತ್ರೆಗಳನ್ನು ಗಣಗಳಾಗಿ ವಿಂಗಡಿಸಲಾಗುವುದು.

*****

©KTBS Not to be republished

# ೧೧. ನನ್ನ ಪುಸ್ತಕ ಪ್ರಪಂಚ

– ಬೀchi

**ಪ್ರವೇಶ:** ಹಿಂದಿನವರ ತಪ್ಪುಗಳನ್ನು ಅರಿತು ಮುಂದಿನವರು ಹೆಜ್ಜೆ ಇಟ್ಟರೆ ಒಳಿತಲ್ಲವೆ? ಹಳಬರ ಬಾಳು ಹೊಸ ಜೀವ ಸಸಿಗೆ ಗೊಬ್ಬರವಿದ್ದಂತೆ. ಪ್ರತಿಯೊಬ್ಬರ ಬಾಳಿನ ಕತೆಯೂ ಒಂದು ಅತ್ಯುತ್ತಮ ಚರಿತ್ರೆಯಾಗುತ್ತದೆ. ಜೀವನ ಚರಿತ್ರೆ ಮತ್ತು ಆತ್ಮಕಥೆಗಳು ಜೀವನಾನುಭವಗಳನ್ನು ಮುಂದಿನ ಪೀಳಿಗೆಗೆ ರವಾನಿಸುತ್ತವೆ. ಬರೆಯುವ ಹದವನ್ನು ಬಲ್ಲವರಿಗೆ ಬಾಳೇ ಒಂದು ಕಲೆ. ಅದನ್ನು ಬರಹದಲ್ಲಿ ಮೂಡಿಸುವುದು ಕುಸುರಿಯ ಕೆಲಸದಂತೆ ಸೂಕ್ಷ್ಮವಾದುದು. ಹಾಸ್ಯ ಸಾಹಿತಿ ಬೀಚಿ ಅವರ ಆತ್ಮಕತೆಯ ಈ ತುಣುಕಿನಲ್ಲಿ ಕೆಲವು ಸಂದೇಶಗಳಿವೆ. ಉತ್ತಮ ಪುಸ್ತಕಗಳು ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಜೀವನ ದೃಷ್ಟಿಯನ್ನು ಬದಲಿಸುವ ಸಾಮರ್ಥ್ಯ ಹೊಂದಿವೆ. ಒಳ್ಳೆಯ ಕೃತಿಗಳು ಮನುಷ್ಯನ ಏಳಿಗೆಗೆ ಸಹಾಯಕವಾಗುತ್ತವೆ. ಜ್ಞಾನದ ಹರವನ್ನು ಹೆಚ್ಚಿಸುತ್ತವೆ ಎಂಬ ಸಂದೇಶಗಳನ್ನು ಪ್ರಸ್ತುತ ಲೇಖನವು ಸಾರುತ್ತದೆ.

ಇಂಗ್ಲಿಷ್ ಭಾಷೆಯಲ್ಲಿ ಹೇಳಿಕೆಯೊಂದಿದೆ. Tell me who your friends are, I will tell what you are (ನಿನ್ನ ಮಿತ್ರರಾರು ಎಂಬುದನ್ನು ನನಗೆ ಹೇಳು, ನೀನೇನು ಎಂಬುದನ್ನು ಹೇಳುತ್ತೇನೆ) ಇದನ್ನು ಕೊಂಚ ಮಾರ್ಪಡಿಸಿ Tell me the books you read, I will tell you what your head is (ನೀನಾವ ಪುಸ್ತಕಗಳನ್ನು ಓದುತ್ತಿ ಎಂಬುದನ್ನು ಹೇಳು, ನಿನ್ನ ತಲೆ ಏನೆಂಬುದನ್ನು ಹೇಳುತ್ತೇನೆ) ಎಂಬ ಇನ್ನೊಂದು ಹೇಳಿಕೆಯೊಂದನ್ನು ಸೃಷ್ಟಿ ಮಾಡಬಹುದು.

ನನ್ನನ್ನು ಸೆರೆಹಿಡಿದ, ನನ್ನ ಆಲೋಚನಾ ಕ್ರಮಕ್ಕೆ ತಿರುವುಕೊಟ್ಟ ಮತ್ತು ನನ್ನ ಬಾಳಿಗೊಂದು ನಿರ್ದಿಷ್ಟ ಗುರಿಯನ್ನೊದಗಿಸಿದ ಪುಸ್ತಕಗಳು ಇಂಗ್ಲಿಷ್ ಪುಸ್ತಕಗಳು ಮಾತ್ರವೇ ಎಂದರೆ ಕನ್ನಡ ಪುಸ್ತಕಗಳಿಗೆ ಅಪಮಾನ ಮಾಡಿದಂತಾಗಲಿಲ್ಲವೆಂದು ಭಾವಿಸುತ್ತೇನೆ. ಮಾನ, ಅಪಮಾನಗಳಿಗಿಂತಲೂ ಹೆಚ್ಚು ಮುಖ್ಯವಾದುದು ಸತ್ಯ. ಸತ್ಯವನ್ನಾಡುವುದೇ ಮಾನ.

ನನ್ನ ಆತ್ಮಚರಿತ್ರೆಯಲ್ಲಿ ಈ ಪ್ರಕರಣವನ್ನು ಬರೆಯಲೇಬೇಕು. ನನ್ನ ಪ್ರಪಂಚದ ಬಹುದೊಡ್ಡ ಮತ್ತು ಅತಿ ಮುಖ್ಯವಾದ ಭಾಗವೇ ಪುಸ್ತಕ ಪ್ರಪಂಚ. ಪುಸ್ತಕ ಪ್ರಪಂಚವಿಲ್ಲದ ನನ್ನ ಪ್ರಪಂಚ ಬರಡು. ಸಹರಾ ಮರುಭೂಮಿ. ನನ್ನ ಜೀವಾಳವೇ ಪುಸ್ತಕವಾಗಿರುವಾಗ ಪುಸ್ತಕವಿಲ್ಲದ ಬೀಚಿ ಜೀವವಿಲ್ಲದ ದೇಹವಿದ್ದಂತೆ. ರೆಡಿಮೇಡ್ ಅಂಗಡಿಯ ಮುಂದು ಕುಳಿತಿರುವ ಚೆಂದದ ಬೊಂಬೆಯಂತೆ. ಹೈಸ್ಕೂಲಿನಲ್ಲಿದ್ದಾಗ ಓದುವುದೆಂದರೆ ಕೇವಲ ಪಠ್ಯಪುಸ್ತಕವೊಂದನ್ನೇ, ಈಗಿನ ವಿದ್ಯಾರ್ಥಿಗಳು ಪುಣ್ಯವಂತರು – ನರ್ಸರಿ ಕ್ಲಾಸಿನಲ್ಲಿಯ ಪುಸ್ತಕಕ್ಕೇ ನೋಟ್ಸ್‌ಗಳಾಗಿವೆ, ಆ ನೋಟ್ಸ್‌ಗಳಿಗೆ ಡೈಜೆಸ್ಟ್ ಇವೆ. ಆದರೆ ನಮಗೆ ಪಠ್ಯಪುಸ್ತಕಗಳು ಮಾತ್ರವೇ ಗತಿ. ಪಠ್ಯಪುಸ್ತಕಗಳಲ್ಲದೆ ಬೇರೆತರ ಓದುವುದು ಮನೆಯವರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ, ಮಾಸ್ತರ ದೃಷ್ಟಿಯಲ್ಲಿ ಸಮಯ ಹಾಳು. ನಮ್ಮ ಶಾಲೆಯಲ್ಲಿ ಒಂದು ಲೈಬ್ರರಿಯೂ ಇತ್ತು. ಸರಸ್ವತಿ ಪೂಜೆದಿನದಂದು ಮಾತ್ರವೇ ನಮಗದರ ದರ್ಶನ. ಬೀಗ ಹಾಕಿದ ಆ ಕಪಾಟುಗಳಿಗೆ ಅರಿಸಿನ, ಕುಂಕುಮ ಹಚ್ಚಿ ಪೂಜೆ ಆರತಿ ಮಾಡಿ, ತೆಂಗಿನಕಾಯಿ ಒಡೆದು ಚರುಪು ತಿನ್ನುತ್ತಿದ್ದೆವು. ಕಪಾಟಿನಲ್ಲಿ ಪೂಜೆಗಿದ್ದ ಆ ಪುಸ್ತಕಗಳು ನಮ್ಮ ಮೇಲೆ ಯಾವ

©KTBS
Not to be republished

ಪ್ರಭಾವವನ್ನು ಬೀರಲು ಸಾಧ್ಯ? ಇದರಿಂದಾಗಿ ಹೈಸ್ಕೂಲು ಮುಗಿಯುವವರೆಗೂ ನನ್ನ ಓದೆಲ್ಲವೂ ಕೇವಲ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಕ್ಕೆ ಮಾತ್ರವೇ.

ಹುಬ್ಬಳ್ಳಿಯಲ್ಲಿ ಲೈಫ್‌ಇನ್‌ಷೂರೆನ್ಸ್ ಕಂಪನಿಯೊಂದರ ಏಜೆಂಟರ ಆಫೀಸಿನಲ್ಲಿ ನವುಕರಿ. ಆಫೀಸಿನಲ್ಲಿ ಕೆಲಸ ಏನೂ ಇಲ್ಲ ಅನ್ನುವಷ್ಟು ಕಡಿಮೆ. ಆಫೀಸಿನ ಇದಿರು ಸಾಲಿನಲ್ಲಿಯೇ ಇದ್ದ ಸಾಹಿತ್ಯ ಭಂಡಾರದ ಶ್ರೀ ಮಂಗಳೂರು ಗೋವಿಂದರಾಯರ ಪರಿಚಯವಾಯಿತು. ಅವರ ಅಂಗಡಿಯಲ್ಲಿ ಕುಳಿತು ತವುಡು ಕುಟ್ಟುವುದು ನನ್ನ ನಿತ್ಯದ ಕಾರ್ಯಕ್ರಮ. ಒಂದು ಸಂಜೆ ನನ್ಹೆಂಡತಿಯೊಂದಿಗೆ ವಾಕಿಂಗ್ ಹೊರಟಿದ್ದಾಗ ಸಾಹಿತ್ಯ ಭಂಡಾರದತ್ತ ಬೆರಳು ತೋರಿಸಿ, "ಇದೇ ನನ್ನ ಆಫೀಸು. ಈ ಪುಸ್ತಕ ಅಂಗಡಿಯಲ್ಲಿಯೇ ಹೆಚ್ಚು ಸಮಯ ಕೂಡುತ್ತೇನೆ" ಎಂದು ಹೇಳಿದೆ. ಇದನ್ನು ನೆನಪಿನಲ್ಲಿಟ್ಟುಕೊಂಡಿದ್ದ ನನ್ನ ಹೆಂಡತಿ ಒಂದು ದಿನ "ಮಧ್ಯಾಹ್ನ ಕಳೆಯೋದೇ ಕಷ್ಟ ಆಗ್ತದೆ. ಯಾವದಾರೆ ಒಂದು ಕನ್ನಡ ಪುಸ್ತಕ ತಂದು ಕೊಡ್ರಿ" ಎಂದು ಕೇಳಿದಳು.

ಮರುದಿನ ನನ್ನ ಮಿತ್ರರಾದ ಗೋವಿಂದರಾಯರಿಗೆ ಹೇಳಿದೆ.

"ಒಂದು ಯಾವ್ದಾರೆ ನಮ್ಮ ಖನಡದ ಕತೀ ಬುಕ್ಕಾನಂತೆ ಕೊಡ್ರೆಪಾ! ನನ್ನ ಹೆಣ್ತಿ ಬಡಕೊಳ್ಳಿಕ್ಕೆ ಹತ್ಯಾಳೆ, ಆಮ್ಯಾಲೆ ಪರತು ತಂದುಕೊಡುತೀನಿ."

ಮಂಗಳೂರು ರಾಯರು ಮುಸಿ ಮುಸಿ ನಗುತ್ತ ಕಪಾಟದಿಂದ ಒಂದು ಪುಸ್ತಕವನ್ನು ಹೊರತೆಗೆದು ಕಾಗದಲ್ಲಿಟ್ಟುಕೊಟ್ಟರು. ಅದಾವ ಪುಸ್ತಕವೆಂದು ನಾನೇಕೆ ನೋಡಲಿ? ಎರಡನೆಯ ದಿನ ಮನೆಗೆ ಹೋದಾಗ ನನ್ನ ಹೆಂಡತಿ ಪುಸ್ತಕ ಓದುತ್ತ ಅಳುತ್ತಿದ್ದಳು.

"ಕನಡಾ ಓದಲಿಕ್ಕೆ ಬರೋದಿಲ್ಲಾ ಅಂತ ಅಳ್ತಿದೇನೇ?" ಎಂದು ತಮಾಷೆ ಮಾಡಿದೆ.

ಕನ್ನಡ ಮತ್ತು ತೆಲುಗು ಲಿಪಿಗಳಲ್ಲಿ ಯಾವ ಮಹಾಭೇದವಿದೆ?

"ಭಾಳ ಭೇಷ್ ಅದರೀ ಪುಸ್ತಕ. ನೀವೂ ಓದಬೇಕು ಇದನ್ನೊಮ್ಮೆ."

ಆ ಪುಸ್ತಕವನ್ನು ಓದಿ ಮುಗಿಸಿದನಂತರ, ನಾನದನ್ನು ಓದಲೇಬೇಕು ನನ್ನ ಹೆಂಡತಿ ನನಗೆ ಒತ್ತಾಯ ಮಾಡಿ ದುಂಬಾಲು ಬಿದ್ದಳು.

ಮರುದಿನ ರೈಲ್ವೆ ಪ್ರಯಾಣವಿತ್ತು. ಟ್ರೇನಿನಲ್ಲಿ ಓದಿದರಾಯಿತು ಎಂದು ಕೊಂಡೊಯ್ದೆ. ರೈಲಿನಲ್ಲಿ ಕನ್ನಡ ಪುಸ್ತಕ ಕೈಲಿ ಹಿಡಿದು ಕುಳಿತರೆ ನನ್ನ ಮಾನ ಉಳಿಯುತ್ತದೆಯೇ? 'ಇಲಸ್ಟ್ರೇಟೆಡ್ ವೀಕ್ಲಿ' ಪತ್ರಿಕೆಯನ್ನು ಕೈಲಿ ಹಿಡಿದು ಅದರಲ್ಲಿ ಕನ್ನಡ ಪುಸ್ತಕವನ್ನು ಬಚ್ಚಿಟ್ಟುಕೊಂಡು ಓದಲಾರಂಭಿಸಿದೆ. ಆರಂಭಿಸಿದುದಷ್ಟೇ ನನಗೆ ಗೊತ್ತು. ಮಧ್ಯೆ ಅದೆಷ್ಟು ಬಾರಿ ಕಂಣು ತೇವವಾದುವೋ, ಎಷ್ಟು ಸಲ ಹೃದಯ ಮಿಡಿಯಿತೋ ನನಗೆ ಲೆಕ್ಕ ಸಿಕ್ಕಲಿಲ್ಲ. ಪುಸ್ತಕ ಮುಗಿದ ಮೇಲೆಯೇ ನನಗೆ ಎಚ್ಚರ. ಆ ಪುಸ್ತಕ ಯಾವುದು? 'ಸಂಧ್ಯಾರಾಗ', ಗ್ರಂಥಕರ್ತ ಅ.ನ. ಕೃಷ್ಣರಾಯ.

ಅಂತೂ ಪರವಾಗಿ ಇಲ್ಲ, ಕನ್ನಡದಲ್ಲೂ ಒಳ್ಳೊಳ್ಳೆಯ ಬರೆಹಗಾರರು ಇದ್ದಾರೆ ಎಂದು ನನಗೆ ನಾನೇ ಹೇಳಿಕೊಂಡೆ, ಆ ಶುಭಮುಹೂರ್ತದಲ್ಲಿ ನಾನು ಕನ್ನಡದ ದೀಕ್ಷೆ ಸ್ವೀಕರಿಸಿದೆ. ಅದರರ್ಥ ನನ್ನ ಇಂಗ್ಲಿಷ್

©KTBS Not to be republished

ಸಾಹಿತ್ಯದ ಮೋಹ ಹೋಯಿತು ಎಂದಲ್ಲ. ಇಂದಿಗೂ ಹೋಗಿಲ್ಲ.

ನಾನಿಂದಿಗೂ ಹೆಚ್ಚಾಗಿ ಓದುವುದೆಲ್ಲವೂ ಬರೀ ಇಂಗ್ಲಿಷು. ಬರೆಯುವುದೆಲ್ಲವೂ ಬರೀ ಕನ್ನಡ.

ಕೆಲವು ಕಾಲದನಂತರ ನನ್ನಣ್ಣ ಪ್ರೊ. ಜಹಗೀರದಾರರ (ಈಗವರು ಆದ್ಯ ರಂಗಾಚಾರ್ಯ) 'ವಿಶ್ವಾಮಿತ್ರ ಸೃಷ್ಟಿ'ಯ ಎರಡು ಸಂಪುಟಗಳನ್ನು ತಂದುಕೊಟ್ಟ. ಅವು ನನ್ನನ್ನು ಬಹುಬೇಗ ಸೆರೆ ಹಿಡಿದುವು. ಆಚಾರ್ಯರ ಆ ಮಾತಿನ ಚಮತ್ಕಾರ, ವಿಚಾರ ಮಂಡನೆ ಮುಂತಾದ ಕಲಾಕುಶಲತೆಗೆ ನಾನು ಮಾರುಹೋದೆ. ರಾಯರು ನನ್ನ ಹೃದಯವನ್ನು ಗೆದ್ದರೆ, ಆಚಾರ್ಯರು ನನ್ನ ತಲೆಯನ್ನು ಗೆದ್ದರು. ಕನ್ನಡದ ಈ ಎರಡು ಪುಸ್ತಕಗಳು ನನ್ನ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದವು.

ನನ್ನ ಮೇಲೆ ಅಷ್ಟೇ ಬಲವಾಗಿ ಪ್ರಭಾವ ಬೀರಿದ ಮೂರನೆಯ ಪುಸ್ತಕ ಶ್ರೀ ಜಿ.ಪಿ. ರಾಜರತ್ನಂ ಅವರ 'ರತ್ನನ ಪದಗಳು'. ಅದನ್ನೋದಿದ ನಂತರ ಮಂತ್ರಮುಗ್ಧನಾದೆ.

ಅನೇಕ ವರ್ಷಗಳನಂತರ ಹಿರಿಯ ಮಿತ್ರರಾದ ಅ.ನ.ಕೃ ಅವರೊಂದಿಗೆ ಹರಟುತ್ತ ಕುಳಿತಿದ್ದಾಗ ಜಿ.ಪಿ. ಅವರ ರತ್ನನ ಪದಗಳ ಪ್ರಸ್ತಾಪ ಬಂತು.

"It is a Master work in Kannada". (ಅದೊಂದು ಕನ್ನಡದಲ್ಲಿ ಬೃಹತ್ಕೃತಿ) ಎಂದಂದು ನನಗಿಂತಲೂ ಅವರು ಹೆಚ್ಚು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜರತ್ನಂ ಅವರ 'ರತ್ನನ ಪದಗಳು' ನನ್ನ ಮೇಲೆ ಅತ್ಯಂತ ಪ್ರಭಾವ ಬೀರಿದೆ, ಗೆಳೆಯರಾದ ಕಾಳಿಂಗರಾಯರು ಸಭೆಗಳಲ್ಲಿ ಇವನ್ನು ಹಾಡುವಾಗ ನನಗೀಗಲೂ ಮೈ ಪುಲಕಿತವಾಗುತ್ತದೆ. ಜಿ.ಪಿ. ಅವರು ಇಂತಹ ಸಾಹಿತ್ಯವನ್ನೇ ಮುಂದುವರಿಸಿದ್ದಿದ್ದರೆ ಕನ್ನಡ ಸಾಹಿತ್ಯಕ್ಕೆ ಎಂತಹ ಉಪಕಾರವಾಗುತ್ತಿತ್ತಲ್ಲಾ ಎಂಬ ಪೇಚಾಟವೂ ನನಗಿದೆ.

ನನ್ನನ್ನು ವಶಮಾಡಿಕೊಂಡ ನಾಲ್ಕನೆಯ ಪುಸ್ತಕ ಶ್ರೀಯುತ ಶಂ.ಬಾ. ಜೋಷಿಯವರ 'ಯಕ್ಷಪ್ರಶ್ನೆ'. ಹಳೆಯ ಪೌರಾಣಿಕ ಕಥೆಯನ್ನು ಹೊಸ ಕಣ್ಣಿನಿಂದ ನೋಡುವ ಅವರ ಸಂಶೋಧನಾ ಪದ್ಧತಿ ಕನ್ನಡಿಗರಲ್ಲಿ ಅಸದೃಶ. ಹೊರನೋಟಕ್ಕೆ ಕೇವಲ ಗೊಡ್ಡು ಕತೆಗಳಾಗಿ ಕಾಣುವ ನಮ್ಮ ಧರ್ಮ ಗ್ರಂಥಗಳಲ್ಲಿ ಬರುವ ಕಥೆ, ಉಪಕಥೆಗಳಿಗೆ ಜೋಶಿಯವರು ಕೊಡುವ ಅರ್ಥ ಕನ್ನಡಕ್ಕೆ ಹೊಸದು. ಅಂದಿನ ಯಕ್ಷಪ್ರಶ್ನೆಯ ಕಥೆ ನಮಗಿಂದು ಬರಲಿರುವ ಸಮಾಜದ ದರ್ಶನವನ್ನು ಮಾಡಿಸುತ್ತದೆ. 'ದಯವಿಟ್ಟು ಇದನ್ನು ಓದಿ'.

ನನ್ನ ಕಿರಿಮಗ ಶ್ರೀ ಕೆ. ವಿ. ಅಯ್ಯರ್ ಅವರ ಶಿಷ್ಯ. ಸಾಹಿತ್ಯದ ಮಾತು ಬಂದಾಗಲೆಲ್ಲವೂ ಹೇಗೋ ಮಾಡಿ ತನ್ನ ಗುರುಗಳ ಗ್ರಂಥದ ವಿಷಯವನ್ನು ತಪ್ಪದೆ ಪ್ರಸ್ತಾಪ ಮಾಡುತ್ತಿದ್ದ. ತನ್ನಂತೆ ನಾವೂ ಅಯ್ಯರರನ್ನು ಬಾಯ್ತುಂಬ ಹೊಗಳಬೇಕೆಂಬಾಶೆ ಅವನಿಗೆ. ಅಯ್ಯರರ ಪುಸ್ತಕಗಳು ಗುಣದಲ್ಲಿ ಎಷ್ಟು ಹೆಚ್ಚೋ ಸಂಖ್ಯೆಯಲ್ಲಿ ಅಷ್ಟೇ ಕಡಿಮೆ.

©KTBS Not to be republished

ನಾನು ಆಫೀಸಿನಿಂದ ಸಂಜೆಗೆ ಮನೆಗೆ ಬಂದಾಗ ನನ್ನ ಮೇಜಿನ ಮೇಲೆ ಅಯ್ಯರರ 'ರೂಪದರ್ಶಿ' ಪುಸ್ತಕದ ಪ್ರತಿ ಬಿದ್ದಿತ್ತು. ಒಳಗಿನಿಂದ ಬಂದವನೇ ಪಾಪಣ್ಣಿ (ಕಿರಿಯ ಮಗ) ನನಗೆ ಹೇಳಿದ "ನೀವು ದಯಮಾಡಿ ಇದನ್ನು ಓದಿ ನಿಮ್ಮ ಅಭಿಪ್ರಾಯವನ್ನು ಹೇಳಿ".

ಒಂದೇ ಪಟ್ಟಿನಲ್ಲಿ ಅದನ್ನು ಓದಿ ಮುಗಿಸಿದೆ. ಐಯ್ಯರರಿಗೆ ನಿಜವಾಗಿಯೂ ಜೀವನದ ದರ್ಶನವಾಗಿದೆ. ಮಾನವನ ಬಾಳು ಅಂದರೆ ಏನೆಂಬುದನ್ನು ಅರಿಯಬೇಕಾದರೆ ಐಯ್ಯರರ 'ರೂಪದರ್ಶಿ'ಯನ್ನು ಓದಲೇಬೇಕು.

ಇನ್ನು ಆರನೆಯ ಮತ್ತು ಕಟ್ಟಕಡೆಯ ಕನ್ನಡ ಪುಸ್ತಕ ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'. ಲೌಕಿಕವೂ ಇದೆ. ಪಾರಮಾರ್ಥಿಕವೂ ಇದೆ. ಪಾರಮಾರ್ಥಿಕ ಅಂದೊಡನೆ ನಮಗೆ ವೇದಾಂತದ ನೆನಪು ಆಗುತ್ತೆ. ವೇದಾಂತ ಅಂದೊಡನೆ ಅನೇಕರಿಗೆ ಕಹಿ ಕುಡಿದಂತಾಗುತ್ತದೆ.

ಅಂತಹ ಅನೇಕರಲ್ಲಿ ನಾನೂ ಒಬ್ಬ. ಆದರೆ ಡಿ.ವಿ.ಜಿ. ಯವರು ಅಂತಹ ಶುಷ್ಕ ವೇದಾಂತವನ್ನು, ಶೃಂಗಾರದಷ್ಟು ಸ್ವಾರಸ್ಯವಾಗಿ ಮಾಡಿ ಕೊಟ್ಟಿದ್ದಾರೆ. ಉಪಮಾನಗಳಂತೂ ಚಿಕ್ಕಮಕ್ಕಳಿಗೂ ಅರ್ಥವಾಗುವಷ್ಟು ಸಾಮಾನ್ಯವಾಗಿದೆ.

ನನ್ನ 'ಅಂದನಾ ತಿಂಮ'ಕ್ಕೆ ಡಿ.ವಿ.ಜಿ.ಯವರ 'ಮಂಕುತಿಮ್ಮ'ನೇ ಕಾರಣ–ಅದನ್ನು ಬಹುಬಾರಿ ಪಾರಾಯಣ ಮಾಡಿ ನಾನಿದನ್ನು ಬರೆದೆ.

ಸಾಮಾಜಿಕ ಪ್ರಜ್ಞೆ ಸರಕಾರಗಳ ವಿಷಯವನ್ನು ಬಹು ರಸವತ್ತಾಗಿ ಚಿತ್ರಿಸಿದ್ದಾರೆ ಶ್ರೀ ಡಿ.ವಿ. ಗುಂಡಪ್ಪನವರು.

> ಸರಕಾರ ಹರಿಗೋಲು, ತೆರೆಸುಳಿಗಳತ್ತಿತ್ತ।
> ಸುರೆ ಕುಡಿದವರು ಕೆಲವರು ಹುಟ್ಟು ಹಾಕುವರು॥
> ಬಿರುಗಾಳಿ ಬೀಸುವುದು, ಜನವೆದ್ದು ಕುಣಿಯುವುದು।
> ಉರುಳದಿಹುದಚ್ಚರಿಯೊ, ಮಂಕುತಿಮ್ಮ॥

ಈ ನಾಲ್ಕು ಸಾಲು ಇಂದಿನ ನಮ್ಮ ರಾಜ್ಯದ ರಾಜಕಾರಣಕ್ಕೆ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ ಎಂಬುದನ್ನು ನಾನು ವಿವರಿಸಬೇಕಿಲ್ಲ.


ಆದರೆ ನನ್ನ ತಿಂಮನಿಗೂ, ಗುಂಡಪ್ಪನವರ ತಿಮ್ಮನಿಗೂ ಕೇವಲ ಹೊರಹೋಲಿಕೆ ಅಷ್ಟಿಷ್ಟು ಇರಬಹುದಾದರೂ ಇಬ್ಬರಲ್ಲಿ ಅಜಗಜಾಂತರವಿದೆ. ಗುಂಡಪ್ಪನವರ ತಿಮ್ಮ ಸೂರ್ಯ, ನನ್ನ ತಿಂಮ 'ಬೆಡ್‌ಲ್ಯಾಂಪ್'.

ಇಲ್ಲಿಗೆ ಮುಗಿದೇ ಹೋಯಿತು ನನ್ನ ಕನ್ನಡ ಪಾಂಡಿತ್ಯ.

ಕೊನೆಗೆ ಹೇಳಬೇಕಾದುದು ಒಂದಿದೆ. ಶ್ರೀ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ನಾನಿನ್ನೂ ಓದಬೇಕಾಗಿದೆ. ಅದೊಂದೇ ಅಲ್ಲ, ಓದಬೇಕಾದುದು ಬಹಳ ಜಾಸ್ತಿ ಇದೆ. ಆಯುಷ್ಯ ಮಾತ್ರ ಬಹಳ ಕಡಿಮೆ ಇದೆ.

©KTBS Not to be republished

## ಕೃತಿಕಾರರ ಪರಿಚಯ



ಬೀchi ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿರುವ ರಾಯಸಂ ಭೀಮಸೇನರಾವ್ ೧೯೧೩ ರಲ್ಲಿ ಜನಿಸಿದರು. ಈಗಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಇವರ ಸ್ಥಳ. 'ಕೆನೆಮೊಸರು', 'ನೀವು ಕೇಳಿದಿರಿ!' (ಅಂಕಣ ಬರಹಗಳು) 'ಹನ್ನೊಂದನೆಯ ಅವತಾರ', 'ಸೈಕಾಲಜಿಸ್ಟ್ ಸಾರಂಗಪಾಣಿ' (ನಾಟಕಗಳು) 'ಬೆಳ್ಳಿತಿಂಮ ನೂರೆಂಟು ಹೇಳಿದ', 'ಅಂದನಾ ತಿಂಮ' (ಕವನ ಸಂಕಲನಗಳು) 'ತಿಂಮನ ತಲೆ', 'ಕನ್ನಡ ಎಂಮ್ಮೆ', (ಹಾಸ್ಯ ಕೃತಿಗಳು) 'ಸಂಪನ್ನರಿದ್ದಾರೆ ಎಚ್ಚರಿಕೆ', 'ಸಾಹುಕಾರ ಸುಬ್ಬಮ್ಮ' (ಸಣ್ಣ ಕತೆಗಳು) ಇವು ಅವರ ಕೃತಿಗಳು. ಪ್ರಸ್ತುತ 'ನನ್ನ ಪುಸ್ತಕ ಪ್ರಪಂಚ' ಗದ್ಯ ಭಾಗವನ್ನು ಬೀಚಿಯವರ 'ನನ್ನ ಭಯಾಗ್ರಫಿ' ಎಂಬ ಆತ್ಮಚರಿತ್ರೆಯಿಂದ ಆರಿಸಿಕೊಳ್ಳಲಾಗಿದೆ.

## ಪದಗಳ ಅರ್ಥ

ಅಜ–ಆಡು;
ಅಜಗಜಾಂತರ–ಆಡಿಗೂ ಆನೆಗೂ ಇರುವ ವ್ಯತ್ಯಾಸ;
ಆತ್ಮಚರಿತ್ರೆ–ತಮ್ಮ ಜೀವನದ ಕತೆಯನ್ನು ತಾವೇ ಹೇಳಿಕೊಳ್ಳುವುದು ಅಥವಾ ಬರೆದುಕೊಳ್ಳುವುದು;
ಕಪಾಟು–ಬೀರು;
ಗಜ–ಆನೆ;
ಗೊಡ್ಡು–ಫಲ ನೀಡದ, ನಿಷ್ಫಲತೆ;
ದೀಕ್ಷೆ–ಶಪಥ;
ದುಂಬಾಲು ಬೀಳು – ಹಿಂದೆ ಬಿದ್ದು ಒತ್ತಾಯ ಮಾಡು;
ನವುಕರಿ–ನೌಕರಿ, ವೇತನ ಪಡೆದು ಮಾಡುವ ಕೆಲಸ;
ಪರತು–ಹಿಂದಿರುಗಿಸು, ವಾಪಸ್ಸುಕೊಡು;
ಪಾರಮಾರ್ಥಿಕ–ಪರಲೋಕಕ್ಕೆ ಸಂಬಂಧಿಸಿದ್ದು;
ಪಾರಾಯಣ–ಗ್ರಂಥಾದಿಗಳನ್ನು ಮೊದಲಿನಿಂದ ಕಡೆಯವರೆಗೆ ಓದುವುದು;
ಭಂಡಾರ–ಖಜಾನೆ;
ಮಂತ್ರಮುಗ್ಧ–ಮಂತ್ರದ ಪ್ರಯೋಗದಿಂದ ಮರುಳಾದವನು, ವಶೀಕರಣಕ್ಕೆ ಒಳಗಾದವನು;
ಮನೋಜ್ಞ–ಮನಸ್ಸಿಗೆ ಮುಟ್ಟುವಂತಹದು;
ಮೋಹ–ಮೈಮರೆಸುವ ಪ್ರೀತಿ, ಭ್ರಾಂತಿ;
ಲೌಕಿಕ–ಪ್ರಾಪಂಚಿಕ, ಲೋಕಕ್ಕೆ ಸಂಬಂಧಿಸಿದ್ದು;
ಸರ್ವಾರ್ಪಣ–ಎಲ್ಲವನ್ನು ಸಮರ್ಪಿಸುವುದು, ಎಲ್ಲವನ್ನು ಒಪ್ಪಿಸುವುದು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಇಂಗ್ಲಿಷ್‌ನ ಹೇಳಿಕೆಯೊಂದನ್ನು ಕೊಂಚ ಮಾರ್ಪಡಿಸಿ ಬೀಚಿಯವರು ಸೃಷ್ಟಿಸಿರುವ ಹೇಳಿಕೆ ಯಾವುದು?

೨. ಹುಬ್ಬಳ್ಳಿಯಲ್ಲಿ ಲೈಫ್‌ಇನ್‌ಷೂರೆನ್ಸ್ ಕಂಪನಿಯ ಏಜೆಂಟರ ಆಫೀಸಿನಲ್ಲಿ ಬೀಚಿಯವರ ನಿತ್ಯದ ಕಾರ್ಯಕ್ರಮ ಯಾವುದಾಗಿತ್ತು?

©KTBS Not to be republished

೩. ‘ಸಂಧ್ಯಾರಾಗ’ ಪುಸ್ತಕವನ್ನು ಬೀಚಿಯವರು ಏಕೆ ಓದಿದರು?

೪. ಟ್ರೇನಿನಲ್ಲಿ ಪುಸ್ತಕವನ್ನು ಬಚ್ಚಿಟ್ಟುಕೊಂಡು ಬೀಚಿಯವರು ಓದಲಾರಂಭಿಸಿದ್ದೇಕೆ?

೫. ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?

೬. ಬೀಚಿಯವರೇ ಹೇಳಿರುವಂತೆ ಡಿ.ವಿ.ಜಿ. ಯವರ ತಿಮ್ಮನಿಗೂ ಬೀಚಿಯವರ ತಿಂಮನಿಗೂ ಇರುವ ವ್ಯತ್ಯಾಸವೇನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯಲ್ಲಿ ಅತಿ ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ?

೨. ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ, ಏಕೆ?

೩. ಈಗಿನ ವಿದ್ಯಾರ್ಥಿಗಳು ಪುಣ್ಯವಂತರು ಎಂದು ಬೀಚಿಯವರು ಹೇಳಲು ಕಾರಣವೇನು?

೪. ಯಾವುದಾದರು ಒಂದು ಕನ್ನಡ ಕತೆ ಪುಸ್ತಕವನ್ನು ಕೊಡುವಂತೆ ಬೀಚಿಯವರು ಗೋವಿಂದರಾಯರನ್ನು ಏಕೆ ಕೇಳಿದರು?

೫. ‘ವಿಶ್ವಾಮಿತ್ರ ಸೃಷ್ಟಿ’ಯು ಬೀಚಿಯವರ ಮೇಲೆ ಬೀರಿದ ಪ್ರಭಾವವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು-ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಜಿ. ಪಿ. ರಾಜರತ್ನಂ ಅವರ ‘ರತ್ನನ ಪದಗಳು’ ಕೃತಿಯ ಕುರಿತು ಬೀಚಿ ಮತ್ತು ಅ.ನ.ಕೃ ಅವರ ಅಭಿಪ್ರಾಯವೇನು?

೨. ಡಿ.ವಿ.ಜಿಯವರ ‘ಮಂಕುತಿಮ್ಮನ ಕಗ್ಗ’ ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣಗಳೇನು?

೩. ಶಂ. ಬಾ. ಜೋಶಿಯವರ ‘ಯಕ್ಷಪ್ರಶ್ನೆ’ ಬೀಚಿಯವರ ಮನಸ್ಸನ್ನು ಸೂರೆಗೊಂಡಿತು ಏಕೆ?

**ಈ) ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. “ಭಾಳ ಭೇಷ್ ಅದರೀ ಪುಸ್ತಕ. ನೀವೂ ಓದಬೇಕು ಇದನ್ನೊಮ್ಮೆ.”

೨. “ದಯವಿಟ್ಟು ಇದನ್ನು ಓದಿ.”

೩. “ನೀವು ದಯಮಾಡಿ ಇದನ್ನು ಓದಿ ನಿಮ್ಮ ಅಭಿಪ್ರಾಯವನ್ನು ಹೇಳಿ”

೪. “ನಮ್ಮ ರಾಜ್ಯದ ರಾಜಕಾರಣಕ್ಕೆ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ”

೫. “ಓದಬೇಕಾದುದು ಬಹಳ ಜಾಸ್ತಿ ಇದೆ. ಆಯುಷ್ಯ ಮಾತ್ರ ಬಹಳ ಕಡಿಮೆ ಇದೆ.”

©KTBS Not to be republished

ಉ) ಬಿಟ್ಟಿರುವ ಸ್ಥಳಗಳನ್ನು ಸೂಕ್ತಪದಗಳಿಂದ ಭರ್ತಿ ಮಾಡಿರಿ.

೧. 'ಸಂಧ್ಯಾರಾಗ'ದ ಕರ್ತೃ --------

೨. 'ಅಂದನಾ ತಿಂಮ' ಸೃಷ್ಟಿಗೆ ಕಾರಣವಾದ ಕೃತಿ ---------

೩. 'ವಿಶ್ವಾಮಿತ್ರ ಸೃಷ್ಟಿ'ಯನ್ನು ಬೀಚಿಯವರಿಗೆ ತಂದುಕೊಟ್ಟವರು ---------

೪. ಬೀಚಿಯುವರು ಓದಲು ಇನ್ನೂ ಆಗಿಲ್ಲವೆಂದು ಹೇಳಿರುವ ಶಿವರಾಮ ಕಾರಂತರ ಕೃತಿ ---------

೫. ಗುಂಡಪ್ಪನವರ ತಿಮ್ಮ ಸೂರ್ಯ, ಬೀಚಿಯವರ ತಿಂಮ ---------

## ಭಾಷಾಭ್ಯಾಸ

ಅ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.

ಪುಸ್ತಕ, ದೃಷ್ಟಿ, ದರ್ಶನ, ನಿತ್ಯ, ರಾಯ, ಸಂಧ್ಯಾ, ರತ್ನ, ಶೃಂಗಾರ, ಸಿರಿ.

ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿರಿ.

ಅತ್ಯಂತ, ಗ್ರಂಥಾಲಯ, ಸರ್ವಾರ್ಪಣ, ತಲೆಯನ್ನು, ಅಜಗಜಾಂತರ, ಸ್ಫೂರ್ತಿಯನ್ನು, ಹೃದಯವನ್ನು, ಒಳ್ಳೊಳ್ಳೆ.

ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.

ಮಾನ, ಸತ್ಯ, ಮುಖ್ಯ, ಅಕ್ಷಮ್ಯ, ಪುಣ್ಯ.

ಈ) ಕೆಳಗಿನ ನುಡಿಗಟ್ಟುಗಳ ಅರ್ಥವನ್ನು ತಿಳಿದು ಸ್ವಂತವಾಕ್ಯಗಳಲ್ಲಿ ಬಳಸಿರಿ.

ಅಜಗಜಾಂತರ, ತಪ್ಪುದು ಕುಟ್ಟು, ದುಂಬಾಲು ಬೀಳು, ಮಂತ್ರಮುಗ್ಧನಾಗು, ಸೆರೆಹಿಡಿ.

## ಭಾಷಾ ಚಟುವಟಿಕೆ

ಅ) ಬೀchi ಅವರ 'ಬೆಳ್ಳಿತಿಂಮ ನೂರೆಂಟು ಹೇಳಿದ', 'ಅಂದನಾ ತಿಂಮ' 'ತಿಂಮನ ತಲೆ', 'ಕನ್ನಡ ಎಂಮ್ಮೆ' ಹಾಸ್ಯ ಕೃತಿಗಳನ್ನು ಓದಿರಿ.

ಆ) ಯಾವುದಾದರೂ ಐದು ಆತ್ಮಚರಿತ್ರೆಗಳ ಹೆಸರನ್ನು ಅವುಗಳ ಲೇಖಕರ ಹೆಸರಿನೊಂದಿಗೆ ಬರೆಯಿರಿ.

©KTBS Not to be republished

# ವ್ಯಾಕರಣ

## ವಾಕ್ಯ ರಚನೆ

**ಅನುಭವಗಳ ದಾಖಲೆ :**

ಇದೊಂದು ವಿಶಿಷ್ಟ ರೀತಿಯ ಚಟುವಟಿಕೆ. ಇದರಿಂದ ನೀವು ದೊಡ್ಡವರಾದ ಮೇಲೆ ಬಾಲ್ಯ, ಯೌವನಗಳನ್ನು ಪುನರಾವಲೋಕಿಸಲು, ಅದರಿಂದ ಪಾಠಗಳನ್ನು ಕಲಿಯಲು ಈ ದಾಖಲೆಗಳು ಸಹಾಯಕವಾಗುತ್ತವೆ. ಜೀವನಕ್ಕೆ ಅರ್ಥವೂ, ಗುರಿಯೂ ಈ ಅನುಭವಗಳಿಂದ ದೊರೆಯಬಹುದು.

ಅನುಭವಗಳ ದಾಖಲೆಗಳಿಗೆ ಕಟ್ಟುನಿಟ್ಟಾದ ವಿಧಿ–ನಿಷೇಧಗಳನ್ನು ನಿಗದಿಪಡಿಸಲು ಆಗುವುದಿಲ್ಲ. ಕೆಲವು ಸಹಾಯಕ ಚಟುವಟಿಕೆಗಳು –

೧. ದಿನಚರಿಯನ್ನು ತಪ್ಪದೇ ಬರೆಯುವುದು

೨. ಓದಿದ ಮತ್ತು ಕೇಳಿದ ವಿಚಾರಗಳನ್ನು ಟಿಪ್ಪಣಿ ಮಾಡುವುದು

೩. ವರದಿ ತಯಾರಿಕೆ

**ಅಭಿವ್ಯಕ್ತಿ :**

'ಅಭಿವ್ಯಕ್ತಿ' ಎಂಬ ಪದಕ್ಕೆ ಭಾವನೆಯನ್ನು ಪ್ರಕಟಪಡಿಸುವುದು, ಹೇಳಿಕೆ ಕೊಡುವುದು ಎಂದರ್ಥ.

ಇದು ಮಕ್ಕಳಲ್ಲಿ ಬೆಳೆಯಬೇಕಾದ ಸಾಮರ್ಥ್ಯ. ಅಭಿವ್ಯಕ್ತಿಯನ್ನು ಪ್ರಸ್ತುತಪಡಿಸಲು ಶಾಲೆಗಳಲ್ಲಿ ಅನೇಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು:

೧. ಆಶುಭಾಷಣ ಸ್ಪರ್ಧೆಗಳು

೨. ಪ್ರಬಂಧ ಸ್ಪರ್ಧೆ

೩. ಚರ್ಚಾ ಸ್ಪರ್ಧೆ

೪. ಕಥೆ ಹೇಳಿಸುವುದು

೫. ನಾಟಕ

**ಪ್ರಬಂಧ ರಚನೆ :**

'ಪ್ರಬಂಧ' ಎನ್ನುವ ಪದದಲ್ಲಿ 'ಬಂಧ' ಎಂಬ ಪದವು ಅದರ ರಚನೆಯ ಬಿಗಿಯನ್ನು ಸೂಚಿಸುತ್ತದೆ.

ಇದು ಒಂದು ವಿಚಾರವನ್ನು ಆಯ್ಕೆ ಮಾಡಿಕೊಂಡು ಅದರ ಬಗ್ಗೆ ದೀರ್ಘ ಚಿಂತನೆ ಮಾಡಿ ವಿಷಯವನ್ನು ಎಲ್ಲ ದೃಷ್ಟಿಗಳಿಂದ ನೋಡಿ ಮಂಥನ ಮಾಡಿ ಬರೆದ ಲೇಖನವೆಂದು ಇಟ್ಟುಕೊಳ್ಳಬಹುದು. ಇದಕ್ಕೆ ಆವಶ್ಯಕವಾದ ಕೌಶಲವೆಂದರೆ 'ಬರವಣಿಗೆ' ಅಥವಾ 'ಲೇಖನ ಸಾಮರ್ಥ್ಯ'.

©KTBS Not to be republished

**ಪ್ರಬಂಧ ರಚನೆಯ ಹಂತಗಳು :**

೧. ವಿಷಯದ ಆಯ್ಕೆ

೨. ವಿಷಯ ವಿಶ್ಲೇಷಣೆ : ಉಪವಿಷಯಗಳನ್ನು – ಶಿರೋನಾಮೆಗಳನ್ನು – ಗುರುತಿಸುವುದು

೩. ಅಂಕಿ ಅಂಶಗಳ ಕ್ರೋಡಿಕರಣ

**ಪ್ರಸ್ತುತ ವಿಷಯಗಳು (ಉದಾಹರಣೆಗೆ ಮಾತ್ರ) :**

೧. ಪರಿಸರ ರಕ್ಷಣೆ, ಮಾಲಿನ್ಯ ತಡೆಯುವುದು

೨. ರಾಷ್ಟ್ರೀಯ ಏಕತೆ/ಭಾವೈಕ್ಯ

೩. ಸಂಪರ್ಕ ಮಾಧ್ಯಮ – ಉಪಯೋಗ, ದುಷ್ಪರಿಣಾಮ

೪. ಕಂಪ್ಯೂಟರ್ – ಬಾಹ್ಯಾಕಾಶ ವಿಜ್ಞಾನ – ಕೃತಕ ಉಪಗ್ರಹಗಳು

೫. ನೀರಿನ ಹಂಚಿಕೆಯ ಸಮಸ್ಯೆ

೬. ಸ್ವಚ್ಛಭಾರತ ಅಭಿಯಾನ

©KTBS Not to be republished

**ಗಾದೆಗಳ ಅರ್ಥ ವಿಸ್ತರಣೆ :**

ಗಾದೆ, ನಾಣ್ಣುಡಿ, ನಾಡನುಡಿ, ಲೋಕೋಕ್ತಿ ಈ ಪದಗಳು ಸಮಾನಾರ್ಥಕಗಳು. ಗಾದೆಗಳನ್ನು ಕಟ್ಟಿದವರು 'ಕುರಿತೋದದೆಯುಂ ಕಾವ್ಯ ಪ್ರಯೋಗಪರಿಣತಮತಿಗಳ್' ಎಂದು ಕವಿ ಶ್ರೀವಿಜಯನು ಕರೆದಿರುವ ಕನ್ನಡ 'ನಾಡವರ್ಗಳ್'. ಅವರ ಅನುಭವವು ಜಾನಪದ ಮಹಾಕಾವ್ಯಗಳನ್ನೇ ಸೃಷ್ಟಿಸಿದೆ. ಗಾದೆಯು ಅಲ್ಪ ಅವಕಾಶದಲ್ಲಿ ಒತ್ತಡದಲ್ಲಿ ಕೂಡಿಟ್ಟ ಸಿಡಿಮದ್ದಿನಂತಲ್ಲ, ಪಟಾಕಿಗಳಂತೆ, ವೃಕ್ಷವನ್ನು ತನ್ನೊಳಗೆ ಬಚ್ಚಿಟ್ಟುಕೊಂಡಿರುವ ಆಲದ ಮರದ ಬೀಜದಂತೆ. ಸ್ವಲ್ಪ ಚಿಂತನೆಯ ಕಾವು, ಪ್ರೇರಣೆಯ ಮೀಟುಗೋಲು ತಗುಲಿದರೂ ಅರ್ಥದ ವೃಕ್ಷ ಚಿಗುರೊಡೆಯುತ್ತದೆ. ಅರ್ಥವನ್ನು ವಿವರಿಸುವವರ ಜ್ಞಾನ, ಅನುಭವ, ವಯಸ್ಸುಗಳನ್ನನುಸರಿಸಿ ಅರ್ಥವು ಎಷ್ಟು ಬೇಕಾದರೂ ವಿಸ್ತಾರ ಪಡೆಯಬಹುದು.

**ಕೆಳಗಿನ ಗಾದೆಗಳನ್ನು ಗಮನಿಸಿ:**

೧. "ಶಕ್ತಿಗಿಂತ ಯುಕ್ತಿ ಮೇಲು".

೨. "ಕೈ ಕೆಸರಾದರೆ ಬಾಯಿ ಮೊಸರು".

೩. "ಹಾಸಿಗೆ ಇದ್ದಷ್ಟು ಕಾಲು ಚಾಚು".

೪. "ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ".

೫. "ಮಾಡಿದ್ದು ಉಣ್ಣೋ ಮಹಾರಾಯ".

## ಪತ್ರಲೇಖನ

ಪತ್ರ ವ್ಯವಹಾರವು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಜನಪ್ರಿಯ ಸಂಪರ್ಕ ಸಾಧನವಾಗಿದೆ. ಪತ್ರಗಳನ್ನು ಸಾಮಾನ್ಯವಾಗಿ ಎರಡು ಬಗೆಗಳಾಗಿ ವಿಂಗಡಿಸಲಾಗಿದೆ.

೧) **ವೈಯಕ್ತಿಕ ಪತ್ರ :** ಖಾಸಗಿ ಅಥವಾ ಅನೌಪಚಾರಿಕ ಪತ್ರಗಳು

೨) **ವ್ಯಾವಹಾರಿಕ ಪತ್ರ :** ಔಪಚಾರಿಕ ಪತ್ರಗಳು ಅಥವಾ ಮನವಿ ಪತ್ರಗಳು

### ಪತ್ರದಲ್ಲಿರಬೇಕಾದ ಮುಖ್ಯ ಅಂಶಗಳು

ಉತ್ತಮವಾದ ಪತ್ರವು ಆರು ಅಂಶಗಳನ್ನು ಹೊಂದಿರಬೇಕು. ಇದನ್ನು ಪತ್ರದ ಚೌಕಟ್ಟು ಎನ್ನುತ್ತಾರೆ.

೧) **ವಿಳಾಸಗಳು –** ಪತ್ರ ಬರೆಯುವಾಗ ನಿಮ್ಮ ಹಾಗೂ ನಿಮ್ಮ ಪತ್ರ ತಲುಪಬೇಕಾದವರ ವಿಳಾಸವನ್ನು ಸರಿಯಾದ ಜಾಗದಲ್ಲಿ ಸ್ಪಷ್ಟವಾಗಿ ಬರೆಯಬೇಕು. ಇಲ್ಲದಿದ್ದರೆ ಪತ್ರ ತಲುಪದೆ ವಾಪಸ್ಸಾಗುವ, ಕಳೆದು ಹೋಗುವ ಸಾಧ್ಯತೆ ಇರುತ್ತದೆ.

೨) **ಸಂಬೋಧನೆ –** ಹಿರಿಯರನ್ನು, ಕಿರಿಯರನ್ನು, ಮಿತ್ರರನ್ನು ಮತ್ತು ಅಧಿಕಾರಿಗಳನ್ನು ಒಂದೇ ರೀತಿಯಲ್ಲಿ ಸಂಬೋಧಿಸಲಾಗುವುದಿಲ್ಲ. ಸಂಬೋಧನೆ ಸರಿ ಇಲ್ಲದಿದ್ದರೆ ಅದು ನೋಡುವವರಿಗೆ ಕಿರಿಕಿರಿ ಉಂಟುಮಾಡುತ್ತದೆ.

೩) **ವಿಷಯ –** ವ್ಯಾವಹಾರಿಕ ಪತ್ರದಲ್ಲಿ ನೀವು ತಿಳಿಸಬೇಕಾಗಿರುವ ವಿಷಯ ಯಾವುದು ಎಂಬುದರ ಬಗ್ಗೆ ಸ್ಪಷ್ಟವಾಗಿ ಒಂದು ಸಾಲಿನಲ್ಲಿ ತಿಳಿಸಬೇಕು.

೪) **ಒಡಲು –** ಪತ್ರದ ಒಡಲಿನಲ್ಲಿ ನೀವು ತಿಳಿಸಬೇಕಾಗಿರುವ ವಿಷಯಗಳನ್ನು ಸ್ಪಷ್ಟವಾಗಿ ಸುಮಾರು ಎಂಟು ಹತ್ತು ವಾಕ್ಯಗಳಲ್ಲಿ ಮುಗಿಸುವಂತಿರಬೇಕು.

೫) **ಮುಕ್ತಾಯ –** ಪತ್ರವನ್ನು ಮುಕ್ತಾಯ ಮಾಡುವಾಗ ವಂದನೆಗಳೊಂದಿಗೆ ಎಂದು ಬರೆದು ಕೆಳಗೆ ಸಹಿ ಮಾಡಬೇಕು. ಸಹಿ ಇಲ್ಲದ ಪತ್ರಗಳಿಗೆ ಬೆಲೆ ಇರುವುದಿಲ್ಲ.

೬) **ದಿನಾಂಕ –** ಪತ್ರವನ್ನು ಬರೆಯುವಾಗ ದಿನಾಂಕವನ್ನು ನಮೂದಿಸಬೇಕು.

**ಪತ್ರದಲ್ಲಿ ಆರಂಭದ ಸಂಬೋಧನೆ**

| | | |
|---|---|---|
| ೧) ಗುರುಗಳಿಗೆ | – | ಪೂಜ್ಯಗುರುಗಳೇ |
| ೨) ತಂದೆಯವರಿಗೆ | – | ತೀರ್ಥರೂಪ/ಪ್ರೀತಿಯ ತಂದೆಯವರಿಗೆ |
| ೩) ತಾಯಿಗೆ | – | ಮಾತೃಶ್ರೀ/ಪ್ರೀತಿಯ ತಾಯಿಯವರಿಗೆ |

©KTBS Not to be republished

೪) ತಮ್ಮ/ತಂಗಿ – ಪ್ರೀತಿಯ ತಮ್ಮ/ತಂಗಿಗೆ

೫) ಅಕ್ಕ/ಅಣ್ಣ – ಪ್ರೀತಿಯ ಅಕ್ಕ/ಅಣ್ಣ ನವರಿಗೆ

೬) ಗೆಳೆಯ/ತಿ – ಪ್ರೀತಿಯ ಗೆಳೆಯನಿಗೆ/ಗೆಳತಿಗೆ

೭) ಅಧಿಕಾರಿಗಳಿಗೆ – ಮಾನ್ಯರೇ

**ಮುಕ್ತಾಯದ ಗೌರವ ಸಂಬೋಧನೆ**

೧) ತಂದೆ, ತಾಯಿ, ಹಿರಿಯರಿಗೆ – ನಮಸ್ಕಾರಗಳು.

೨) ಕಿರಿಯರಿಗೆ – ಆಶೀರ್ವಾದಗಳು.

೩) ಗೆಳೆಯ/ತಿ – ವಂದನೆಗಳು/ಶುಭಾಷಯಗಳು

೪) ಅಧಿಕಾರಿಗಳಿಗೆ – ವಂದನೆಗಳೊಂದಿಗೆ ತಮ್ಮವಿಶ್ವಾಸಿ

೫) ಗುರುಗಳಿಗೆ – ವಿಧೇಯ ವಿದ್ಯಾರ್ಥಿ/ ವಿದ್ಯಾರ್ಥಿನಿ

**ಪತ್ರಗಳ ಮಾದರಿ**

(೧) **ವೈಯಕ್ತಿಕ ಪತ್ರ:** ತಂದೆಗೆ ಪತ್ರ

ದಿನಾಂಕ: ......................

ಇವರಿಂದ,

**ಶೋಭಾ,**
ಹತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಸರಸ್ವತಿಪುರಂ, ಮೈಸೂರು.

ಪ್ರೀತಿಯ ತಂದೆಯವರಿಗೆ,

..........................................................................................................

..........................................................................................................

..........................................................................................................

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗಳು
(ಶೋಭಾ)

©KTBS Not to be republished

ಇವರಿಗೆ:

ಶ್ರೀ ಪುರುಷೋತ್ತಮ್,
ಮನೆ ನಂಬರ್ 108,
ಎರಡನೇ ಮುಖ್ಯ ರಸ್ತೆ,
ಆದರ್ಶನಗರ, ಮಂಡ್ಯ. – 571 401

**(೨) ವ್ಯಾವಹಾರಿಕ ಪತ್ರ**

ದಿನಾಂಕ: ........................

ಇವರಿಂದ,

ಜಾನ್,
ಹತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಚಿತ್ರದುರ್ಗ – 577 501.

ಇವರಿಗೆ,

ಮುಖ್ಯೋಪಾಧ್ಯಾಯರು,
ಸರ್ಕಾರಿ ಪ್ರೌಢಶಾಲೆ,
ಚಿತ್ರದುರ್ಗ.

ಪೂಜ್ಯ ಗುರುಗಳೇ,

**ವಿಷಯ :** "ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಮೂರು ದಿನ ಕೋರಿ ಪತ್ರ"

..........................................................................................................

..........................................................................................................

..........................................................................................................

ವಂದನೆಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ/ನಿ
(ಜಾನ್)

ದಿನಾಂಕ :
ಸ್ಥಳ :

**"ದುರಾಸೆಯನ್ನು ಬಿಟ್ಟರೆ ನಿಮ್ಮ ಸಂಪತ್ತು ವೃದ್ಧಿಸುತ್ತದೆ."**

*****

©KTBS Not to be republished

# ೧೨. ಜನಪದಗೀತೆ

**– ಜನಪದ**

**ಪ್ರವೇಶ :** ರೈತರಿಗೆ ಬೇಸಾಯವು ಪ್ರಧಾನ ವೃತ್ತಿ. ಮಳೆ ಬಂದು ಕೆರೆ ಕಟ್ಟೆಗಳೆಲ್ಲ ತುಂಬಿ, ಹೊಲದಲ್ಲಿ ಬೆಳೆದ ಬೆಳೆ, ಗದ್ದೆಗಳಲ್ಲಿ ಬೆಳೆದು ನಿಂತ ಭತ್ತ ಇವುಗಳನ್ನು ನೋಡಿದರೆ ಅವರಿಗೆ ಎಲ್ಲಿಲ್ಲದ ಸಂತೋಷ. ಸಂಭ್ರಮ. ಒಂದು ವೇಳೆ ಮಳೆ ಬಾರದಿದ್ದರೆ ಅವರು ದೇವರಲ್ಲಿ ಮೊರೆ ಇಡುವ ರೀತಿ ಎಂಥವರ ಮನವನ್ನೂ ಕಲಕುವಂತಿರುತ್ತದೆ. ಮಳೆ ಭೂಮಿಗೆ ಬೀಳದಿದ್ದರೆ ಅವರ ಬದುಕೇ ಶೂನ್ಯ. ಅಂಥ ಸನ್ನಿವೇಶದಲ್ಲಿ ಅವರು ಮಳೆರಾಯನನ್ನು ಕರೆಯುವ ಪರಿ ಹೇಳತೀರದು. ಇಂತಹ ಸನ್ನಿವೇಶಗಳು ಜನಪದ ಗೀತೆಗಳಲ್ಲಿ ಕಂಡು ಬರುತ್ತವೆ. ಮಳೆದೇವರನ್ನು ಕರೆಯುತ್ತಿರುವ ಒಂದು ಸನ್ನಿವೇಶವನ್ನು ಈ ಪದ್ಯದಲ್ಲಿ ಕಾಣಬಹುದು.

ಅಪ್ಪರಿಲ್ಲದೆ ಸೊಪ್ಪಾದೊ ಈ ಭೂಮಿ
ಸಪ್ಪೆ ದಂಟಾದೊ ದನಕರ – ಮಳೆರಾಯ
ಅಪ್ಪ ನೀ ಬಂದು ಕರುಣೀಸೊ ॥೧॥

ಮೂಡಮೋಡ ನೋಡೋ ಮೋಡದ ಚಂದನೋಡೋ
ಗೋಡೆಗೆ ಕಪ್ಪ ಬಳಿದ್ಹಂಗೆ – ಮಳೆರಾಯ
ಬೋರಾಡು ತಾವೆ ಮುಗಿಲಲ್ಲಿ ॥೨॥

ಮೂಡಲಾಗಿ ಹುಯ್ಯೋ ಮುತ್ತಿನ ಸೋನೆ ಮಳೆಯೇ
ಎದ್ದು ಮೇಲವನೆ ಭೈರವ – ಬೆಟ್ಟದ ಮೇಲೆ
ಜಗ್ಗಿಸಿ ಹುಯ್ಯೋ ಮಳೆರಾಯ ॥೩॥

ಸಾತೆಯ ಮಳೆ ಹುಯ್ದು ಸಾವಿರಾರು ಕೆರೆ ತುಂಬಿ
ಜೋತಾಡು ತಾವೆ ಕುಣಿಗಲು – ಕುಚ್ಚಲ ಮೀನು
ಮುಂಗಯ್ಯ ಕಂಡು ನಗುತಾವೆ ॥೪॥

©KTBS Not to be republished

## ಕೃತಿಕಾರರ ಪರಿಚಯ

ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಾದ ಕನ್ನಡ ನಾಡಿನ ಅಜ್ಞಾತ ಕವಿಗಳು ರಚಿಸಿದ ಪದ್ಯಗಳೇ ಜನಪದ ಗೀತೆಗಳು. ಈ ಸಾಹಿತ್ಯ ಒಬ್ಬಿಬ್ಬರು ರಚಿಸಿದ ಕೃತಿಯಲ್ಲ, ಇಡೀ ಸಮಾಜದ ಸಮಷ್ಟಿ ಮನಸ್ಸಿನ ಪ್ರತಿಬಿಂಬ. ಜನಪದ ಗೀತೆಗಳು ಅನೇಕ ಪ್ರಕಾರಗಳಲ್ಲಿ ಬಿತ್ತರಗೊಂಡಿವೆ. ಇವು ಎಂತಹವರ ಮನಸ್ಸನ್ನೂ ಸೂರೆಗೊಳ್ಳುವಂತಹವುಗಳಾಗಿವೆ. ಜನಪದ ಗೀತೆಗಳನ್ನು ಉಳಿಸಿ ಬೆಳೆಸುವ, ಮುಂದಿನ ಪೀಳಿಗೆಗೆ ವರ್ಗಾಯಿಸುವ ಕಾರ್ಯ ನಿರಂತರವಾಗಿ ಆಗಬೇಕಿದೆ. ಈ ದಿಕ್ಕಿನಲ್ಲಿ ಅನೇಕರು ಸಂಗ್ರಹಿಸುವ, ಸಂಗ್ರಹಿಸಿ ಪ್ರಚಾರಗೊಳಿಸುವ ಕೈಂಕರ್ಯದಲ್ಲಿ ಸದಾ ನಿರತರಾಗಿದ್ದಾರೆ.

ಸಮೃದ್ಧವಾಗಿ ಮಳೆ ಬೆಳೆಯಾಗಿ, ಎಲ್ಲರೂ ಸುಖವಾಗಿರಲಿ, 'ಲೋಕಾಃಸಮಸ್ತಾಃ ಸುಖಿನೋಭವಂತು' ಎಂಬ ಸದಾಶಯ ಈ ಜನಪದ ನೀತಿಯಲ್ಲಿ ಪ್ರಕಟವಾಗಿದೆ.

## ಪದಗಳ ಅರ್ಥ

ಅಪ್ಪರು – ರಕ್ಷಿಸುವವರು;
ಕುಚ್ಚಲಮೀನು – ಮೀನಿನ ಒಂದು ತಳಿ;
ಜಗ್ಗಿಸಿ – ಜಾಸ್ತಿ, ಹೆಚ್ಚು;
ಜೋತಾಡು – ನೇತಾಡುವುದು;
ಬೋರಾಡು – ಮಳೆ ಬರುತ್ತಿರುವಾಗ ಆಗುವ ಶಬ್ದ;
ಮೂಡ – ಪೂರ್ವ, ಮೂಡಣ;
ಮುಂಗಯ್ಯ– ಮುಂಗೈಯನ್ನು
ಸಪ್ಪೆ – ಸೊರಗು;
ಸಾತೆ – ಸ್ವಾತಿ (ಇಪ್ಪತ್ತೇಳು ಮಳೆ ನಕ್ಷತ್ರಗಳಲ್ಲಿ ಒಂದು);
ಸೊಪ್ಪಾದೊ – ಬಾಡಿಹೋದವು ಸೊರಗಿದವು;
ಸೋನೆ – ಜಿನುಗು, ತುಂತುರುಮಳೆ.


### ಟಿಪ್ಪಣಿ

**ಜನಪದ – ಜಾನಪದ**

ಕನ್ನಡ ಸಾಹಿತ್ಯಕ್ಕೆ ಜನಪದ ಸಾಹಿತ್ಯದ ಕೊಡುಗೆ ಅಪಾರ. ಇದು ಜನರ ಬಾಯಿಂದ ಬಾಯಿಗೆ ಹರಿದು ಬಂದ ಸಾಹಿತ್ಯ. ಹಳ್ಳಿಗರು ತಮ್ಮ ದಿನನಿತ್ಯದ ಬದುಕಿನಲ್ಲಿ ತಮ್ಮ ದುಃಖ–ದುಮ್ಮಾನಗಳನ್ನು, ಆಸೆ–ಆಕಾಂಕ್ಷೆಗಳನ್ನು, ದೈನಂದಿನ ಬದುಕಿನ ಅನುಭವಗಳನ್ನು ಈ ಹಾಡಿನ ಮೂಲಕ ಅಭಿವ್ಯಕ್ತಿಗೊಳಿಸಿದ್ದಾರೆ. ಜನಪದ ಸಾಹಿತ್ಯ ಇಡೀ ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಏರು–ಪೇರುಗಳನ್ನು ತಮ್ಮ ಅನುಭವಗಳನ್ನು ಈ ಸಾಹಿತ್ಯದ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ.

ಜನರು ಪರಂಪರೆಯಿಂದ ಅನೇಕ ಆಚಾರ, ವಿಚಾರ, ಉಡುಗೆ, ತೊಡುಗೆ, ಆಟ, ಹಾಡು, ಕತೆ, ಗಾದೆ, ಒಗಟು, ಕುಣಿತ ಹಾಗೂ ಅಡುಗೆ ಪದ್ಧತಿಯನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸಿಕೊಂಡು ಬಂದಿರುತ್ತಾರೆ. ಇದನ್ನು ಜನಪದ ಎನ್ನಬಹುದು. ಈ ಎಲ್ಲ ಜನಪದದ ಮುಖಗಳನ್ನು ಒಳಗೊಂಡಿದ್ದು ಜಾನಪದ. ಜಾನಪದ ಒಂದು ಚಕ್ರದ ಕೇಂದ್ರವಾದರೆ, ಆ ಕೇಂದ್ರಕ್ಕೆ ಜೋಡಣೆಯಾಗುವ ಅರೆಗಳು ಜನಪದ.

©KTBS Not to be republished




©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ?

೨. ರೈತನಿಗೆ ಮೋಡಗಳು ಹೇಗೆ ಕಾಣುತ್ತಿದ್ದವು?

೩. ಎಲ್ಲಿ ಹೆಚ್ಚು ಮಳೆ ಸುರಿಯ ಬೇಕೆಂದು ರೈತನು ಕೇಳುತ್ತಾನೆ?

೪. ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳ ಉತ್ತರ ಬರೆಯಿರಿ.**

೧. ರೈತನು ದನಕರುಗಳು ಹೇಗಾಗಿವೆ ಎಂದು ಮಳೆರಾಯನಲ್ಲಿ ನಿವೇದಿಸುತ್ತಾನೆ?

೨. ಮೋಡಗಳು ಕಾಣಿಸಿಕೊಂಡಾಗ ರೈತನಿಗಾದ ಸಂತೋಷವೇನು?

೩. ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳೇನು?

**ಇ) ಕೊಟ್ಟಿರುವ ಪ್ರಶ್ನೆಗೆ ಆರು–ಏಳು ವಾಕ್ಯಗಳ ಉತ್ತರಗಳನ್ನು ಬರೆಯಿರಿ.**

೧. ಮಳೆದೇವರಲ್ಲಿ ರೈತನ ಪ್ರಾರ್ಥನೆಯೇನು?

೨. 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ?

ಈ) **ಕೆಳಗಿನ ಸಾಲುಗಳನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಗೋಡೆಗೆ ಕಪ್ಪ ಬಳಿದ್ಹಂಗೆ"

೨. "ಜಗ್ಗಿಸಿ ಹುಯ್ಯೋ ಮಳೆರಾಯ"

೩. "ಸಾವಿರಾರು ಕೆರೆ ತುಂಬಿ"

## ಭಾಷಾಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**

ಮೂಡಲಾಗಿ; ಜೋತಾಡು.

**ಆ) ಸಜಾತೀಯ, ವಿಜಾತೀಯ ಸಂಯುಕ್ತಾಕ್ಷರಗಳನ್ನು ವಿಂಗಡಿಸಿ ಬರೆಯಿರಿ.**

ಅಪ್ಪನಿಲ್ಲದೆ; ಹುಯ್ದು; ಕುಚ್ಚಲ; ಜಾಸ್ತಿ.

## ಭಾಷಾ ಚಟುವಟಿಕೆ

೧. ನಿಮ್ಮ ಊರಿನಲ್ಲಿ ಹೇಳುವ ಜನಪದ ಗೀತೆಗಳನ್ನು ಸಂಗ್ರಹಿಸಿರಿ.

೨. ರಾಮನಗರ ಬಳಿಯಿರುವ ಜಾನಪದ ಲೋಕ, ಜನಪದ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿರಿ.

೩. 'ಜನಪದಗೀತೆ' ಪದ್ಯದ ಮೊದಲ ಎರಡು ನುಡಿಗಳನ್ನು (ಆರು ಸಾಲುಗಳನ್ನು) ಕಂಠಪಾಠ ಮಾಡಿರಿ.

೪. ಕೊಟ್ಟಿರುವ ಯಾವುದಾದರೊಂದು ಗಾದೆಯನ್ನು ವಿಸ್ತರಿಸಿ ಬರೆಯಿರಿ.

ಅ) ಬೆಳೆಯುವ ಪೈರು ಮೊಳಕೆಯಲ್ಲಿ.

ಆ) ಉಪ್ಪು ತಿಂದವನು ನೀರು ಕುಡಿಯಲೇ ಬೇಕು.

### ಛಂದಸ್ಸು

**ತ್ರಿಪದಿ**

ತ್ರಿಪದಿ ಅಂದರೆ ಮೂರು ಸಾಲಿನ ಪದ್ಯ. ಇದು ಅಚ್ಚಗನ್ನಡ ದೇಸೀ ಛಂದಸ್ಸಾಗಿದೆ. ತ್ರಿಪದಿಗಳು ಮೂರು ಸಾಲಿನ ಪದ್ಯವಾದರೂ ಹಾಡುವಾಗ ನಾಲ್ಕು ಸಾಲುಗಳಾಗುತ್ತವೆ. ಯಾಕೆಂದರೆ, ಎರಡನೆಯ ಸಾಲಿನ ಮೊದಲ ಭಾಗವು ಪುನರಾವರ್ತನೆಯಾಗುತ್ತದೆ.

**ಉದಾ:**

ಮೂಡಲ ಮುತ್ತಯ್ಯ ನೋಡಯ್ಯ ಬಡತಾನ
ಮೂಡ್ಲಲ್ಲಿ ರಾಗಿ ಮಳೆಯುದ್ದ।
ಮೂಡ್ಲಲ್ಲಿ ರಾಗಿ ಮಳೆಯುದ್ದ। ಬೆಳೆದರೆ
ಮಾಡುವೆ ನಿನಗೆ ಹರಿಸೇವೆ॥

*****

©KTBS Not to be republished

## ಪೂರಕ ಅಧ್ಯಯನ

# ೧. ಹೀಗೊಂದು ಟಾಪ್ ಪ್ರಯಾಣ

– ಈರಪ್ಪ ಎಂ. ಕಂಬಳಿ

**ಪ್ರವೇಶ :** ಸಮಾಜದಲ್ಲಿ ನಡೆಯುವ ಘಟನೆಗಳನ್ನು ವಿನೋದದ ದೃಷ್ಟಿಕೋನದಿಂದ ನೋಡಿ ಬರೆದ ಸರಸ ಪ್ರಬಂಧಗಳನ್ನು ಲಲಿತ ಪ್ರಬಂಧಗಳೆಂದು ಕರೆಯಬಹುದು. ಲಲಿತ ಪ್ರಬಂಧಗಳು ಹಾಸ್ಯ ಮಿಶ್ರಿತವಾಗಿದ್ದು, ವಾಸ್ತವಿಕ ಘಟನೆಗಳನ್ನು ತಮಾಷೆಯ ದೃಷ್ಟಿಯಿಂದ ನೋಡಿರುತ್ತವೆ. ಇಲ್ಲಿ ಕೊಂಚ ಉತ್ಪ್ರೇಕ್ಷೆ ಅತಿಕಲ್ಪನೆ ಇರುತ್ತದೆ. ಈ ಬಗೆಯ ವಿನೋದ ಪ್ರಜ್ಞೆಯ ಲೇಖನಗಳು ಓದುಗರನ್ನು ರಂಜಿಸುತ್ತವೆ. ಅಂತಹ ಲೇಖನಗಳಲ್ಲಿ ಇದೂ ಒಂದಾಗಿದೆ.

©KTBS Not to be republished

ಒಂದು ಸಾರೆ, ತಂಗಿಯೊಬ್ಬಳನ್ನು ಮಾತನಾಡಿಸಿಕೊಂಡು ಬರಲು ಯಲಬುರ್ಗಿಯಿಂದ ಮುಂಡರಗಿಗೆ ಹೊರಟಿದ್ದೆ. ಒಳ ರಸ್ತೆಯಲ್ಲಿ ಕೇವಲ ಐವತ್ತು ಕಿಲೋ ಮೀಟರು ದೂರ. ನೇರ ಬಸ್ಸು ಇಲ್ಲದ್ದರಿಂದಾಗಿ, ಗದಗ ಮೂಲಕ ಇಲ್ಲಾ ಕೊಪ್ಪಳದ ಮೂಲಕ ಬಳಸು ಪ್ರಯಾಣ ನಮಗೆ ಅನಿವಾರ್ಯ. ಕೊಪ್ಪಳ ಹೊಸದಾಗಿ ಸಾರಿಗೆ ಡಿಪೋ ಹೊಂದಿದ್ದು, ಇತ್ತೀಚೆಗೆ ಜಿಲ್ಲಾ ಕೇಂದ್ರ ಸ್ಥಳವೆಂಬ ಕಿರೀಟ ಬೇರೆ ಹೊತ್ತಿದೆ. ಅದೇ ಜಿಲ್ಲೆಯವನೇ ಆದ ನಾನು ಕೊಪ್ಪಳದ ಮೂಲಕ ಹೋಗುವುದನ್ನೇ ಆರಿಸಿಕೊಂಡೆ. ಬೆಳಗಿನ ಏಳು ಗಂಟೆಯಲ್ಲಿ ಬಸ್ಸು ಹಿಡಿದು ಕೊಪ್ಪಳ ತಲುಪಿದಾಗ ರಾತ್ರಿ ಒಂಭತ್ತು ಗಂಟೆ. ಬೇಸಿಗೆಯ ದಿನ ಬೇರೆ. ಸುತ್ತಲೂ ಕಲ್ಲು–ಗುಡ್ಡವಿರುವುದರಿಂದಾಗಿ ಆ ಹೊತ್ತಿಗಾಗಲೇ ದಳದಳ ಬೆವರು ಹರಿಯಲಾರಂಭಿಸಿತ್ತು. ಸೀದಾ ಟಿ.ಸಿ. ಹತ್ತಿರ ಹೋಗಿ, 'ಮುಂಡರಗಿಗೆ ಹೋಗಬೇಕಾಗಿತ್ತು' ಎಂದೆ. "ಈಗ ಹೋತಲ್ರೀ ಸಾಯೇಬ್ರ. ಯಾಡು ಮಿನಿಟು ಆಗಿಲ್ಲ ಇನ್ನೂ.... ಗಾಡಿ ಬೇಕಾದಷ್ಟು ಅದಾವು ತಡೀರಿ" ಅಂದರು.

ಮೂರು ಮುಕ್ಕಾಲರ ಸುಮಾರಿಗೆ ಅಂತೂ ಬಸ್ಸು ಕದಲಿತು. ಮೇಲೆ–ಒಳಗೆ ಭರ್ತಿ ತುಂಬಿದ್ದ ಅದು ಥೇಟ್ ಗಬ್ಬದ ಹಂದಿಯಂತೇ ವಾಲಾಡುತ್ತ ಹೊರಟಿತ್ತು. ಬಸ್ ಸ್ಟ್ಯಾಂಡಿನಿಂದ ಹೊರಬಿದ್ದು ರಸ್ತೆಗಿಳಿದಾಗ ಸುತ್ತ ನೋಡುತ್ತೇನೆ. ವಾಹ್! ಆಕಾಶಯಾನ. ಮಜಭೂತಾದ ಆನೆಯಂಬಾರಿ ಏರಿ ಕೂತಂತೆ ಭಾಸ. ಟಾಪಿನ ಮೇಲೆ ಎಸೆದಿದ್ದ ಸ್ಟೆಪ್ನಿಯ ಟಯರು ಮೇಲೆ ಕೂತಿದ್ದರಿಂದಾಗಿ ಕೆಳಗಿದ್ದವರಿಗೆ ಮೊದಲು ಕಣ್ಣಿಗೆ ಬೀಳುವವರೇ ನಾವು. ಒಂದಿಷ್ಟು ಭಯ ನಾಚಿಕೆಗಳಿಂದ, ಯಾರಾದರೂ ಗುರ್ತಿನವರು ನೋಡಿಯಾರೆಂದು ಬಗೆದು, ಬಸ್ಸು ಊರು ದಾಟುವವರೆಗೂ ತಲೆ ಕೆಳಗೆ ಹಾಕಿದೆ. ಕರವಸ್ತ್ರ ತೆಗೆದು ಕಿವಿ ಮುಚ್ಚುವಂತೆ ತಲೆಗೆ ಬಿಗಿದೆ. ಟಾಪಿನ ಮೇಲಿನ ಸಹಪ್ರಯಾಣಿಕರು ನನ್ನ ನಡವಳಿಕೆಯನ್ನು ಗಮನಿಸುತ್ತಲೇ ಇದ್ದರು. ನನಗೆ ತುಸು ಕಕವಕ ಆಯಿತು.

ನಾನು ಕುಂತ ಬಸ್ಸು ಹೊರತಟ್ಟನಾಳ, ಕೋಳೂರು, ಕರಡಿಮಂಗಳಾಪುರದ ಮೂಲಕ ಅಳವಂಡಿ ತಲುಪಿ, ಒಳದಾರಿಯಲ್ಲಿ ಮುಂಡರಗಿಗೆ ಹೋಗುವಂಥದ್ದು. ತಲೆಯ ಮೇಲೆ ಬೋಗುಣಿಯಂತೆ ಬೋರಲು ಬಿದ್ದ ನೀಲಿ ಬಾನು. ಬಾಲ್ಯದಲ್ಲಿ ಓದಿದ್ದ ಕಾವ್ಯಾನಂದರ ಪದ್ಯವೊಂದು ನೆನಪಾಯಿತು:

ಪ್ರಕೃತಿಯೆ ಗುರು
ಗಗನ ಲಿಂಗವು
ಜಗವೆ ಕೂಡಲಸಂಗಮ.

ಭಂಡಬಿದ್ದು, ತೇರ(ಟಯರ)ನೇರಿ ಕೂತ ಈಗ ನಾನೇ ಇಲ್ಲಿ ಜಂಗಮ! ಟಾರು ರೋಡ್ ಬಿಟ್ಟು ಮಡ್ ರಸ್ತೆಗೆ ಇಳಿದು ಹೊರಟಾಗ ಉದ್ದಕ್ಕೆ ಹೊಗೆ ಬಿಟ್ಟುಕೊಂಡು ಹಾರುವ ರಾಕೆಟ್ಟಿನಂತೆ ನಮ್ಮ ಬಸ್ಸಿನ ಹಿಂದೆ ದಟ್ಟ ದೂಳು ಎದ್ದು ಬರುತ್ತಿತ್ತು. ಅಸಲು ಸಮಸ್ಯೆ ಶುರುವಾದದ್ದೇ ಈಗ. ಎಲ್ಲಿಯಾದರೂ ಬಸ್ಸು ನಿಂತಾಕ್ಷಣ, ಹಿಂದೆ ಎದ್ದಿದ್ದ ದೂಳು ನಿಧಾನವಾಗಿ ಬಸ್ಸನ್ನೂ, ಬಸ್ಸಿನ ಮೇಲಿದ್ದ ಜನಗಳನ್ನೂ ಅಮರಿಕೊಂಡು ಬಿಡುತ್ತಿತ್ತು. ಹತ್ತಾರು ಕಡೆ ಹಾಗೆ ಆಗುವ ಹೊತ್ತಿಗೆ, ನಮ್ಮ ತಲೆ, ಮುಖಗಳೆಲ್ಲ ಗುರ್ತುಸಿಗದಷ್ಟು ದೂಳಿನಿಂದಾವೃತವಾಗಿದ್ದವು. ಬೆಳಗ್ಗೆ ಸ್ನಾನ ಮಾಡಿ, ಎಣ್ಣೆ ಹಾಕಿಕೊಂಡಿದ್ದ ತಲೆಯಿಂದ ಇಳಿಯುತ್ತಿದ್ದ ಬೆವೆರೆಣ್ಣೆಯ ಜೊತೆಗೆ ಈಗ ಮಣ್ಣೂ ಸೇರಿ, ಮುಖ ಕುತ್ತಿಗೆಗಳನ್ನು ಕೆಬರಿದರೆ ಸಾಕು ಥೇಟು ಗುಡಿಯೊಳಗಿನ ಕರಿ ಹನುಮನ ಮೈಯಿಂದ ಹೊರಡುವ ಜಿಡ್ಡು ಮ್ಯಾಣ ಬಂದಂತಾಗುತ್ತಿತ್ತು. ನಮ್ಮ ಕಣ್ಣ ರೆಪ್ಪೆಗಳಲ್ಲಿ ಕೆಂದೂಳು ಅಡರಿ ಅವುಗಳಿಗೊಂದು ರೀತಿಯ ಮೇಕಪ್ ಒದಗಿತ್ತು. ಏನೂ ಮಾಡುವ ಹಾಗಿರಲಿಲ್ಲ. ಅನುಭವಿಸಬೇಕು. ಬಸ್ಸು ನಿಲ್ಲುವ ಸೂಚನೆ ಕಂಡ ಕೂಡಲೇ ಒಬ್ಬರ ಮುಖ ಒಬ್ಬರಿಗೆ ಕಾಣದಷ್ಟು ದಟ್ಟವಾಗಿ ಕವಿಯುವ ದೂಳಿಗೆ ಹೆದರಿ ಹೌಹಾರಿಬಿಡುತ್ತಿದ್ದೆವು. ಬೇಂದ್ರೆ ಹಾಡನ್ನು ತುಸು ತಿರುಚಿ ಗೊಣಗಿಕೊಂಡೆ – 'ಬಸ್ಸಿನ ಬೆನ್ನೇರಿ ಬಂತು ದೂಳಿನಾಭಿಷೇಕ, ಕೆಳಗಿದ್ದ ನೋಡುಗರ ಮೊಗದಲ್ಲಿ ಸಹಜ ಮಂದಹಾಸ!'

ಇಪ್ಪತ್ತು ಕಿಲೋಮೀಟರು ಹಾಗೆ ಪ್ರಯಾಣಿಸುವ ಹೊತ್ತಿಗೆ, ಒಂದು ಕಡೆ ನೋಡನೋಡುತ್ತಿದ್ದಂತೆ ರಸ್ತೆಗೆ ಅಡ್ಡವಾಗಿ ಎಳೆಯಲಾಗಿದ್ದ ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲಿಯೇ ಹಾದು ಹೋದಾಗ ಮೈಮರೆತು ಕೂತಿದ್ದವನಿಗೆ ಸಾವೇ ಭುಜ ಸವರಿ ಹೋದಂತಾಗಿ ದಿಗ್ಗನೇ ಟಾಪಿಗೆ ಒರಗಿದ್ದೆ. ಎದೆಯಲ್ಲಿ ಅವಲಕ್ಕಿ ಕುಟ್ಟಿದಂತೆ. ಸಾವರಿಸಿಕೊಂಡು ಏಳುವ ಹೊತ್ತಿಗೆ ಸುತ್ತಲಿದ್ದ ಸಹಪ್ರಯಾಣಿಕರು ಪಕಪಕನೇ ನಕ್ಕರು. 'ಸಾಯೇಬ್ರಾ ಹೆದ್ರಿದ್ರಿ ಅಂತಾ ಕಾಣ್ಸುತ್ತ. ಹಾಂಗ ತಲೆ ಬಗ್ಗಿಸಬೇಕಾದ ಜಾಗ ಇನ್ನೂ ಮುಂದ ಐತಿ. ನಾವೆಲ್ಲ ಹೇಳ್ತೀವಿ. ಹೆದರಬ್ಯಾಡ್ರಿ' ಎಂದು ಧೈರ್ಯ ಹೇಳಿದರು. ಚೇತರಿಸಿಕೊಂಡರೂ, ತಲೆಯ ಮೇಲೆ ಕತ್ತಿ ತೂಗುತ್ತಿರುವಂತೆಯೇ ಎಚ್ಚರವಹಿಸಿ, ಮೈಯೆಲ್ಲಾ ಕಣ್ಣಾಗಿ ನಿರೀಕ್ಷಿಸುತ್ತಿದ್ದಂತೆಯೇ ಹದಿನೈದು ಮಿನಿಟುಗಳಲ್ಲಿ ಆ ಸ್ಪಾಟೂ ಬಂದೇ ಬಿಟ್ಟಿತು. ಅಷ್ಟು ದೂರ ಇರುವಾಗಲೇ ಟಾಪ್ ಪ್ರಯಾಣಿಕರು ಕೂತ ಜಾಗದಲ್ಲಿಯೇ ಜಾಗ ಮಾಡಿಕೊಂಡು ದಬದಬನೇ ಬೋರಲು ಒರಗಲಾರಂಭಿಸಿದ್ದರು, ನಾನೂ ಅಷ್ಟೇ. ಟೈರಿನಿಂದ ಕೆಳಕ್ಕೆ ಜಾರಿ, ಉಸಿರು ಬಿಗಿ ಹಿಡಿದು ಬೋರಲು ಬಿದ್ದುಕೊಂಡು ಅಪಾಯದ ಕ್ಷಣಗಳನ್ನು ಎಣಿಸಿದ್ದಾಯಿತು.

ಅದೇ ಜಾಗದಲ್ಲಿ ತಿಂಗಳ ಹಿಂದೆ ವಿದ್ಯುತ್ ತಂತಿ ತಗುಲಿ, ಹಾಗೆ ಟಾಪಿನ ಮೇಲೆ ಕೂತಿದ್ದ ಹುಡುಗನೊಬ್ಬ ಸತ್ತು ಹೋದ ಮೇಲೆಯೇ, ಹತ್ತಿರದಲ್ಲೊಂದು ಕಂಬ ಹಾಕಿ ಆ ತಂತಿಗಳನ್ನು ಎತ್ತರಿಸಿದ್ದಾರೆಂದೂ, ಆದರೂ ಅದು ಜೋತುಬಿದ್ದು ಟಾಪಿನ ಮೇಲೆ ಮಲಗಿದವರ ಮೇಲೆ ಒಂದೇ ಅಡಿ ಅಂತರದಲ್ಲಿ ಹಾದು ಹೋಗುವಾಗ ಹೊಸಬರಿಗಂತೂ ಹೃದಯ ಕಿತ್ತು ಬಾಯಿಗೆ ಬಂದಂತಾಗುತ್ತಿತ್ತು. ಆದರೆ ನಿತ್ಯ ಆ ಮಾರ್ಗದಲ್ಲಿ ಓಡಾಡುವ ಜನರಿಗೆ ಅದರ ಪರಿವೆಯೇ ಇಲ್ಲ. ಎಷ್ಟು ಹಗುರವಾಗಿ ತೆಗೆದುಕೊಳ್ಳುತ್ತಾರಲ್ಲ ಇವರು. ಅದಕ್ಕೆ ಅಚ್ಚರಿಯೂ ಆಯಿತು.

©KTBS Not to be republished

ಬಿಸಿಲ ಸೀಮೆಯ ಜನರು ಸ್ವಭಾವತಃ ಕಷ್ಟಸಹಿಷ್ಣುಗಳೂ, ಸಾಹಸಪ್ರಿಯರೂ ಆಗಿರುವುದು ಆ ಕಾರಣಕ್ಕಾಗಿಯೇ ಅನಿಸಿತು. ಆದರೂ, ಇಂಥ ಕಡೆಯಲ್ಲಿ ಸಂಬಂಧಪಟ್ಟ ಇಲಾಖೆಗಳು ಜನರ ಪ್ರಾಣಗಳ ಜತೆ ಚೆಲ್ಲಾಟವಾಡುವುದು ಉಚಿತವೆ? ಆಲೋಚನೆಯಲ್ಲಿ ಮುಳುಗಿದೆ. ಬಸ್ಸು ಅದಾವುದರ ಪರಿವೆಯಿಲ್ಲದೆ ತನ್ನ ಪಾಡಿಗೆ ತಾನು ಓಡುತ್ತಲೇ ಇತ್ತು. ನಿಂತಾಗಲೆಲ್ಲ ಹಿಂದೆ ಎದ್ದ ದೂಳು-ದುಮ್ಮ ಮೈಮೇಲೆಲ್ಲ ಇಳಿದು, ಹಾಕಿದ್ದ ನನ್ನ ಬಿಳಿ ಶರ್ಟು ಆಗಲೇ ಕೆಂಪು ಬಣ್ಣಕ್ಕೆ ತಿರುಗುತ್ತಿತ್ತು. 'ಬೆಂಗಳೂರಲ್ಲಿ ಹೀಗೆಲ್ಲ ಬಸ್ಸಿನ ಮೇಲೆ ಹತ್ತಲಾಗುವುದಿಲ್ಲ' ಅಂದದ್ದಕ್ಕೆ ಅವರೆಲ್ಲ 'ಮೇಲೆ ಹತ್ತಂಗಿಲ್ಲದಿದ್ದ ಮ್ಯಾಲೆ ಅವೆಂಥಾ ಬಸ್‌ರೀ' ಎನ್ನುವಂತೆ ಹುಬ್ಬೇರಿಸಿದರು – ಹಡಗಿನ ಡೆಕ್ ಮೇಲೆ ಕೂತು ಹರಟುತ್ತಿರುವವರಂತೆ ಕಂಡ ನಮ್ಮ ಟಾಪ್ ಮೋಸ್ಟ್ ಪ್ರಯಾಣಿಕರು!

ಹತ್ತಾರು ಹಳ್ಳಿಗಳನ್ನು ಹಾದು, ಅಂತೂ ಅಳವಂಡಿ ತಲುಪಿದಾಗ, ಬಸ್ಸಿನೊಳಗಿದ್ದ ಬಹುತೇಕ ಜನ ಇಳಿದರು. ತಕ್ಷಣ ನಾನು ಟಾಪಿನ ಮೇಲಿನ ಪ್ರಯಾಣಕ್ಕೆ ನಮಸ್ಕಾರ ಹಾಕಿ, ಸರಸರನೇ ಕೆಳಗಿಳಿದು ಒಳಸೇರಿದೆನೆನ್ನಿರಿ. ಹೊಟ್ಟೆ ಬಿರಿಯುವ ಹಾಗೆ ತುಂಬಿಕೊಂಡು ಬಂದದ್ದನ್ನೆಲ್ಲ ಒಂದೇ ಉಸಿರಿಗೆ ಕಕ್ಕುವ ತೆರದಲ್ಲಿ ಬಸ್ಸು ಪಕ್ಕಕ್ಕೆ ಜರುಗಿ ನಿಂತು ಖಾಲಿಯಾಗುತ್ತಿತ್ತು. ಸಾರಥಿ ಎಂಜಿನ್ನು ಆಫ್ ಮಾಡಿ ಇಳಿದು, ಪಕ್ಕದ ಬೀಡಾ ಅಂಗಡಿ ಮುಂದ ಮಾತುಕತೆಗೆ ತೊಡಗಿದ್ದ. ಹತ್ತಿರದ ಡಬ್ಬಿ ಅಂಗಡಿಯಲ್ಲಿ ಆಕಾಶವಾಣಿ 'ಮಿಲೇ ಸುರ್ ಮೇರಾ ತುಮ್ಹಾರಾ, ತೋ ಸುರ ಬನೇ ಹಮಾರಾ' ಉಲಿಯುತ್ತಿತ್ತು. ಕಾಕತಾಳೀಯವೆನ್ನುವಂತೆ, ಅದೇ ತಾನೆ ಆಕಾಶದಿಂದ ಇಳಿದು ಬಂದು, ವಿಚಿತ್ರ ರೂಪು ಪಡೆದ ಮುಖ, ಕಣ್ಣರೆಪ್ಪೆಗೆ ಅಂಟಿದ್ದ ದೂಳಿನ ಕಣಗಳನ್ನು ಕರವಸ್ತ್ರದಿಂದ ನಾಜೂಕಾಗಿ ಹಿಕ್ಕುತ್ತ ನಿಂತ ನನ್ನ ಕಿವಿಗೆ ಬಿತ್ತು:


'ಬಾದಲೋಂ ಕಾ ರೂಪ ಲೇಕರ್

ಬರಸೇ ಹಲಕೆ ಹಲಕೆ' (ಅರ್ಥ: ಮೋಡಗಳ ರೂಪ ಪಡೆದು ನಿಧಾನವಾಗಿ ಮಳೆ ಬಂದಿತು.)

ನನ್ನ ಅವಸ್ಥೆ ಕಂಡು ಕೆಲವರು ಒಳಗೊಳಗೇ ನಕ್ಕಂತಾಯಿತು. ಸೀಟು ಇರದಿದ್ದರೂ ಪರವಾಯಿಲ್ಲ, ಸುರಕ್ಷಿತ ಪ್ರಯಾಣವೆಂದು ನಿರುಮ್ಮಳಾಗಿ ಉಸಿರಾಡಿದೆ. ಅಂತೂ ಮುಂಡರಗಿ ತಲುಪಿದಾಗ ಸಂಜೆ ಆರರ ಹೊತ್ತು. ಯಾರಿಗಾದರು ಹೇಳಿದರೆ ಅಚ್ಚರಿಪಡುತ್ತಾರೆ. ಕಾರಿನಲ್ಲಿ ನೇರವಾದ ದಾರಿಯಲ್ಲಿ ಹೋದರೆ ಒಂದೇ ಗಂಟೆಯ ಪ್ರಯಾಣಕ್ಕಾಗಿ ನಾನು ಕೆಂಪು ಬಸ್ಸುಗಳನ್ನು ನೆಚ್ಚಿ ಇಡೀ ದಿನ ವ್ಯಯಿಸಿದೆ. ಅದರ ಹಿಂದಿರುವ ರಿಸ್ಕ್‌ಗಾಗಿ ಒಳಗೊಳಗೇ ಹಳಹಳಿಸಿದೆ. ಆಧುನಿಕ ನಾಗರಿಕ ಜಗತ್ತಿನ ಸಕಲ ಸವಲತ್ತುಗಳ ನಡುವೆಯೂ ಬದುಕುವುದೇ ಒಂದು ದೊಡ್ಡ ಸರ್ಕಸ್ ಆಗಿರುವಾಗ, ಕ್ರೀಡಾ ಮನೋಭಾವದಿಂದ ಅದನ್ನು ಎದುರಿಸುವುದರಲ್ಲಿಯೇ ಬದುಕಿಗೊಂದು ಅರ್ಥವಿದೆಯಲ್ಲವೇ? ಯಾವುದರಲ್ಲಿ ರಿಸ್ಕ್ ಇಲ್ಲ ಹೇಳಿರಿ!!

©KTBS Not to be republished

## ಕೃತಿಕಾರರ ಪರಿಚಯ



ಕೊಪ್ಪಳ ಜಿಲ್ಲೆಯ ಯಲಬುರ್ಗಿ ಈರಪ್ಪ ಎಂ. ಕಂಬಳಿಯವರ ಊರು. ಆಗಸ್ಟ್ ೧೫, ೧೯೫೮ರಲ್ಲಿ ಜನನ. 'ಅರೆಸತ್ತ ಬದುಕು' ಇವರ ಮೊದಲ ಕವನ ಸಂಕಲನ. 'ಹೆದ್ದಾರಿಗುಂಟ', 'ಹೀಗೊಂದು ಟಾಪ್ ಪ್ರಯಾಣ', 'ಚಾಚಾನೆಹರು ಮತ್ತು ಈಚಲಮರ', 'ಹುರಳಿಕಟ್ಟು', 'ಕಳ್ಳೀಹಾಲು' ಹೀಗೆ ಐದು ಲಲಿತ ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. 'ಕರಾವಳಿಗುಂಟ ಆರು ದಿನ' ಇವರ ಪ್ರವಾಸ ಕಥನ. ಸದ್ಯ ಬೆಂಗಳೂರಿನ ಭಾಷಾಂತರ ನಿರ್ದೇಶನಾಲಯದಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಪ್ರಬಂಧವನ್ನು ಅವರ 'ಹೀಗೊಂದು ಟಾಪ್ ಪ್ರಯಾಣ' ಪ್ರಬಂಧ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತ ಉತ್ತರ ಬರೆಯಿರಿ.**

೧. 'ಹೀಗೊಂದು ಟಾಪ್ ಪ್ರಯಾಣ' ಲೇಖನವು ಯಾವ ಸಾಹಿತ್ಯ ಪ್ರಕಾರಕ್ಕೆ ಉದಾಹರಣೆಯಾಗಿದೆ?

೨. ಬಸ್ ಪ್ರಯಾಣದ ವೇಳೆ ಲೇಖಕರಿಗೆ ನೆನಪಿಗೆ ಬಂದ ಕಾವ್ಯಾನಂದರ ಪದ್ಯದ ಸಾಲುಗಳಾವುವು?

೩. ಸಾವೇ ಭುಜ ಸವರಿಕೊಂಡು ಹೋದಂತೆ ಲೇಖಕರಿಗೆ ಭಾಸವಾದುದೇಕೆ?

೪. ಲೇಖಕರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು?

೫. ಈರಪ್ಪ ಕಂಬಳಿಯವರನ್ನು ಕಂಡು ಸಹ ಪ್ರಯಾಣಿಕರು ಪಕಪಕ ನಕ್ಕಿದ್ದೇಕೆ?

೬. 'ಬಾದಲೋಂ ಕಾ ರೂಪ ಲೇಕರ್ ಬರಸೇ ಹಲಕೆ ಹಲಕೆ' – ಈ ಸಾಲುಗಳ ಅರ್ಥವೇನು?

೭. ಈರಪ್ಪ ಎಂ. ಕಂಬಳಿಯವರ ಬಿಳಿಯ ಶರ್ಟು ಕೆಂಪು ಬಣ್ಣಕ್ಕೆ ತಿರುಗಿದ್ದೇಕೆ?

೮. ಲೇಖಕರು ಕೆಂಪುಬಸ್ಸನ್ನು ನೆಚ್ಚಿದ್ದರಿಂದ ಇಡೀದಿನವನ್ನು ವ್ಯಯಿಸಬೇಕಾಯಿತು ಏಕೆ?

## ಭಾಷಾ ಚಟುವಟಿಕೆ

**ಅ)** ಹಿಂದೆ ಇದ್ದ ಹಾಸ್ಯ ಪತ್ರಿಕೆ 'ಕೊರವಂಜಿ' ನಾಡಿನ ಉದ್ದಗಲಕ್ಕೂ ಹಾಸ್ಯವನ್ನು ಪಸರಿಸಿತ್ತು. ಈಗ 'ನಗೆಮುಗುಳು' ಹಾಸ್ಯ ಪತ್ರಿಕೆ ಪ್ರಕಟವಾಗುತ್ತಿದೆ. ಇಂತಹ ಪತ್ರಿಕೆಗಳನ್ನು ಸಂಗ್ರಹಿಸಿ ಓದಿರಿ.

**"ಒಗ್ಗಟ್ಟಿನಲ್ಲಿ ಬಲವಿದೆ"**

*****

©KTBS Not to be republished

# ೨. ಸೋಮೇಶ್ವರ ಶತಕ

**– ಪುಲಿಗೆರೆ ಸೋಮನಾಥ**

**ಪ್ರವೇಶ:** ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕ ಎಂಬ ಹೆಸರಿನಿಂದ ಕರೆಯುತ್ತಾರೆ. ಇವು ನೀತಿಶಾಸ್ತ್ರವನ್ನು ಹೇಳುವ ಪದ್ಯಗಳಾಗಿವೆ. ಒಂದು ವಿಷಯದ ಏಕಸೂತ್ರಕ್ಕೆ ಒಳಗಾಗದೆ, ಕವಿಯ ಮನೋಲಹರಿ ಹರಿದಂತೆ ಹಲವಾರು ಸಂದರ್ಭಗಳಲ್ಲಿ ರಚಿತವಾದ ಪದ್ಯಗಳಿವು. ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವುದು ಶತಕಗಳ ಸಾಮಾನ್ಯ ಲಕ್ಷಣ ಎನ್ನಬಹುದು. ೧೩ನೆಯ ಶತಮಾನಕ್ಕೆ ಸೇರಿದ, ವೃತ್ತ ಛಂದಸ್ಸಿನಲ್ಲಿ ರಚಿತವಾಗಿರುವ ಪುಲಿಗೆರೆ ಸೋಮನಾಥನ 'ಸೋಮೇಶ್ವರ ಶತಕ'ವು ಕನ್ನಡ ನೀತಿಶತಕಗಳಲ್ಲಿ ಅಗ್ರಸ್ಥಾನವನ್ನು ಪಡೆದು ಜನಪ್ರಿಯವಾಗಿದೆ. ಈ ಶತಕಗಳು ಜನಸಾಮಾನ್ಯರ ಹೃದಯಕ್ಕೆ ನೇರವಾಗಿ ತಾಗುವಂತಿವೆ.

೧

ಅವಿನೀತಂ ಮಗನೇ ಅಶೌಚಿ ಮುನಿಯೇ ಬೈವಾಕೆ ತಾಂ ಪತ್ನಿಯೇ ॥
ಸವಿಗೆಟ್ಟನ್ನವದೂಟವೇ ಕುಜನರೊಳ್ ಕೂಡಿರ್ಪವಂ ಮಾನ್ಯನೇ ॥
ಬವರಕ್ಕಾಗದ ಬಂಟನೇ ಎಡರಿಗಂ ತಾನಾಗದಂ ನಂಟನೇ ॥
ಶಿವನಂ ಬಿಟ್ಟವ ಶಿಷ್ಟನೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥

(ವಿನಯವಿಲ್ಲದ ಮಗನೂ, ಪರಿಶುದ್ಧನಲ್ಲದ ಋಷಿಯೂ, ಬೈಯುವ ಹೆಂಡತಿಯೂ, ರುಚಿಗೆಟ್ಟ ಅನ್ನದ ಊಟವೂ, ಕೆಟ್ಟವರ ಸಹವಾಸದಲ್ಲಿರುವ ದೊಡ್ಡ ಮನುಷ್ಯನೂ, ಯುದ್ಧಕ್ಕಾಗದ ಭಟನೂ, ಕಷ್ಟಕ್ಕಾಗದ ನಂಟನೂ ಶಿವನನ್ನು ಬಿಟ್ಟಿರುವ ಆಚಾರವಂತನೂ ಆಯಾ ಹೆಸರಿಗೆ ಅರ್ಹರಲ್ಲ.)

೨

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ ನಾನಾ ಚಮತ್ಕಾರಮಂ ॥
ಅರಿಯಲ್ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ ಕೋಪಮಂ ॥
ತೊರೆಯಲ್ಬಲ್ಲೊಡೆ ಯೋಗಿಯಪ್ಪುದರಿಷಡ್ವರ್ಗಂಗಳಂ ಗೆಲ್ವೊಡೇ ॥
ತೆರಬಲ್ಲರ್ಪೊಣೆಯಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥

(ಯುದ್ಧ ಮಾಡಲು ಬಲ್ಲವನೇ ಭಟನಾಗಬೇಕು; ನಾನಾ ವಿಧದ ಚಮತ್ಕಾರಗಳನ್ನು ತಿಳಿದವನೇ ಮಂತ್ರಿಯಾಗಬೇಕು; ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕು. ಕಾಮ ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳವನೇ ಯೋಗಿಯಾಗಬೇಕು. ತನ್ನ ಕೈಯಿಂದ ದಂಡ ತೆರುವ ಸಾಮರ್ಥ್ಯವಿರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು.)

©KTBS Not to be republished

## ಕೃತಿಕಾರರ ಪರಿಚಯ



**'ಸೋಮೇಶ್ವರ ಶತಕ'** ಕನ್ನಡದ ಜನಪ್ರಿಯ ಶತಕ ಕೃತಿ. ಇದನ್ನು ಬರೆದವನು ಪುಲಿಗೆರೆ ಸೋಮನಾಥ. ೧೩ನೇ ಶತಮಾನದಲ್ಲಿದ್ದ ಸೋಮನಾಥನು ಈಗಿನ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದವನು. ಪುಲಿಗೆರೆಯ ಸೋಮನಾಥನು ಹರಿಹರರಲ್ಲಿ ಸಮಾನಭಾವ ಉಳ್ಳವನಾಗಿದ್ದನು. ಅಲ್ಲದೆ ಅವನ ಶತಕದಲ್ಲಿ ಜೀವನಕ್ಕೆ ಬೇಕಾದ ಮಾತುಗಳಿವೆ. ಜೊತೆಗೆ ರಾಮಾಯಣ, ಭಾರತ, ಭಾಗವತಗಳಲ್ಲಿನ ಕೆಲವು ಕಥೆಗಳ ಕಥಾಂಶದ ಪ್ರಸ್ತಾಪವಿದೆ. ಇವನ ಪ್ರತಿಪದ್ಯದ ಕಡೆಯಲ್ಲೂ **'ಹರಹರಾ ಶ್ರೀಚೆನ್ನಸೋಮೇಶ್ವರಾ'** ಎಂಬ ಅಂಕಿತ ಬರುತ್ತದೆ. ಈ ಶತಕದ ಕೆಲವು ಪದ್ಯಗಳು, ಪ್ರಯೋಗಗಳು ಈಗಲೂ ಜನಸಾಮಾನ್ಯರ ಬಾಯಲ್ಲಿವೆ.

ಪ್ರಸ್ತುತ ಪದ್ಯಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ **'ಸೋಮೇಶ್ವರ ಶತಕ'** ಪುಸ್ತಕದಿಂದ ಆರಿಸಿದೆ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತವಾದ ಉತ್ತರ ಬರೆಯಿರಿ.**

೧. ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣಯಾವುದು?

೨. ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು?

೩. ಕವಿ ಸೋಮನಾಥನು ಯಾರನ್ನು ದೊಡ್ಡ ಮನುಷ್ಯನೆಂದು ಹೆಸರಿಸಲಾಗುವುದಿಲ್ಲ ಎಂದಿದ್ದಾನೆ?

೪. ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಭಟ ಮತ್ತು ಆಚಾರವಂತ ಎನಿಸಿಕೊಳ್ಳಲು ಯಾರು ಅರ್ಹರಲ್ಲ?

೫. ಮಂತ್ರಿಯಾಗಲು ಮತ್ತು ರಾಜನಾಗಲು ಯಾವಗುಣಗಳನ್ನು ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ?

೬. ಯೋಗಿಯಾಗುವವನು ಏನನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ?

೭. ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥನು ಹೇಳಿದ್ದಾನೆ?

೮. ಪುಲಿಗೆರೆ ಸೋಮನಾಥನ ಅಂಕಿತ ಯಾವುದು?

೯. ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಯಾವಗುಣವನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ?

೧೦. ಪುಲಿಗೆರೆ ಸೋಮನಾಥನು ಹೇಳಿರುವಂತೆ ಯಾವ ಯಾವ ಸಾಮರ್ಥ್ಯದಿಂದ ಯಾವ ಯಾವ ಕಾರ್ಯಗಳನ್ನು ಮಾಡಬೇಕು?

*****

# ೩. ಮಹಾಶಿಲ್ಪಿ

– ಪ್ರೇಮಾಭಟ್

**ಪ್ರವೇಶ :** ಪ್ರತಿಭೆ, ಸಾಹಸ, ಸಾಮರ್ಥ್ಯ, ಸಾಧನೆಗಳಿಗೆ ವಯಸ್ಸಿನ ಮಿತಿಯಿಲ್ಲ. ತಂದೆಯನ್ನೇ ಮೀರಿಸಿ ಬೆಳೆದ ಪೋರರ ಸಾಹಸಗಾಥೆ ಕೇಳಿದ್ದೇವೆ. ಕಿರಿಯರ ಸಾಧನೆಗೆ ಕರುಬಿ ಮೊಳಕೆಯಲ್ಲೇ ಹೊಸಕಿ ಹಾಕಲು ಪ್ರಯತ್ನಿಸುವ ತಿಳಿಗೇಡಿಗಳನ್ನೂ ಕಂಡಿದ್ದೇವೆ. ಇಂತಹದ್ದೇ ಒಂದು ಸನ್ನಿವೇಶವನ್ನು ಈ ಕತೆಯು ಒಳಗೊಂಡಿದೆ.

ಶಿಲ್ಪಿ ಧರ್ಮಪದನು ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ವಿಶುವಿನ ಹತ್ತಿರಕ್ಕೆ ಬಂದ. ಬಳಲಿಕೆಯಿಂದ ವಿಶುವಿನ ಕಣ್ಣುಗಳು ಆಳಕ್ಕಿಳಿದಿವೆ. ನರೆಗೂದಲಿನ ಗಡ್ಡ, ಅದರ ನಡುವೆ ಇಣುಕುತ್ತಿರುವ ತುಟಿಗಳಲ್ಲಿ ಜೀವಸೆಲೆಯಿಲ್ಲ. ಎದೆಯಲ್ಲಿ ಉತ್ಕಟವಾದ ಪ್ರೇಮ ತುಂಬಿ, ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಬಯಕೆ ಧರ್ಮಪದನಿಗೆ. ಬಹುಕಾಲದ ಅಗಲಿಕೆ ಅವನ ಜೀವವನ್ನು ಹಿಂಡಿತ್ತು. ಬಯಕೆ ತೀವ್ರವಾಗುತ್ತಿದ್ದಂತೆ ಒತ್ತಿ ಬಂದ ಭಾವನೆಯನ್ನು ಹತ್ತಿಕ್ಕಿಕೊಂಡ. ಮೊದಲು ಕೆಲಸ ಪೂರ್ಣಗೊಳಿಸೋಣ. ತಂದೆಗೆ ತಾನು ಮಗನೆಂದು ತಿಳಿದರೆ "ಈ ಪೋರ ಏನು ಮಾಡಬಲ್ಲ? ಆತನಿಂದಾಗದು" ಎನ್ನುವ ಭಾವನೆ ಬರಬಹುದು. ಇಲ್ಲ, ಮಗನ ಮುಂದೆ ತಾನು ಚಿಕ್ಕವನಾಗಿಬಿಟ್ಟೆನಲ್ಲ ಎಂಬ ನೋವಿನಿಂದ ನರಳಬಹುದು. ಅಮ್ಮ ಹೊರಡುವ ಮುನ್ನ ಕೊಟ್ಟ ಎಚ್ಚರಿಕೆಯ ಗಂಟೆಯ ನೆನಪು ಬಂದು ತಮ್ಮಿಬ್ಬರ ನಡುವಿನ ಸಂಬಂಧ ಕುರಿತು ಮಾತನಾಡಲಿಲ್ಲ. ಅವನು ಮಹಾಶಿಲ್ಪಿ ವಿಶುವಿನ ಜೊತೆಯಲ್ಲಿ ನೇರ ಮಾತಿಗೆ ಬಂದ.

"ಮಹಾಶಿಲ್ಪಿಗಳೆ! ದೇವಾಲಯದ ಕಲಶವನ್ನು ನಾನು ನಿಲ್ಲಿಸಬಲ್ಲೆ. ಅನುಮಾನ ಬೇಡ, ಅವಕಾಶ ಕೊಟ್ಟು ನೋಡಿ. ಪ್ರಯತ್ನಕ್ಕೆ ಜಯ ಖಂಡಿತ. ನಿಮ್ಮ ನಿಟ್ಟುಸಿರು ನೀಗುವಂತೆ ಮಾಡುತ್ತೇನೆ. ದಯಮಾಡಿ ಅಲಕ್ಷಿಸಬೇಡಿ" ಎಂದ. ಎದೆಯುದ್ದ ಬೆಳೆದಿದ್ದ ಆ ತರುಣನನ್ನು ತದೇಕ ಚಿತ್ತದಿಂದ ನೋಡಿದ ವಿಶು. ಸುಂದರ ಮೊಗದ ದೃಢಕಾಯದ ವ್ಯಕ್ತಿ ಮುಂದೆ ನಿಂತು ತನ್ನ ಅಭಿಲಾಷೆಯನ್ನು ವ್ಯಕ್ತ ಪಡಿಸುತ್ತಿದ್ದಾನೆ. ತನಗೂ ಒಬ್ಬ ಮಗನಿದ್ದಾನಲ್ಲವೆ? ಅವನು ಇವನಾಗಿರಬಾರದೇಕೆ? ದೂರದೂರಿನಲ್ಲಿ ಆತನನ್ನು ಬಿಟ್ಟು ಬಂದಾಗ ಅವನು ಚಣ್ಣ ತೊಡುತ್ತಿದ್ದ. ಅವನ ವಯಸ್ಸು ಆಗ ಆರೋ, ಏಳೋ. ಈಗವನಿಗೆ ಹದಿನೇಳರ ಪ್ರಾಯದ ಅಂಚು. ಇವನಿಗೂ ಅಷ್ಟೇ ಇರಬಹುದು. "ನಿನ್ನ ವಯಸ್ಸೆಷ್ಟು ಮಗು? ಹೆಸರೇನು?" ಎಂದು ಕೇಳಿದ ವಿಶು. "ನನಗೀಗ ಇಪ್ಪತ್ತರ ಹರೆಯ. ಹೆಸರು ಮುಕುಂದ" ಬೇಕೆಂದು ಧರ್ಮಪದ ಹೆಸರು ಮತ್ತು ವಯಸ್ಸನ್ನು ಬದಲಾಯಿಸಿದ. "ಹಾಗಾದರೆ ಇವನು ಆ ದೂರದೂರಿನಲ್ಲಿ ಬಿಟ್ಟು ಬಂದ ನನ್ನ ಮಗನಲ್ಲ" ಎಂದು ವಿಶು ಯೋಚಿಸುತ್ತಿದ್ದಂತೆ, "ಈಗೇನು ನೀವು ನನಗೆ ಒಂದು ಅವಕಾಶ ಕೊಟ್ಟು ನೋಡುತ್ತೀರೋ ಇಲ್ಲವೋ" ಎಂಬ ಪ್ರಶ್ನೆ ಬಂದಿತು ಧರ್ಮಪದನಿಂದ.

"ಆಯ್ತಪ್ಪ, ಇಲ್ಲ ಎಂದು ಹೇಳುವುದಕ್ಕೆ ನಾನು ಯಾರು? ದೈವಸಂಕಲ್ಪ! ಯಾರಿಂದ ಏನಾಗಬೇಕೋ, ಅದು ಆಗಲೇಬೇಕು. ನಿನ್ನ ಸಾಮರ್ಥ್ಯ, ಸಂಕಲ್ಪವನ್ನು ಏನೆಂದು, ಎಷ್ಟೆಂದು ಪರೀಕ್ಷಿಸಿ ಬಿಡೋಣ. ನಡಿ ಮಗು, ಕೆಲಸ ಮುಂದುವರೆಸು". ತಂದೆಯಿಂದ ಅನುಮೋದನೆ ಸಿಕ್ಕಿದ್ದೇ ತಡ, ಧರ್ಮಪದ ಉಳಿಯನ್ನು ಕೈಗೆತ್ತಿಕೊಂಡ. ಆತ್ಮವಿಶ್ವಾಸ ಧರ್ಮಪದನ ಶಕ್ತಿಯನ್ನು ವೃದ್ಧಿಸಿತು. ನಗುಮೊಗದಿಂದ ಕೆಲಸಕ್ಕೆ ಕೈ ಹಾಕಿದ. ಆ ಹುಡುಗನನ್ನು ಸುಮ್ಮನೆ ನೋಡುತ್ತಾ ಕುಳಿತುಕೊಂಡ ವಿಶು. ಧರ್ಮಪದ ಕಲಶ ಕೂಡಿಸಬೇಕಾದ ಜಾಗವನ್ನು ಕ್ಷಣವೆರಡು ಕ್ಷಣ ನಿರುಕಿಸಿದ. ಅಲ್ಲಾಗಿರುವ ಲೋಪ ಹುಡುಗನ ಸೂಕ್ಷ್ಮಮತಿಗೆ ತಟ್ಟನೆ ಹೊಳೆಯಿತು. ತಡಮಾಡದೆ ಅವನು ಕೆಲಸ ಮುಂದುವರೆಸಿದ. ವಿಶು ಮತ್ತು ಉಳಿದ ಶಿಲ್ಪಿಗಳು ನೋಡುನೋಡುತ್ತಿದ್ದಂತೆಯೇ ಕಲಶ ಕೂಡಿಸಿಬಿಟ್ಟ.

©KTBS Not to be republished

ಶತಪ್ರಯತ್ನ ಮಾಡಿದರೂ ತನ್ನಿಂದ ಕೂಡಿಸಲಾಗದ ಕಲಶವನ್ನು ಅರ್ಧಗಂಟೆಯಲ್ಲಿ ಕೂಡಿಸಿ ಜಯಭೇರಿ ಹೊಡೆದ ಹುಡುಗನನ್ನು ನೋಡುತ್ತಿದ್ದಂತೆ ವಿಶುವಿಗೆ ಅವಮಾನದಿಂದ ತಲೆ ತಗ್ಗಿಸುವಂತಾಯ್ತು. 'ತನ್ನ ಪ್ರತಿಭೆಗೆ ಮುಳ್ಳಾಗಿ ಇವನು ಎಲ್ಲಿಂದ ಬಂದ. ಈಗಿವನು ಮಹಾರಾಜನಿಂದ ಬಿರುದು ಬಾವಲಿಗಳನ್ನು ತನ್ನಿದಿರೇ ಪಡೆಯುತ್ತಾನೆ. ತಾನೀಗ ಕೈ ಕೆಳಗೆ ಕೆಲಸ ಮಾಡುತ್ತಿದ್ದ ಇತರ ಶಿಲ್ಪಿಗಳ ಮುಂದೆ ಅವಮಾನಿತನಾಗಿದ್ದೇನೆ' ಎಂದು ಯೋಚಿಸುತ್ತಾ ಉದ್ವೇಗಕ್ಕೊಳಗಾದ ವಿಶು ಜ್ಞಾನತಪ್ಪಿ ಕೆಳಗುರುಳಿದ. ಜನ ಅವನನ್ನು ಸುತ್ತುವರೆದರು. ಎದ್ದು ಹೋಗಿ ತಂದೆಯನ್ನು ಸಾಂತ್ವನ ಪಡಿಸಬೇಕು ಎನ್ನಿಸುತ್ತಿದೆ ಧರ್ಮಪದನಿಗೆ. ಆದರೆ ಅವನಿಗೆ ಸಾಧ್ಯವಾಗುತ್ತಿಲ್ಲ. ದೂರದೂರಿನಿಂದ ನಡೆದು ಬಂದ ಶ್ರಮ ಬೇರೆ. ಕಲಶ ಕೂಡಿಸಲು ಪಟ್ಟ ದಣಿವು ಬೇರೆ. ಅದರ ಜೊತೆಗೆ ಹೊಟ್ಟೆ ಬೇರೆ ಹಸಿದಿದೆ. ಆಗಲೇ ಶಿಲ್ಪಿಗಳು ಅನೇಕರು ಅವನ ಮೇಲೆ ಕಣ್ಣಿಟ್ಟಿದ್ದಾರೆ. "ಇಷ್ಟು ಚಿಕ್ಕ ವಯಸ್ಸಿನಲ್ಲಿ ಎಂಥಾ ಪ್ರತಿಭೆ ಇವನಿಗೆ! ಅವನನ್ನು ಬೆಳೆಯಲು ಬಿಡಬಾರದು. ತಮ್ಮ ಸಾಧನೆ ಅವನ ಪ್ರತಿಭೆಯ ಮುಂದೆ ಸಣ್ಣದಾಗುವುದು ಬೇಡ. ಈಗಲೇ ಅವನನ್ನು ಮುಗಿಸಿ ಬಿಡಬೇಕು. ಇದು ತಕ್ಕ ಸಮಯ". ಯಾರೋ ಒಬ್ಬ ಧೂರ್ತ ಆಲೋಚಿಸಿದ. ಮನೆಯಿಂದ ತಂದಿದ್ದ ಬುತ್ತಿಗೆ ವಿಷ ಬೆರೆಸಿ ತಂದ. ಧರ್ಮಪದನ ಸನಿಹ ಕುಳಿತು ಅವನ ಮನ ಒಲಿಸಿಕೊಳ್ಳಲು ಯತ್ನಿಸಿದ. ಆತ್ಮೀಯ ಭಾವದಿಂದ ಶುಭ ಹಾರೈಸುತ್ತಾ, ತಂದ ಬುತ್ತಿಯನ್ನು ಅವನ ಕೈಗಿತ್ತು "ಊಟ ಮಾಡು ಮಗು ತುಂಬ ದಣಿದಿದ್ದೀಯ. ಹೊಟ್ಟೆ ಹಸಿದಿರಬೇಕು. ತಗೋ, ನನ್ನ ಹೆಂಡತಿ ರುಚಿರುಚಿಯಾಗಿ ಅಡಿಗೆ ಮಾಡಿ ಕಳಿಸಿದ್ದಾಳೆ. ಅದು ಇವತ್ತು ನಿನಗೆ ಸಲ್ಲುತ್ತಿದೆ. ಹಸಿದವನಿಗೆ ಅನ್ನ ನೀಡಬೇಕಾದ್ದು ಧರ್ಮ. ತಿನ್ನು ಮಗು ತಿನ್ನು". ಆ ಮಾತು ಕೇಳಿದರೆ ಅರ್ಧ ಹೊಟ್ಟೆ ತುಂಬುತ್ತದೆ! ಹಸಿದ ಹೊಟ್ಟೆಗೆ ಅನ್ನಬೇಕು ಎನಿಸುತ್ತದೆ. ಆದರೆ ಅಲ್ಲಿ ತಂದೆ ಮೂರ್ಛೆ ಬಿದ್ದಿದ್ದಾನೆ. ಅವನ ದೃಷ್ಟಿ ತಂದೆಯತ್ತ ಸರಿಯಿತು.

"ಅವನ ಪಾಡಿಗೆ ಅವನು ಎಚ್ಚರಗೊಳ್ಳುತ್ತಾನೆ. ಇಷ್ಟು ದಿನ ಅವನಿಗೆ ತಾನೇ ಒಬ್ಬ ಮಹಾಶಿಲ್ಪಿ ಎಂಬ ಹೆಗ್ಗಳಿಕೆ ಇತ್ತು. ಆದರೆ ಇವತ್ತು ಏನಾಯ್ತು? ಅದಕ್ಕೆ; ಪದವಿ ಬಂದಾಗ ಅಹಂಕಾರ ಪಡಬಾರದು. ನೀನು ತಿನ್ನು ಮಗು". ಅವನು ಮತ್ತೆ ಪುಸಲಾಯಿಸಿದ. ಬುತ್ತಿಯಲ್ಲಿದ್ದ ರೊಟ್ಟಿಯನ್ನು ಧರ್ಮಪದ ಇನ್ನೇನು ಕಚ್ಚಿ ತಿನ್ನಬೇಕು, ಆಕಾಶಮಾರ್ಗವಾಗಿ ಹಾರುತ್ತಾ ಬಂದ ಗಿಡುಗ ಒಂದು, ಬುತ್ತಿಗೆ ಎರಗಿ ರೊಟ್ಟಿಯನ್ನು ಕಚ್ಚಿಕೊಂಡು ಹಾರಿ ಹೋಯಿತು. ಬುತ್ತಿಯಲ್ಲಿದ್ದ ತಿನಿಸು ಮಣ್ಣುಗೂಡಿತು.

"ಅಯ್ಯೋ! ಅನರ್ಥವಾಯಿತು" ಅವನು ಗೊಣಗಿಕೊಂಡ. "ಹೋದರೆ ಹೋಯ್ತು, ಋಣವಿಲ್ಲ. ಅನ್ನದ ಋಣ ಇರಬೇಕಲ್ಲ" ವೇದಾಂತಿಯಂತೆ ಮಾತನಾಡಿದ ಧರ್ಮಪದ. ಬುತ್ತಿ ಕೊಟ್ಟ ಶಿಲ್ಪಿಯ ಮುಖ ಬಿಳಿಚಿತು. ಅವನು ಹೆದರಿದಂತೆ ಕಂಡ. ಯಾಕೆ ಏನಾಯ್ತು ಇವನಿಗೆ ಎಂದು ಯೋಚಿಸುವಷ್ಟರಲ್ಲಿ ರೊಟ್ಟಿ ತಿಂದ ಗಿಡುಗ ರೆಕ್ಕೆಯನ್ನು ಬಡಿದುಕೊಳ್ಳುತ್ತ ಸಾವನ್ನಪ್ಪಿದ್ದನ್ನು ನೋಡಿದ. ಅರ್ಥವಾಯ್ತು ಧರ್ಮಪದನಿಗೆ. ಬುತ್ತಿಗೆ ವಿಷ ಹಾಕಿದ್ದು ಆ ಶಿಲ್ಪಿ ಎಂದು. ಅವನ ಕತ್ತಿನ ಪಟ್ಟಿಯನ್ನು ಹಿಡಿದು "ಯಾಕೋ ದ್ರೋಹಿ, ದುಷ್ಟ ಮಗನೆ! ನನ್ನ ಕೊಲ್ಲೋಕೆ ಹೊರಟಿದ್ದೆ?" ಎಂದು ಕೇಳಬೇಕೆನಿಸಿತು. ನೋಡಿದರೆ ಅವನೆಲ್ಲಿದ್ದಾನೆ. ಆಗಲೆ ಆ ಗುಂಪೊಳಗೆ ನುಸುಳಿ ಮರೆಯಾಗಿ ಹೋಗಿದ್ದಾನೆ. ಇದೀಗ ಧರ್ಮಪದನ ಮನಸ್ಸು ಕೆಟ್ಟಿತ್ತು. ದುಷ್ಟಬುದ್ಧಿಯ ಈ ಜನರ ನಡುವೆ ಇರಬಾರದು ಎನಿಸಿತು. ಅವನು ಎದ್ದು ಓಡತೊಡಗಿದ. ಹೆಜ್ಜೆ ಅಸ್ಥಿರವಾಯಿತು. ಎಲ್ಲಿಗೆಂದು ಅವನಿಗೇ ಗೊತ್ತಿಲ್ಲ.

ಯಾರೋ ಅವನನ್ನು ತಡೆಯಲು ಯತ್ನಿಸಿದರು. "ಓಡಬೇಡ ಮಗು, ನಾನು ವಿಶುವಿನ ಪರಾಮಾಪ್ತ ಸ್ನೇಹಿತ. ಮಹಾರಾಜರು ಕೊಡುವ ಗೌರವವನ್ನು ಸ್ವೀಕರಿಸದೆ ಎಲ್ಲಿಗೆ ಹೊರಟೆ?" "ನೀವು ಹೇಳಿ ನಮ್ಮ ತಂದೆಗೆ: ಮುಕುಂದ ನಿಮ್ಮ ಮಗ ಎಂದು. ಆಗ ಅವರ ಮುಖ ನೋಡಿ. ಅವರ ಮುಖದಲ್ಲಿ ಸಂತೋಷ ಹೆಪ್ಪುಗಟ್ಟಿರುತ್ತದೆ. ನಾನಿನ್ನೂ ಚಿಕ್ಕವನು, ಅವರ ಮುಂದೆ ಮಹಾಶಿಲ್ಪಿಯಾಗುವುದೆಂದರೇನು, ಇಷ್ಟಕ್ಕೆ ಈ ಸಮಾಜ, ಇಲ್ಲಿಯವರೆಲ್ಲಾ ಕೂಡಿ ನನ್ನ ಪ್ರತಿಭೆಯನ್ನು ಮುಕ್ಕಾಗಿಸುತ್ತಾರೆ. ನಾ ಇಲ್ಲಿ ನಿಲ್ಲಲಾರೆ. ಇವರೆಲ್ಲರಿಂದ

©KTBS Not to be republished

ತಪ್ಪಿಸಿಕೊಂಡು ಓಡಬೇಕು". ಧರ್ಮಪದ ಮತ್ತೆ ನಿಲ್ಲಲಿಲ್ಲ. ಅವನ ಓಟದ ರಭಸ ಹೆಚ್ಚಿತು. ಹಿಂದೆ ಹೋದವನು ತಣ್ಣಗೆ ಹಿಂತಿರುಗಿದ. ಅಷ್ಟರಲ್ಲಿ ವಿಶುವಿಗೆ ಎಚ್ಚರವಾಗಿತ್ತು. "ಎಲ್ಲಿ ನನ್ನ ಮಗ ಧರ್ಮಪದ?" "ಅವನು ನಿಮ್ಮ ಮಗ ಅಂತ ಹೇಳಿದವರು ಯಾರು?".

"ನನಗೆ ಗೊತ್ತು. ಅವನು ನನ್ನ ಮಗ. ನನ್ನ ಅಂತರಾತ್ಮ ಹೇಳುತ್ತಿದೆ. ಮಹಾಶಿಲ್ಪಿಯಾಗಲು ಯೋಗ್ಯತೆ ಇರುವವನು ನನ್ನ ಬಿಟ್ಟರೆ ಅವನೊಬ್ಬನೆ. ಎಲ್ಲಿ ಅವನು?"

"ಅವನಿಲ್ಲ ಚಂದ್ರಭಾಗಾ ನದಿಯ ತೀರದಲ್ಲಿ ಓಡುತ್ತಿದ್ದುದನ್ನು ನೋಡಿದೆ. ಅವನು ನದಿಯಲ್ಲಿ ಮುಳುಗಿ ಸತ್ತಿರಬೇಕು". ಮಹಾಶಿಲ್ಪಿ ಮೌನಿಯಾದ. ನಿರಂತರ ಮೌನಿಯಾದ. ಸಕಲ ಬಿರುದಾವಳಿಗಳೊಂದಿಗೆ ರಾಜಾಸ್ಥಾನದಿಂದ ಗೌರವ ಪ್ರಶಸ್ತಿಗಳು ಧರ್ಮಪದನನ್ನು ಅರಸಿಕೊಂಡು ಬಂದವು. ಸ್ವೀಕರಿಸಲು ಅವನೆಲ್ಲಿದ್ದಾನೆ? ವಿಶುವಿಗೆ ಅದನ್ನು ಒಪ್ಪಿಸಲು ಬಂದರು. ಆದರೆ ಅದನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿದ್ದನೆ ವಿಶು! ಇಲ್ಲ. ಅವನ ಎದೆಯಲ್ಲಿ ಮಾತ್ರ ಮಗನನ್ನು ಕುರಿತಂತೆ 'ಮಹಾಶಿಲ್ಪಿ' ಎಂಬ ಪದ ಮೊಳಗುತ್ತಿತ್ತು. ಅದು ಎಂದೆಂದಿಗೂ ನಿಲ್ಲದ ಮಂತ್ರವಾಗಿ.

**ಕೃತಿಕಾರರ ಪರಿಚಯ**



ಪ್ರೇಮಾ ಭಟ್ ಇವರು ಸೆಪ್ಟೆಂಬರ್ ೧೯೪೧ ಉಡುಪಿ ಜಿಲ್ಲೆಯ ಹೆರ್ಗದಲ್ಲಿ ಜನಿಸಿದರು. 'ಕಥಾವರ್ಷ' (೩೬೫ ಸಣ್ಣಕತೆಗಳ ಬೃಹತ್ ಸಂಕಲನ), 'ಕುಂಕುಮಶೋಭಿನಿ', 'ದೇವರಾಣೆ', 'ಮನೆ ಮನ' (ಕಾದಂಬರಿಗಳು) ಮುಂತಾದವು ಇವರ ಕೃತಿಗಳು. ಇವರು ೧೯೯೫ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. 'ಮಹಾಶಿಲ್ಪಿ' ಪಾಠವನ್ನು ಇವರ 'ಕಥಾವರ್ಷ' ಸಂಗ್ರಹದಿಂದ ಆಯ್ದುಕೊಳ್ಳಲಾಗಿದೆ.

**ಪಾಠದ ಹಿನ್ನೆಲೆಯ ಕತೆ :** ಜಗತ್ತಿನ ಶ್ರೇಷ್ಠ ದೇವಾಲಯವೊಂದನ್ನು ಕಟ್ಟಿದ, ಮಹಾಶಿಲ್ಪಿ ಎಂದು ಆಗಲೇ ಪ್ರಸಿದ್ಧನಾಗಿದ್ದ 'ವಿಶು' ಮತ್ತು ಅವನ ಮಗನನ್ನು ಕುರಿತ ಕರುಣ ಕಥೆ. ಈ ದೇವಾಲಯದ ಕೆಲಸ ಪ್ರಾರಂಭವಾಗಿ ಹನ್ನೆರಡು ವರ್ಷಗಳು ಕಳೆದಿವೆ. ಸಾವಿರಾರು ಶಿಲ್ಪಿಗಳ ಶ್ರಮದಿಂದ ದೇವಾಲಯದ ಕೆಲಸ ಮುಗಿದು ಕಲಶವನ್ನು ಕೂರಿಸುವ ಕೆಲಸ ಮಾತ್ರ ಬಾಕಿಯಿದೆ. ಯಾರೇ ಪ್ರಯತ್ನಿಸಿದರೂ, ಕೊನೆಗೆ ಮಹಾಶಿಲ್ಪಿ ವಿಶುವೇ ಪ್ರಯತ್ನ ಮಾಡಿದರೂ ಕಲಶ ಕೂಡಿಸಲು ಆಗಿಲ್ಲ. ದೊರೆಯು ವಿಷಯವನ್ನು ಸಾರ್ವಜನಿಕರ ಪ್ರಯತ್ನಕ್ಕೆ ತೆರೆದಿಟ್ಟು ಭಾರೀ ಬಹುಮಾನವನ್ನೂ ಗೌರವ – ಪ್ರಶಸ್ತಿಗಳನ್ನೂ ಘೋಷಿಸಿದ್ದಾನೆ.

ಈ ಸ್ಪರ್ಧೆಗೆ ಹನ್ನೆರಡು ವರ್ಷಗಳಿಂದ ತಂದೆಯ ಮುಖನೋಡದ ಮಗ ಧರ್ಮಪದನೂ ಹೊರಟಿದ್ದಾನೆ. ಅವನೂ ಶಿಲ್ಪಶಾಸ್ತ್ರ ಪರಿಣಿತ. ಆದರೆ ತನ್ನ ಹೆಸರನ್ನು ವಿಶುವಿಗೆ ತಿಳಿಸಬಾರದೆಂದು ತಾಯಿ ಚಂದ್ರಲೇಖಾ ಮಗನಿಗೆ ಕಟ್ಟಪ್ಪಣೆ ಮಾಡಿದ್ದಾಳೆ. ಮಹಾಶಿಲ್ಪಿಗೆ ತನ್ನ ಮಗನೇ ತನಗೆ ಪ್ರತಿಸ್ಪರ್ಧಿಯೆನ್ನುವುದು ತಿಳಿದರೆ ಅವನಿಗೆ ಆಘಾತವೂ ಅವಮಾನವೂ ಆಗಬಹುದೆಂದು ತಾಯಿಗೆ ಭಯ....

©KTBS Not to be republished

## ಅಭ್ಯಾಸ

ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಸೂಕ್ತ ಉತ್ತರ ಬರೆಯಿರಿ.

೧. ಧರ್ಮಪದನು ವಿಶುವಿನ ಬಳಿಗೆ ಏಕೆ ಬಂದನು?

೨. ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡನು?

೩. ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಯೇನು?

೪. ಧರ್ಮಪದನನ್ನು ನೋಡಿ ವಿಶುವಿನಲ್ಲಿ ಮೂಡಿದ ಭಾವನೆಗಳೇನು?

೫. ವಿಶು ಜ್ಞಾನತಪ್ಪಿ ಏಕೆ ಕೆಳಗುರುಳಿದನು?

೬. ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದ್ದೇಕೆ?

೭. ವಿಶುವು ತನ್ನ ಮುಂದಿರುವವನು ನನ್ನ ಮಗನಲ್ಲವೆಂದು ಏಕೆ ತೀರ್ಮಾನಿಸಿದನು?

೮. ಧರ್ಮಪದನಿಗೆ ಬುತ್ತಿಕೊಟ್ಟ ಶಿಲ್ಪಿಯ ಮುಖ ಏಕೆ ಬಿಳಿಚಿಕೊಂಡಿತು?

೯. ಧರ್ಮಪದನು ತನ್ನ ತಂದೆಗೆ ಏನೆಂದು ಹೇಳಬೇಕೆಂದು ವಿಶುವಿನ ಸ್ನೇಹಿತನಿಗೆ ಹೇಳಿದನು?

೧೦. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು?

* * * * * *

©KTBS Not to be republished